ಅಖಿಲ ಭಾರತ ಪತ್ರಿಕೆ

ಜೂನ್ 2019



# ಪ್ರಾರ್ಥನೆಯ ಪಥ

ಬೆಲೆ : 15/-



ಯಾರೆಲ್ಲ ನಿತ್ಯ ತಂತಮ್ಮ ಹೃದಯ ಮಂದಿರದಿ ಶುದ್ಧಗೊಂಡು
ದೇವನಿಗೆ ನೆಲೆಯನಿತ್ತಿರಲು ಮಾತ್ರ ರಕ್ಷಣೆಯ ಕೃಪೆಯಲಂದಿ;
ಕಾಪಿಡುವ ಅವರ ಮನೋಬಲವನ್ನು ಪ್ರತಿಶೋಧವನ್ನು ನಂಬಿ
ಆದರವರೆಲ್ಲ ಖಚಿತದಲಿ ಸತತ ಚಲನೆಯಲಿ ಇರಲು ನಂಬಿ,

– **ಪುಟ್ಟು ಕುಲಕರ್ಣಿ**

(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 7 ಪುಟ 211)

Photo: Imaging Savitri

**ಅಖಿಲ ಭಾರತ ಪತ್ರಿಕೆ**

**ಜೂನ್ 2019**

ಸಂಪುಟ: 29 ಸಂಚಿಕೆ: 06

# ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ಹೆಗಡೆ–ಕುಮಟಾ – 581 330.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ
ಶ್ರೀ ಪುರುಷೋತ್ತಮ ಗಲಗಲಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## "ಪ್ರಾರ್ಥನೆಯ ಪಥ"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಪ್ರಾರ್ಥನೆ ಎಂದರೇನು?** 7
ಅನು: ಡಾ॥ ಬಿ.ಆರ್. ಭೀಡ

**ಪ್ರಾರ್ಥನೆ ಮತ್ತು ಗಮ್ಯತೆ** 29
ಅನು: ಪ್ರೋ. ಕೆ. ವೀರಭದ್ರಪ್ಪ

**ಪ್ರಾರ್ಥನೆ ಮತ್ತು ಆಧ್ಯಾತ್ಮಿಕ ಜೀವನ** 37
ಅನು: ಡಾ॥ ಮಹಾದೇವ ಸಕ್ರಿ

**ಸಾಧನಾ ಸೂತ್ರ** 46
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 60



**"ಈ ಹಂಸವು ಪ್ರತಿಯೊಬ್ಬ ವ್ಯಕ್ತಿಯ ಆತ್ಮದ ಪ್ರತಿಮೆಯಾಗಿದ್ದು ಇದೇ ಅಂತರಾತ್ಮವೂ ಆಗಿದ್ದು ದೈವವೂ ಆಗಿದೆ".**

ಭಾರತೀಯ ಪ್ರತಿಮಾತ್ಮಕ ವಿಶ್ಲೇಷಣೆಯಲ್ಲಿ ಈ 'ಹಂಸ'ವು ಪ್ರತಿಯೋರ್ವನ ಆತ್ಮವೆಂದು ಆರಾಧಿಸಲಾಗುತ್ತಿದೆ. ಇದು ಹೃತ್–ಶಯ ಪುರುಷವಾಗಿದ್ದು, ಆ ದೈವೀ ಅಂಶವಾಗಿದ್ದು ಅದು ಮತ್ತೆ ದಿವ್ಯತ್ವವಾಗುವದರ ಸಲುವಾಗಿ 'ಅಲ್ಲಿಂದ' ಅವತರಣಗೊಂಡು ಬಂದು, ಮತ್ತೆ "ಅಲ್ಲಿಗೇ" ಆರೋಹಣದ ಮೂಲಕ ಮೂಲ–ನೆಲೆಗೆ ಸಾಗುತ್ತದೆ.

## ಸಂಪಾದಕರ ಟಿಪ್ಪಣಿ

ಕೆಲವು ಬುದ್ಧಿಜೀವಿಗಳಲ್ಲಿ, ಈ ಪ್ರಾರ್ಥನೆಯನ್ನು ಅವಗಣನೆ ಮಾಡಿ, ಅದೊಂದು ಮತೀಯ ಮತ್ತು ಕೀಳಿರಿಮೆಯನ್ನು ತುಂಬುವ ಕ್ರಿಯೆಯೆಂದು, ಕಡೆಗಣಿಸಿ ನೋಡುವ ಒಂದು ಸಾಮಾನ್ಯ ಮನೋಭಾವವಿದೆ. ಆದಾಗ್ಯೂ ಮನುಕುಲದ ಆಧ್ಯಾತ್ಮಿಕ ಇತಿಹಾಸದ ವಿಕಸನಕ್ಕೆ ಮಾತ್ರ, ಈ ಪ್ರಾರ್ಥನೆಯು, ಆಧ್ಯಾತ್ಮಿಕ–ಜೀವನ ವಿಧಾನದ ಅಂತರ್ಯದ ಅಂಶವಾಗಿದೆ. ಈ ಪ್ರಾರ್ಥನೆಗಳ ಹಿಂದೆ, ಅಲ್ಲಿ ಔಚಿತ್ಯಪೂರ್ಣವಾದ ಮತ್ತು ತರ್ಕಬದ್ಧ ಪ್ರಕ್ರಿಯೆಯೊಂದು ಇರುತ್ತದೆ. ಯಾವುದನ್ನು ಮನಸ್ಸು ನೇರವಾಗಿ ಗುರುತಿಸಲು ಅಸಮರ್ಥವಾಗಿರುತ್ತದೆಯೋ, ಆದರೆ ಹೃದಯವು ಮಾತ್ರ ತತ್–ಕ್ಷಣವೇ ಇದನ್ನು ಶೋಧಿಸಿ ಸ್ಪಂದಗೊಳ್ಳುತ್ತದೆಯೋ, ಅಂತಹ ಪ್ರಗಾಢವಾದ ನಿಹಿತಾರ್ಥಗಳನ್ನು ರಹಸ್ಯಮಯ ಬೋಧಾತೀತವೊಂದು (ಮಿಸ್ಟಿಕ್ ಟ್ರುಥ್) ಅಲ್ಲಿರುತ್ತದೆ.

ಈ ಸಂಚಿಕೆಯಲ್ಲಿ, ಪ್ರಾರ್ಥನೆಯ ಹಲವು ಆಯಾಮಗಳನ್ನು, ಅವುಗಳ ಆಧ್ಯಾತ್ಮಿಕ ವಿಕಸನದ ಹಂತದಲ್ಲಿ ಹಾಗೂ ಪೂರ್ಣಯೋಗದ ಪ್ರಕಾಶದ ಹಿನ್ನೆಲೆಯಲ್ಲಿ ರೂಪಿಸಲು ಯತ್ನಿಸಲಾಗಿದೆ.

## ಸಂಪಾದಕೀಯ

ಆತ್ಮ ಮತ್ತು ಪರಮಾತ್ಮನ ಮಧ್ಯೆ ಸಂಪರ್ಕ ಸೇತುವಾಗಿ ಈ ಪ್ರಾರ್ಥನೆ ಇದೆ. ಆತ್ಮದ ಅಭೀಪ್ಸೆಗಳ ಸ್ಪಂದನವು ನಾದದ ಅಲೆಗಳಾಗಿ ವಿಕಸನಗೊಳ್ಳುವದೇ ಪ್ರಾರ್ಥನಾ ಪಥವಾಗಿದೆ. ಹೀಗಾಗಿ ನಾದದ ಅಲೆಯು ಪ್ರಾರ್ಥನೆಯೂ ಹೌದು. ಕೇವಲ ದುಃಖದಲ್ಲಿದ್ದಾಗ ಮಾತ್ರ ಆರ್ತತೆಯಿಂದ ರಕ್ಷಣೆಗಾಗಿ ಹಂಬಲಿಸಿ ಹಂಬಲಿಸಿ ಮೊರೆಯಿಡುವ ಕೆಲವು ಪ್ರಾರ್ಥನೆಗಳು, ಒಮ್ಮೆ ಆ ದುಃಖವು ಶಮನವಾಗುತ್ತಲೇ ಮೂಲಧ್ಯೇಯವನ್ನು ಮರೆಯುವ ಸ್ವಭಾವವನ್ನೂ ಹೊಂದಿರುತ್ತವೆ. ಫಲಾಪೇಕ್ಷೆಯಿಂದ ಸಲ್ಲಿಸಲ್ಪಡುವ ಯಾವುದೇ ಬೇಡಿಕೆಯು ಪ್ರಾರ್ಥನೆ ಆಗಲಾರದು. ಅದೂ ಪರಿಶುದ್ಧ ಪಥದಲ್ಲಿಯೂ ಸಹಿತ ನಡೆಯುವ "ಲೌಕಿಕ ವ್ಯವಹಾರ"ದ ಘಟನೆಯಾಗಿ ರೂಪಿತವಾಗಿರುತ್ತದೆ. ಆದರೂ ಈ ರೀತಿಯ ಫಲಾಪೇಕ್ಷೆಯಿಂದ ಮಂಡಿಸಲ್ಪಡುವ ಬೇಡಿಕೆಗಳು "ಪ್ರಾರ್ಥನೆಯ ಪಥ"ದಲ್ಲಿ ಪ್ರಥಮ ಹೆಜ್ಜೆಗಳು ಎನ್ನುವದು ಅಷ್ಟೇ ಮುಖ್ಯ ಸಂಗತಿಯೂ ಆಗಿದೆ.

ವಿಶ್ವ ರಹಸ್ಯವನ್ನು ಅರಿಯಲು ಮನುಕುಲಕ್ಕೆ ಇರುವ ತುಡಿತ, ಅದನ್ನು ಅಭಿವ್ಯಕ್ತಗೊಳಿಸುತ್ತಿರುವ ಪಥದಲ್ಲಿ ಹಂತಗಳು ಹಲವು ಸವಾಲುಗಳನ್ನು, ವ್ಯಕ್ತಿಯ ಆತ್ಮಶೋಧಕ್ಕಾಗಿಯೇ ರೂಪಿಸಿರುತ್ತದೆ. ಗುರಿ ಹೇಗೆ ಪರಿಶುದ್ಧ ಗಮ್ಯವೋ ಹಾಗೆಯೇ ಪಥವೂ ಅಷ್ಟೇ ಪರಿಶುದ್ಧವಾದ ಹಂಥದಲ್ಲಿದ್ದಲ್ಲಿ ಮಾತ್ರ "ಪ್ರಾರ್ಥನೆಯ ಗಮ್ಯ"ವಾದ ಆ ವಿಶ್ವಪ್ರೇಮದ ಧಾರೆ ಸತತವಾಗಿ ದೊರೆಯುತ್ತದೆ. ಇದನ್ನೇ ರೀತಿಯ ಪಥ ಮತ್ತು ಗಮ್ಯದ ಸುಸಂಬದ್ಧವಾದ ಸಂರಚನೆಯ ಜೀವನ ವಿಧಾನವನ್ನು ರೂಪಿಸಿಕೊಳ್ಳಲು, ಹಾಗೂ ಆಧ್ಯಾತ್ಮಿಕ ಜೀವನದ ಗತಿ ವಿಧಾನಗಳನ್ನು ಅರಿತುಕೊಳ್ಳಲೂ ಸಹಿತ ಈ ಪ್ರಾರ್ಥನಾ ಕ್ರಮವೇ ಮಾರ್ಗದರ್ಶನ ನೀಡುತ್ತಿದೆ. ಸಂಪೂರ್ಣ ಶರಣಾಗುವದು ಎಂದರೆ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವದು ಎಂದರ್ಥವಲ್ಲ. ಆ ವಿಶ್ವಪ್ರೇಮದ ಸ್ಪಂದಕ್ಕೆ ನಮ್ಮ ಸ್ಪಂದನಗಳನ್ನೂ ಸಮೀಕರಿಸಿಕೊಳ್ಳುವ ಹಂತವಿದು. ಅಲ್ಲಿ ತಾದಾತ್ಮ್ಯತೆ ಇರುತ್ತದೆ; ಏಕತೆ ಇರುತ್ತದೆ. ಅಲ್ಲಿರುವದು ನಾದಪೂರ್ಣವಾದ "ಲಯ".

ಈ "ಪಥ"ವನ್ನು ಅರಸುವ ಪ್ರಯತ್ನಕ್ಕೆ, ಮುಗ್ಧನಾಗಿದ್ದ ಮನುಜ, ಜ್ಞಾನದ ವಿಕಸನದ ಹಂತ ಹಂತಗಳಲ್ಲಿ, ಆ ಮುಗ್ಧತೆಯ ಸ್ಥಾನದಲ್ಲಿ "ಪ್ರಜ್ಞೆ"ಯನ್ನು ಆವಾಹಿಸಿಕೊಂಡು, ಗುರಿಯನ್ನು ಅರಸುತ್ತಾ ಹೊರಟಂತೆ, ಈ ಪಥವು "ಚೈತನ್ಯದ

ನೆಲೆಗೆ” ಸಾಗುತ್ತಿರುವದನ್ನು ದರ್ಶಿಸಿದ. ಆ ಚೈತನ್ಯಕ್ಕೂ ತನ್ನ ಹೃದಯಾಂತರ್ಗತ–ವಾಗಿರುವ ಚೇತನಕ್ಕೂ ಇರುವ ಅಪೂರ್ವವಾದ ಸಾಮ್ಯತೆಯನ್ನು ಅನುಭಾವಿಸಿದ ಘಳಿಗೆಯಲ್ಲಿ, ತಾನೇ ತಾನಾಗಿ ಹೊರಹೊಮ್ಮಿದ “ಧ್ವನಿಪೂರ್ಣ ನಾದಮಯ ಅಭಿವ್ಯಕ್ತಿ”ಯೇ ಪ್ರಾರ್ಥನೆ ಎನ್ನುವ ಆವರಣದಲ್ಲಿ ತನ್ನ ಕೃತಜ್ಞತೆಗಳನ್ನು ಸಲ್ಲಿಸಲು ಮತ್ತೆ ಮತ್ತೆ ಪ್ರಯತ್ನಿಸುತ್ತಾನೆ. ಈ ಪಥವು ಮತ್ತೂ ಮತ್ತೂ ಮುಂದುವರೆಯುತ್ತ ಅನಂತತೆಯತ್ತ ಕರೆದೊಯುತ್ತದೆ.

ಯಾವುದನ್ನು (ಗಮ್ಯತೆಯನ್ನು) ತಿಳಿದುಕೊಳ್ಳಲು ಯಾವುದರ (ಗಮ್ಯದೆಡೆಯ ಪಥದ) ಮೇಲೆ (ಗಮ್ಯದೆಡೆ ಮತ್ತು ಪಥದೆಡೆ) ಗಮನವಿಟ್ಟು ಸಾಗಬೇಕಾಗಿದೆಯೋ “ಅದೇ” ಜೀವನದ ವಿಧಾನವಾಗುತ್ತದೆ. ಹೀಗಾಗಿ ಇದನ್ನು ಕಂಡುಕೊಳ್ಳಲು ಇರುವ “ಪಥವು” ಯಾವಾಗಲೂ ಸಾಧನಾ ಪಥವಾಗಿರುತ್ತದೆ.



## ದೇವರು ಏನನ್ನೂ ಉಪೇಕ್ಷಿಸುವದಿಲ್ಲ

ಆಸ್ತಿಕನೋರ್ವನನ್ನು, ಅವನು ರೂಪಾರಾಧನೆಯಲ್ಲಿ ತೊಡಗಿರುವ ವ್ಯಕ್ತಿಯನ್ನಾಗಿ, ಮೂರ್ತಿಪೂಜಕನನ್ನಾಗಿ ಮತ್ತು ಬಹುದೇವತಾವಾದಿ ಎಂದೆಲ್ಲಾ ತಿಳಿದು, ಅವನನ್ನು ಖಂಡನೆಯ ಹಂತದಲ್ಲಿಯೇ ಗಮನಿಸಲಾಗುತ್ತಿದೆ; ಇನ್ನು ಅದ್ವೈತಿಯನ್ನೂ ಸಹಿತ ಇದೇ ರೀತಿಯ ಕಡೆಗಣನೆಯಲ್ಲಿ, ಆಸ್ತಿಕನೋರ್ವನು ಲೌಕಿಕ ಬಂಧದ ನಿರ್ಬಂಧನೆಯಲ್ಲಿಯೇ ಆರಾಧಿಸುತ್ತಿರುವ ಅನಭಿಜ್ಞತೆಯ ರೀತಿಗಿಂತ ಭಿನ್ನವಾಗಿ, ಒಂದು ಪ್ರಶಾಂತ ಹಾಗೂ ಸಹನಾ ಸ್ವರೂಪದ ಹಿನ್ನಲೆಯಲ್ಲಿ ರೂಪಿಸಲಾಗಿದೆ.

ಆದರೆ ನಮಗೆ ಕಾಣಿಸುತ್ತಿರುವದೇನೆಂದರೆ, ದೇವರು ಯಾವ ಕಾರಣಕ್ಕೂ ಏನನ್ನೂ ಉಪೇಕ್ಷೆ ಮಾಡುವದಿಲ್ಲ. ಯಾವ ರೀತಿಯಲ್ಲಿ ಒಂದು ಮುಗ್ಧ ಶಿಶುವು ಪ್ರಾರ್ಥನೆಯ ಮೂಲಕವಾಗಿ ಏನನ್ನು ಪ್ರಾರ್ಥಿಸಿ ಪಡೆದುಕೊಳ್ಳುತ್ತದೆಯೋ, ಅದೇ ರೀತಿಯಲ್ಲಿಯೇ ಪ್ರತಿಯೊಂದು ಆತ್ಮವೂ (ಸರ್ವ ವಸ್ತು–ವಿಷಯಗಳ ಆತ್ಮವೂ) ಅದೇ ತೆರನಾದ ಆನಂದವನ್ನು ಪಡೆದುಕೊಳ್ಳುತ್ತವೆ. ಒಂದು ಚಿತ್ರಿತ (ಮುದ್ರಿತ) ಚಿತ್ರಪಟದ ಎದುರು ಒಂದು ಹೂವನ್ನೋ, ದಳವನ್ನೋ ಇಲ್ಲವೇ ಪತ್ರ(ಎಲೆ)ವನ್ನೋ ಸಮರ್ಪಿಸುವದೂ ಸಹಿತ, ತತ್ತ್ವಜ್ಞಾನಿಯೋರ್ವನು ತನ್ನ ಚಿಂತನಗಳ ಉತ್ತುಂಗದಲ್ಲಿ ಹೇಗೆ ಅವರ್ಣನೀಯವಾದ, ಮತ್ತು ಇನ್ನೂ ಜ್ಞಾತಗೊಳ್ಳದ ಹಂತವನ್ನು ಅರಿತುಕೊಳ್ಳಲು ಸಮರ್ಥನಾಗುತ್ತಾನೆಯೋ ಅದೇ ರೀತಿಯಲ್ಲಿಯೇ ಪತ್ರ–ಪುಷ್ಪವನ್ನು ಸಮರ್ಪಿಸುವವನೂ ಇರುತ್ತಾನೆ. ತತ್ತ್ವಜ್ಞಾನಿಯು ಈ ಮೂಲಕ ಅನಂತಾನಂತವಾಗಿ, ಯಾವುದೇ ಗಡಿಗಳಿರದ ಸ್ಥಿತಿಯ ಸಾಕ್ಷಾತ್ಕಾರದ ಎಡೆಗೆ, ವ್ಯಾಪ್ತಿಗೊಳ್ಳಲು, ವಿಕಸನಗೊಳ್ಳಲು, ಊರ್ಧ್ವತೆಯನ್ನು ತಲುಪಲು ಎಷ್ಟು ಸಾಧ್ಯವೋ, ಅಷ್ಟು ಸಹಕಾರಿಯಾಗಿಯೇ ಮಾರ್ಗದರ್ಶಿಯಾಗಿರುತ್ತಾನೆ. ಮತ್ತು ಈ ಮೂಲಕ ರೂಪ–ರೂಪಾಂತರಗಳನ್ನು 'ದೃಷ್ಟಿಸುವ' 'ದೃಷ್ಟಾರರ' ಸಾಮರ್ಥ್ಯವನ್ನೂ ಪಡೆದುಕೊಂಡಿರುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 1/573 – ಶ್ರೀ ಅರವಿಂದರು**

# ಪ್ರಾರ್ಥನೆ ಎಂದರೇನು?

– ಅನುವಾದ: ಡಾ॥ ಬಿ.ಆರ್. ಭೀಡ

## ಪ್ರಾರ್ಥನೆ ಹೃದಯದಿಂದ ಬರಬೇಕು

ಶ್ರೀಮಾತೆ ನಿಮಗೆ ಏನು ಹೇಳಬಯಸುತ್ತಿದ್ದಾರೆಂಬುದನ್ನು ನೀನು ಸರಿಯಾಗಿ ಗ್ರಹಿಸಿಲ್ಲವೆಂದು ನನಗನಿಸುತ್ತದೆ. ಎಲ್ಲಕ್ಕಿಂತ ಮೊದಲು, ಧ್ಯಾನ ಮತ್ತು ಪ್ರಾರ್ಥನೆಗಳೇನೂ ಉತ್ತಮವಲ್ಲವೆಂದು ಆಕೆ ಹೇಳಲಾರಳು,– ಅದೂ ನಾವಿಬ್ಬರೂ ಈ ಯೋಗದಲ್ಲಿ ಅವುಗಳಿಗೆ ಅಷ್ಟು ಮಹತ್ವ ನೀಡುತ್ತಿರುವಾಗ ಹಾಗೆ ಹೇಳಲು ಹೇಗೆ ಸಾಧ್ಯ? ಆಕೆ ಹೇಳಿದ್ದೇನೆಂದರೆ ಭಾವನೆಯ ಉತ್ಕಟತೆ, ಅಭೀಪ್ಸೆಯ ತೀವ್ರತೆಯಿಂದ ಹೃದಯದ ಮೂಲಕ ಪ್ರಾರ್ಥನೆ ಹುಟ್ಟಬೇಕು. ಜಪ, ಧ್ಯಾನ ಇವು ಆಂತರಿಕ ಒತ್ತಡದಿಂದ ಆನಂದದೊಂದಿಗೆ ಜೀವಂತವಾಗಿ ಮೂಡಿಬರಬೇಕು. ಯಾಂತ್ರಿಕವಾಗಿ, ಮಾಡಿ ಮುಗಿಸಬೇಕಾದ ಕರ್ತವ್ಯ ಎಂಬಂತೆ ಮಾಡುವುದಾದರೆ ಅವು ನಿಧಾನವಾಗಿ ಉತ್ಸಾಹ ಕಳೆದುಕೊಳ್ಳುತ್ತವೆ, ಬರುಬರುತ್ತ ಶುಷ್ಕವಾಗುತ್ತ ಕೊನೆಗೆ ನಿಷ್ಫಲವಾಗಿ ಹೋಗುತ್ತವೆ. ನಿಶ್ಚಿತ ಪರಿಣಾಮವೊಂದನ್ನು ಬಯಸಿ, ನೀನು ಹೆಚ್ಚು ಹೆಚ್ಚು ಜಪ ಮಾಡುತ್ತಿರುವಿ ಎಂದು ನನಗನಿಸುವುದೆಂದು ನಾನೊಂದು ಸಲ ನಿನಗೆ ಹೇಳಿದ್ದೇನಲ್ಲ, ಅದರ ಅರ್ಥ ಕೂಡ ಇದೇ. ನಿನ್ನೊಳಗೆ ಆಧ್ಯಾತ್ಮಿಕ ವಾತಾವರಣ ಬೆಳೆಯಬೇಕು, ಅಂತರಾತ್ಮಿಕ, ಮಾನಸಿಕ ಇವೆಲ್ಲ ಬೆಳೆಯಬೇಕು ಎಂದು ನಾನು ನಿನಗೆ ಹೇಳಿದ್ದರ ಉದ್ದೇಶ ಕೂಡ ಇದುವೇ ಆಗಿದೆ. ಏಕೆಂದರೆ ಅಂತರಾತ್ಮವು ಸಾಧನೆಯ ಸಮ್ಮುಖದಲ್ಲಿ ಬಂದು ನಿಂತಿತೆಂದರೆ, ಆಗ ಪ್ರಾರ್ಥನೆಯಲ್ಲಿ ಜೀವಂತಿಕೆಯ, ಆನಂದದ, ಅಭೀಪ್ಸೆಯ, ಹುಡುಕಾಟದ ಕೊರತೆ ಇರುವುದಿಲ್ಲ. ಅಭಿರುಚಿ ಅಥವಾ ಆಸಕ್ತಿಯ ಕ್ಷೀಣತೆ ಯಾವ ಕಾಲಕ್ಕೂ ಆಗುವುದಿಲ್ಲ. ಮನಸ್ಸು ಶಾಂತವಾಗಿರುವಾಗ, ಅಂತರ್ಮುಖ–ವಾಗಿರುವಾಗ, ಪರಮಾತ್ಮನೆಡೆ ಮುಖ ಮಾಡಿರುವಾಗ ಭಕ್ತಿಯ ಪ್ರವಾಹ ನಿರಂತರವಾಗಿರುತ್ತದೆ. ಧ್ಯಾನವೆನ್ನುವುದು ಒಂದು ಕ್ರಿಯೆ, ಜ್ಞಾನದ ಮೂಲಕ ಜ್ಞಾನದೆಡೆಗೆ ಸಾಗುವ ಕ್ರಿಯೆ. ಅದು ವೈಚಾರಿಕವಾದುದೇ ಹೊರತು ಭಾವನಾತ್ಮಕವಾದುದಲ್ಲ. ನಿಮಗೆ ಧ್ಯಾನ ಬೇಕೆನ್ನುವುದಾದರೆ ಜ್ಞಾನದೆಡೆಗೆ ನಿರಾಸಕ್ತಿ ತಾಳುವಂತಿಲ್ಲ. ಹೃದಯದಲ್ಲಿ ಏಕಾಗ್ರತೆ ಸಾಧಿಸುವುದು ಧ್ಯಾನವಲ್ಲ; ಅದು ಭಗವಂತನಿಗಾಗಿ ನೀಡುವ ಕರೆ, ಪ್ರಿಯಕರನಿಗಾಗಿ ಇಡುವ ಮೊರೆ. ಈ ಪೂರ್ಣಯೋಗವು ಕೇವಲ ಜ್ಞಾನಯೋಗವಲ್ಲ,– ಜ್ಞಾನವು ಅದರ ಅನೇಕ

ಸಾಧನಗಳಲ್ಲಿ ಒಂದು. ಆದರೆ ಅದರ ಆಧಾರ ಮಾತ್ರ ಆತ್ಮ ಸಮರ್ಪಣೆ, ಶರಣಾಗತಿ, ಭಕ್ತಿ. ಇದು ಹೃದಯವನ್ನಾಧರಿಸಿದೆ. ಈ ಆಧಾರವಿಲ್ಲದೇ ಏನನ್ನೂ ಸಾಧಿಸಲಾಗದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/226**

**ಅಭೀಪ್ಸೆಯ ಆಧಾರ**

ನಿಜವಾದ ಅಭೀಪ್ಸೆಯು ತಲೆಯಿಂದ (ವಿಚಾರದಿಂದ) ಬರುವುದಿಲ್ಲ. ಅದು ವಿಚಾರಗಳ ಮೂಲಕ ಅಭಿವ್ಯಕ್ತವಾಗುತ್ತದಾದರೂ, ಹೃದಯದೊಳಗಿನ ಅಗ್ನಿ ಜ್ವಾಲೆಯಂತೆ ಹುಟ್ಟಿ ಬರುತ್ತದೆ. ಶ್ರೀ ಅರವಿಂದರು ವೇದಗಳ ಮೇಲೆ ಬರೆದಿರುವ ಲೇಖನಗಳನ್ನು ಓದಿರುವಿಯೋ ಇಲ್ಲವೋ ನನಗೆ ಗೊತ್ತಿಲ್ಲ. ಅವುಗಳಲ್ಲಿ ಅವರು ಅತಿ ಸ್ಪಷ್ಟವಾಗಿ ಹೇಳುತ್ತಾರೆ, ವೇದೋಕ್ತ ಪಾಠಗಳು ಮನಸ್ಸಿನ ಮೂಲಕ ರಚಿತವಾದುವುಗಳಲ್ಲ. ಹಾಗೆ ನೋಡಿದರೆ, ಜನರು ತಿಳಿದಂತೆ ಅವು ಪ್ರಾರ್ಥನೆಗಳು ಕೂಡಲ್ಲ. ಅವು ಅಭೀಪ್ಸೆಯ ಪ್ರಕಟಣೆ, (ಹೃದಯದಿಂದ ಬರುವ ಅಗ್ನಿ ಜ್ವಾಲೆಯಂತೆ, ತಾನಾಗಿ ಅಭಿವ್ಯಕ್ತವಾಗುವ ಅಭೀಪ್ಸೆಯಂತೆ. ಹೃದಯವೆಂದರೆ ಭೌತಿಕ ಹೃದಯವಲ್ಲ, ಸರಿಯಾಗಿ ಹೇಳಬೇಕೆಂದರೆ ವ್ಯಕ್ತಿಯ ಅಂತರಾತ್ಮಿಕ ಕೇಂದ್ರ) ಅವು ವಿಚಾರ ಮಾಡಿ ಬರೆದವುಗಳಲ್ಲ, ಹಾಗೆ ನೋಡಿದರೆ ಶಬ್ದಗಳು ಅನುಭವಕ್ಕೆ ಜೋಡಣೆ ಮಾಡಿದವುಗಳಲ್ಲ, ಅನುಭವವೇ ಸಂಪೂರ್ಣವಾಗಿ ನಿಖರವಾಗಿ ಅವೇ ಶಬ್ದಗಳ ಮೂಲಕ ಬಂದ ಹಾಗೆ, ಅಲ್ಲಿನ ಯಾವ ಶಬ್ದವನ್ನು ಬದಲಾಯಿಸಲಾಗದು, ಅಭೀಪ್ಸೆಯ ನಿಜವಾದ ಸ್ವರೂಪವೇ ಅದು. ಅಭೀಪ್ಸೆಯನ್ನು ಪ್ರಕಟಿಸಲು ನೀವು ಶಬ್ದಗಳಿಗಾಗಿ ಪರದಾಡಬೇಕಾಗಿಲ್ಲ, ಅದು ತಾನಾಗಿಯೇ, ಅದಾಗಲೇ ಹೊತ್ತಿಕೊಂಡಿರುವ ಅಗ್ನಿಜ್ವಾಲೆಯಂತೆ ಉಕ್ಕಿ ಬಂದುಬಿಡುತ್ತದೆ. ಶಬ್ದಗಳಿದ್ದರೆ (ಕೆಲಸಲ ಇರುವುದಿಲ್ಲ) ಅವುಗಳನ್ನು ಬದಲಿಸಲಾಗದು, ಹಿಂದು ಮುಂದು ಕೂಡ ಮಾಡಲಾಗದು. ಪ್ರತಿ ಶಬ್ದ ಅದರ ಸರಿಯಾದ ಜಾಗೆದಲ್ಲೇ ಇರುತ್ತದೆ, ಸರಿಯಾಗಿಯೇ ಇರುತ್ತದೆ. ಅಭೀಪ್ಸೆಯು ರೂಪಗೊಂಡಿತೆಂದರೆ ಅದು ನಿಶ್ಚಿತವಾದ, ಸ್ಪಷ್ಟವಾದ ರೂಪದಲ್ಲಿಯೇ ಇರುತ್ತದೆ, ಒಂದು ಶಬ್ದವನ್ನು ಕೂಡ ಆಚೀಚೆ ಮಾಡದಷ್ಟು ಕರಾರುವಕ್ಕಾಗಿರುತ್ತದೆ. ಬಯಕೆಯು ಯಾವಾಗಲೂ ವ್ಯಕ್ತಿಯನ್ನು ಕೆಳಕ್ಕೆಳೆಯುವಂಥದಾಗಿರುತ್ತದೆ, ಆದರೆ ಅಭೀಪ್ಸೆಯು ತಾನಾಗಿ ಹುಟ್ಟಿದ್ದು ತನ್ನನ್ನು ಸಮರ್ಪಿಸಿಕೊಳ್ಳುವ ಭಾವ ಹೊಂದಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/136** **– ಶ್ರೀಮಾತೆ**

ಈ ಪೂರ್ಣಯೋಗದಲ್ಲಿ ಯಾರಿಗೂ, ಯಾರು ಸಾಂಪ್ರದಾಯಿಕವಾದ ರೀತಿಯಲ್ಲಿ ದೀಕ್ಷೆ ನೀಡುವುದಿಲ್ಲ. ಯಾರಿಗೆ ಅಂತರಂಗದಿಂದ ಕರೆ ಬಂದಿದೆಯೋ, ಶ್ರೀ ಅರವಿಂದರು ರೂಪಿಸಿದ ಪಥದಲ್ಲಿ ಸಾಗಲು ಯಾರು ಆಂತರಿಕವಾಗಿ ಆಯ್ಕೆ ಮಾಡಿಕೊಂಡಿದ್ದಾರೆಯೋ ಅಂಥವರೆಲ್ಲರನ್ನು ಶ್ರೀಮಾತೆ ಸ್ವೀಕರಿಸುತ್ತಾರೆ. ಆಕೆ ಸ್ವೀಕಾರ ಮಾಡಿದರೆ, ಸಮ್ಮತಿ ನೀಡಿದರೆ ಸಾಕು. ಆಕೆಯ ಮೂಲಕ ಹರಿದುಬರುವ ದಿವ್ಯಶಕ್ತಿಗೆ ಯಾರು ಉನ್ಮುಖರಾಗಿರುತ್ತಾರೋ, ಯಾರು ಅದರ ಕಾರ್ಯವನ್ನು ಸೂಕ್ಷ್ಮವಾಗಿ ಅನುಭವಿಸುತ್ತಾರೋ ಅಂಥವರೆಲ್ಲರೂ ಕರೆ ಬಂದವರು ಅಥವಾ ಆಯ್ಕೆ ಮಾಡಿಕೊಳ್ಳಲ್ಪಟ್ಟವರು ಎಂದು ಹೇಳಬಹುದು. ಯಾರು ಯಾವುದೇ ರೀತಿ ಸಾಧನೆ ಮಾಡುತ್ತಿರಲಿ, ಅದನ್ನು ಶ್ರದ್ಧೆಯಿಂದ ಮುಂದುವರಿಸುತ್ತ, ಕಾಲಾಂತರದಲ್ಲಿ ದಿವ್ಯಶಕ್ತಿಗೆ ಪ್ರತಿಸ್ಪಂದಿಸುತ್ತ, ಅದನ್ನು ಸ್ವೀಕರಿಸಲು ಸಿದ್ಧರಾಗಬಹುದು. ಅಂಥವರು ಈ ಪೂರ್ಣಯೋಗಕ್ಕೆ ಅಧಿಕಾರಿಗಳೆಂದು ಹೇಳಬಹುದು, ಅದೇ ಅವರ ಲಕ್ಷಣ. ಪ್ರಾರ್ಥನೆ ಮತ್ತು ಅಭೀಪ್ಸೆ ಇವೆರೆಡೇ ಸಾಕು, ನಿಜವಾದ ಶ್ರದ್ಧೆ ಮತ್ತು ಅಂತರಂಗದ ಕರೆ ಇದ್ದರೆ ಇಷ್ಟು ಸಾಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/542 – ಶ್ರೀ ಅರವಿಂದರು**

## ಪ್ರಾರ್ಥನೆ ಹೃದಯದಿಂದ ಉತ್ಸಾಹದಿಂದ ಬರಬೇಕು

*"ನಾನು ಅತ್ಯಂತ ಉತ್ಸಾಹದಿಂದ, ತೀವ್ರತೆಯಿಂದ ಧ್ಯಾನ ಮತ್ತು ಪ್ರಾರ್ಥನೆ ಕೂಡ ಭಕ್ತಿಯಿಂದ ತುಂಬಿದೆ. ಆದರೆ ಕೆಲ ಸಮಯದ ನಂತರ – ಕೆಲಸಲ ಅತಿ ಕಡಿಮೆ, ಕೆಲಸಲ ಅತಿ ಹೆಚ್ಚು ಕಾಲ – ಅಭೀಪ್ಸೆ ಯಾಂತ್ರಿಕವಾಗಿ ಬಿಡುತ್ತದೆ, ಕೇವಲ ಶಾಬ್ಧಿಕವಾಗಿ ಬಿಡುತ್ತದೆ. ಏನು ಮಾಡಬೇಕು?"*

ಪ್ರತಿದಿನ ತಾಸುಗಟ್ಟಲೆ ಧ್ಯಾನ ಮಾಡುವುದಾಗಿ ಯಾರು ಹೇಳುತ್ತಾರೋ, ಹಾಗೂ ಇಡೀ ದಿನ ಪ್ರಾರ್ಥನೆಯಲ್ಲಿಯೇ ಕಳೆಯುತ್ತಾರೋ, ನನಗನಿಸುವ ಮಟ್ಟಿಗೆ, ಅದರಲ್ಲಿ ನಾಲ್ಕರಲ್ಲಿ ಮೂರು ಭಾಗ ಯಾಂತ್ರಿಕವಾಗಿಯೇ ಇರುತ್ತದೆ. ಅಂದರೆ ಅದು ತನ್ನ ಶ್ರದ್ಧೆಯನ್ನು ಕಳೆದುಕೊಳ್ಳುತ್ತದೆ, ಏಕೆಂದರೆ ಮಾನವನ ಸ್ವಭಾವ ಅದಲ್ಲ ಮತ್ತು ಅವನ ಮನಸ್ಸು ಅದಕ್ಕಾಗಿ ಮಾಡಲ್ಪಟ್ಟಿಲ್ಲ.

ಏಕಾಗ್ರತೆ ಮತ್ತು ಧ್ಯಾನ ಮಾಡಬೇಕಾದರೆ ನಿರ್ದಿಷ್ಟ ಕಸರತ್ತು ಬೇಕಾಗುತ್ತದೆ. ನಾನು ಅದನ್ನು ಮನೋದೈಹಿಕ ವ್ಯಾಯಾಮ ಎಂದು ಕರೆಯುತ್ತೇನೆ.

ನಿಜವಾಗಿಯೂ ಅದೊಂದು ರೀತಿಯ ಕಸರತ್ತೇ. ಅದನ್ನು ನಿಯಮಿತವಾಗಿ ಮಾಡಬೇಕಾಗುತ್ತದೆ ಶಾರೀರಿಕ ದಾರ್ಢ್ಯತೆ ಬೆಳೆಸಿಕೊಳ್ಳುವಾಗ ಮಾಡುತ್ತಾರಲ್ಲ – ಆ ರೀತಿಯಲ್ಲಿ – ಉದಾರಣೆಗೆ ಭಾರ ಎತ್ತುವಂತೆಯೇ, ನಿಮ್ಮ ಏಕಾಗ್ರತೆಯೂ ಏಕನಿಷ್ಠವಾಗಿರಬೇಕು, ಕೇವಲ ಕೃತ್ರಿವಾಗಿರಬಾರದು ಎನ್ನುವುದಾದರೆ ನೀವು ಈ ರೀತಿಯ ಕಸರತ್ತು ಮಾಡಲೇಬೇಕಾಗುತ್ತದೆ.

ಪ್ರಾರ್ಥನೆ ಕೂಡ ಅಷ್ಟೇ, ಜ್ವಾಲೆ ಹಠಾತ್ತನೆ ಪ್ರಜ್ವಲಿಸುವಂತೆ, ಒಮ್ಮೆಲೇ ಅತ್ಯುತ್ಸಾಹದ ಅನುಭವವಾಗುತ್ತದೆ, ತ್ರೀವ ಉತ್ಸಾಹದ ಅನುಭವ, ಅದನ್ನು ನೀವು ಶಬ್ದಗಳ ಮೂಲಕ ಹೇಳಲು ಪ್ರಯತ್ನಿಸುತ್ತೀರಿ, ಅತ್ಯಂತ ಸಹಜವಾಗಿ ತಾವಾಗಿ ಉತ್‌ಸ್ಫೂರ್ತವಾಗಿ ಬಂದಿರುವ ಶಬ್ದಗಳ ಮೂಲಕ ಹೇಳಲು ಪ್ರಯತ್ನಿಸುತ್ತೀರಿ. ಅಭೀಪ್ಸೆ ಅಥವಾ ಪ್ರಾರ್ಥನೆ ನೇರವಾಗಿ ಹೃದಯದಿಂದ, ಅತ್ಯುತ್ಸಾಹದಿಂದ ಬರಬೇಕು. ಅಲ್ಲಿ ತಲೆಯ ಕೆಲಸ (ವಿಚಾರ) ಇರಬಾರದು, ಕೇವಲ ಹೃದಯದ (ಭಾವನೆಯ) ಸ್ಪಂದನ ಇರಬೇಕು. ಪ್ರಾರ್ಥನೆ ಎಂದರೆ ಅದು ನಿಮ್ಮ ತಲೆಯಲ್ಲಿ ಏನೇನೋ ಶಬ್ದಗಳ ಜೋಲಾಡುತ್ತಿದ್ದರೆ ಅದು ಪ್ರಾರ್ಥನೆ ಅಲ್ಲ. ನೋಡಿ, ನೀವು ಅಗ್ನಿಯಲ್ಲಿ ಹೆಚ್ಚಿನ ಸಮಿತ್ತು ಹಾಕಲಿಲ್ಲ ಎಂದರೆ, ಆಗ ಏನಾಗುತ್ತದೆ, ಅಗ್ನಿ ನಂದಿ ಹೋಗುತ್ತದೆ. ನಿಮ್ಮ ಶರೀರದ ಮಾಂಸಪೇಶಿಗಳಿಗೆ ಸಾಕಷ್ಟು ವಿಶ್ರಾಂತಿ ನೀಡದಿದ್ದರೆ, ಅವು ದಣಿದರೆ ಒತ್ತಡ ತಡೆದುಕೊಳ್ಳುವ ಅವುಗಳ ಶಕ್ತಿ ಕುಂದುತ್ತದೆ. ಆದ್ದರಿಂದ ಕೆಲಸಮಯದ ನಂತರ ಈ ಕಸರತ್ತಿನ ತೀವ್ರತೆಯನ್ನು ಕಡಿಮೆ ಮಾಡುವುದು ಒಳ್ಳೆಯದು, ಅದು ಕೇವಲ ಸಹಜ ಅಲ್ಲ, ಅನಿವಾರ್ಯ ಕೂಡ. ಭಾರ ಎತ್ತುವ ವ್ಯಾಯಾಮವನ್ನು ಯಾರು ಸಾಕಷ್ಟು ಕಾಲ ಮಾಡಿದ್ದಾರೋ, ಯಾರಿಗೆ ರೂಢಿ ಇದೆಯೋ, ಅಂಥವರು ಹಿಂದೆಂದೂ ಮಾಡದಿರುವುದಕ್ಕಿಂತ ಹೆಚ್ಚು ಕಾಲ ವ್ಯಾಯಾಮ ಮಾಡಲು ಸಾಧ್ಯ. ಅದೂ ಕೆಲಸಲ ಮಾತ್ರ. ಮನಸ್ಸಿನ ಏಕಾಗ್ರತೆ ಕೂಡ ಹಾಗೆಯೇ ಯಾರು ಅಂಥ ಕಸರತ್ತಿಗೆ ಒಗ್ಗಿಕೊಂಡಿದ್ದಾರೋ ಅಂಥವರು ಸಾಮಾನ್ಯವಾಗಿ ಇತರರು ಮಾಡವುದಕ್ಕಿಂತ ಹೆಚ್ಚು ಅವಧಿಯವರೆಗೆ ಏಕಾಗ್ರತೆ ಸಾಧಿಸಬಲ್ಲರು. ಆದರೆ ಪ್ರತಿಯೊಬ್ಬರು ಒಂದು ನಿರ್ದಿಷ್ಟ ಅವಧಿಯ ನಂತರ ವಿಶ್ರಾಂತಿ ತೆಗೆದುಕೊಳ್ಳುವುದು ಅವಶ್ಯ. ಸ್ವಲ್ಪ ಸಮಯದ ನಂತರ ಪುನಃ ಆರಂಭ ಮಾಡಬಹುದು, ಆದರೆ ವಿಶ್ರಾಂತಿ ಅವಶ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/227–28**



**ದೈವಿ ಕೃಪೆಯು ಸಂಪೂರ್ಣವಾಗಿ ಕರ್ಮವನ್ನು ಅಳಿಸಿಹಾಕುತ್ತರೆ**

ಸಂಪೂರ್ಣವಾಗಿ, ದೈವಿಕೃಪೆಯು ಸಂಪೂರ್ಣವಾಗಿ ಕರ್ಮವನ್ನು ಅಲ್ಲಗಳೆಯುತ್ತದೆ. ನಿಮಗೆ ಗೊತ್ತಿರಲಿ ಸೂರ್ಯನೆದುರಿಗೆ ಇಟ್ಟ ಬೆಣ್ಣೆಯ ಹಾಗೆ ಕರಗಿ ಹೋಗುತ್ತದೆ. ಈಗತಾನೆ ಅದನ್ನೆ ನಾನು ಹೇಳುತ್ತಿದ್ದುದು, ಈಗತಾನೆ ನೀವುಹೇಳಿದ್ದು, ಇನ್ನೊಂದು ರೀತಿಯಲ್ಲಿ ಮಾತಾನಾಡಿದಂತೆ. ನಾನು ನಿಮ್ಮ ಸ್ಥಾನದಲ್ಲಿದ್ದುಕೊಂಡು ಕೇಳಿದಂತೆ ನೀವಲ್ಲಿದ್ದುಕೊಂಡು ನಿಮ್ಮಲ್ಲಿರುವ ಅಭಿಪ್ಸೆ ಸಾಕಷ್ಟು ಶ್ರದ್ಧೆಯಿಂದ ಕೂಡಿದ್ದು ಅಥವಾ ಸಾಕಷ್ಟು ತೀವ್ರತರವಾದ ಪ್ರಾರ್ಥನೆ ಇದ್ದರೆ ನೀವು ನಿಮ್ಮೊಳಗೆ ಉನ್ನತವಾದುದನ್ನು ಅವತರಿಣಿಸಿಕೊಳ್ಳುಬಹುದು. ಅದು ಎಲ್ಲವನ್ನೂ ಬದಲಾಯಿಸಬಹುದು. ಎಲ್ಲವನ್ನು ನಿಜವಾಗಿ ಅದು ಎಲ್ಲವನ್ನು ಬದಲಾಯಿಸುತ್ತದೆ

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/90–191** **– ಶ್ರೀಮಾತೆ**

## ಸಮರ್ಪಕ ರೂಪಿಸುವಿಕೆಯ ಶಕ್ತಿ

ನೀವು ನಿಮ್ಮ ವಿಚಾರಗಳಿಗೆ, ಭಾವನೆಗಳಿಗೆ ಸಮರ್ಪಕ ರೂಪ ನೀಡಬಹುದು. ಸರಿಯಾದ ರೀತಿಯಲ್ಲಿ ರೂಪ ನೀಡಿದ್ದೇ ಆದರೆ ಅವು ಬೇರೆ ಜೀವಂತ ವ್ಯಕ್ತಿಗಳಂತೆಯೋ ಕಾರ್ಯ ಮಾಡಬಲ್ಲವು. ಭೌತಿಕವಾಗಿ ತೊಂದರೆ ತೆಗೆದುಕೊಂಡು ಬೇರೆಯವರಿಗೆ ಸಹಾಯ ಮಾಡುವುದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಸಹಾಯವನ್ನು ನಿಮ್ಮ ಮನೆಯಲ್ಲಿ ಕುಳಿತುಕೊಂಡೇ ಮಾಡಬಹುದು. ಹೇಗೆ ಆಲೋಚನೆ ಮಾಡಬೇಕೆಂಬುದು ನಿನಗೆ ಚೆನ್ನಾಗಿ ಗೊತ್ತಿದ್ದರೆ, ಶಕ್ತಿ, ಬುದ್ಧಿ, ಹಾಗೂ ಕರುಣೆಯಿಂದ ಹೇಗೆ ಆಲೋಚಿಸುವುದೆಂಬುದು ನಿನಗೆ ತಿಳಿದಿದ್ದರೆ, ನೀವು ಯಾರನ್ನಾದರೂ ತುಂಬ ಪ್ರೀತಿಸುತ್ತಿದ್ದರೆ, ಅವರಿಗೆ ಒಳ್ಳೆಯದಾಗಲಿ ಎಂದು ನಿಷ್ಠೆಯಿಂದ ಬಯಸುತ್ತಿದ್ದರೆ, ನಿಮ್ಮ ಹೃದಯದಾಳದಿಂದ ನಿಮಗೆ ಆ ಬಯಕೆ ಇದ್ದರೆ, ಆ ಆಲೋಚನೆಯೇ ಅವರಿಗೆ ಸಹಾಯ ಮಾಡಬಲ್ಲದು. ನಾನಿದನ್ನು ಅನೇಕ ಸಲ ಹೇಳಿದ್ದೇನೆ, ಉದಾಹರಣೆಗಾಗಿ, ಇಲ್ಲಿ ಇರುವ ನಿಮಗೆ ಸಂಬಂಧಪಟ್ಟವರಲ್ಲಿ ಯಾರಿಗಾದರೂ ಅಸ್ವಸ್ಥತೆ ಉಂಟಾಗಿದ್ದರೆ, ಅವರಿದ್ದಲ್ಲಿಗೆ ಹೋಗಿ ಅವರ ಸೇವೆ ಮಾಡಬೇಕೆಂಬ ಅದಮ್ಯ ಬಯಕೆ ನಿಮ್ಮಲ್ಲಿ ಉಂಟಾದರೆ, ಹಾಗೂ ಅಂಥವರ ಸೇವೆ ಮಾಡಬಲ್ಲವರು ಯಾರು ಇಲ್ಲದಿದ್ದರೆ, ನೀವು ಆ ಅಸ್ವಸ್ಥ ವ್ಯಕ್ತಿಯ ಮೇಲೆ ನಿಮ್ಮ ಆಲೋಚನೆಯನ್ನು ಕೇಂದ್ರೀಕರಿಸಿ, ಪ್ರೀತಿಯಿಂದ ಅಪೇಕ್ಷೆಪಟ್ಟರೆ, ಹೇಗೆ ಪ್ರಾರ್ಥನೆ ಮಾಡುವುದು, ನಿಮ್ಮಾಲೋಚನೆಗಳಿಗೆ ಸರಿಯಾದ ಸ್ವರೂಪ ನೀಡುವುದು ಹೇಗೆಂಬುದು ನಿಮಗೆ ಗೊತ್ತಿದ್ದರೆ, ನೀವು ಆ ವ್ಯಕ್ತಿ ಇರುವಲ್ಲಿಗೆ ಹೋಗಿ ಅವನಿಗೆ ಉಣಿಸುವುದು, ತಿನ್ನಿಸುವುದು, ಸ್ನಾನ ಮಾಡಿಸುವುದು – ಇದನ್ನು ಎಲ್ಲರೂ ಮಾಡುತ್ತಾರೆ ಅದರಲ್ಲೇನೂ ವಿಶೇಷವಿಲ್ಲ – ಇಂತಹ ಎಲ್ಲ ಕಾರ್ಯಗಳನ್ನು ಮಾಡವುದಕ್ಕಿಂತ ಹೆಚ್ಚು ಸಹಾಯವನ್ನು, ನೀವಿಲ್ಲಿ ಕುಳಿತೇ ಮಾಡಬಹುದು. ಶುಶ್ರೂಷೆಯನ್ನು ಯಾರು ಬೇಕಾದರೂ ಮಾಡಬಹುದು. ಆದರೆ ಈ ರೀತಿ ವಿಚಾರಗಳಿಗೆ, ಭಾವನೆಗೆ ಸರಿಯಾದ ಸ್ವರೂಪ ಕೊಟ್ಟು, ಆ ಮೂಲಕ ಇಲ್ಲಿಂದಲೇ ಶಕ್ತಿಯನ್ನು ಕಳಿಸಿ, ಆ ವ್ಯಕ್ತಿಯನ್ನು ಗುಣಪಡಿಸುವ ಕೆಲಸವನ್ನು ಎಲ್ಲರೂ ಮಾಡಲಾರರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/132–33**

## ಅಭೀಪ್ಸೆ ಮತ್ತು ಪ್ರಾರ್ಥನೆ

ನಿಮಗೆ ಅಭೀಪ್ಸೆ ಇದೆ, ಅದನ್ನು ನೀವು ಪ್ರಾರ್ಥನೆಯನ್ನಾಗಿ ಮಾಡಬಲ್ಲಿರಿ. ಆದರೆ ಅಭೀಪ್ಸೆಯು ಪ್ರಾರ್ಥನೆಗಿಂತಲೂ ಯಾವಾಗಲೂ ಹೆಚ್ಚಿನದು. ಅದು ಹೆಚ್ಚು

ಕಡಿಮೆ ಆತ್ಮ ವಿಸ್ಮೃತಿಗೆ ಸಮೀಪವಾಗಿರುವಂಥದು, ತನಗೇನು ಬೇಕಾಗಿದೆಯೋ, ಏನು ಮಾಡಬೇಕಾಗಿದೆಯೋ ಅದಕ್ಕಾಗಿಯೇ ಜೀವಿಸುವಂಥದು, ಪರಮಾತ್ಮನಿಗಾಗಿ ಏನೆಲ್ಲವನ್ನೂ ಸಮರ್ಪಣ ಮಾಡಿಬಿಡುವಂಥ ಸ್ಥಿತಿ ಅದು. ನಿಮಗೇನೋ ಬೇಕಾಗಿದೆ ಎಂದು ನೀವು ಪ್ರಾರ್ಥನೆ ಮಾಡಬಹುದು, ನಿಮಗೆ ಭಗವಂತ ಏನೆಲ್ಲ ಕೊಡಮಾಡಿದ್ದಾನೆ ಎಂಬುದನ್ನು ನೆನೆದು ಕೃತಜ್ಞತಾ ಪೂರ್ವಕವಾಗಿ ಪ್ರಾರ್ಥನೆ ಸಲ್ಲಿಸಬಹುದು, ಅಂಥ ಕೃತಜ್ಞತಾ ಪೂರ್ಣ ಪ್ರಾರ್ಥನೆ ನಿಜವಾಗಿ ದೊಡ್ಡದು.

ಭಗವಂತನು ನಿಮ್ಮ ಮೇಲೆ ಅಪಾರ ಕರುಣೆ ತೋರಿದ್ದಾನೆಂಬುದನ್ನು ನೆನೆದು ಕೃತಜ್ಞತಾ ಪೂರ್ವಕವಾಗಿ ಅವನನ್ನು ಸ್ಮರಿಸುತ್ತ ನಿಮ್ಮ ಬಳಿ ಇರುವುದನ್ನು ಅವನಿಗೆ ಸಮರ್ಪಿಸುತ್ತ ಪ್ರಾರ್ಥಿಸುವುದು, ನಿಜವಾಗಿ ಕೃತಜ್ಞತೆಯ ಕೆಲಸವೇ. ಇದೆಲ್ಲ ಒಂದು ನಿಶ್ಚಿತ ಪ್ರಾರ್ಥನೆಯ ರೂಪ ತಾಳಬಹುದು. ನಿಜವಾಗಿಯೂ ಅತ್ಯುನ್ನತ ಪ್ರಾರ್ಥನೆ, ಏಕೆಂದರೆ ಅದರಲ್ಲಿ ತನ್ನದೆಂಬುದೇನೂ ಇಲ್ಲ, ಅದು ಅಹಂಪೂರಿತ ಪ್ರಾರ್ಥನೆ ಅಲ್ಲ.

ವ್ಯಕ್ತಿಯು ತನ್ನೆಲ್ಲ ಕ್ಷೇತ್ರಗಳಲ್ಲಿ ಹಾಗೂ ಇಡೀ ವ್ಯಕ್ತಿತ್ವದಲ್ಲಿ ಅಭೀಪ್ಸೆಯನ್ನು ಹೊಂದಿರಬಹುದು, ಆದರೆ ಅಭೀಪ್ಸೆಯ ಕೇಂದ್ರವಿರುವುದು ಅಂತರಾತ್ಮನಲ್ಲಿ, ವ್ಯಕ್ತಿ ಎಲ್ಲ ಕ್ಷೇತ್ರಗಳಲ್ಲಿ ಎಲ್ಲ ರೀತಿಯಿಂದಲೂ ಪ್ರಾರ್ಥನೆ ಮಾಡಬಹುದು, ಅದೇ ಕಾಲಕ್ಕೆ ಯಾವ ನೆಲೆಯಲ್ಲಿ ನಿಂತು ಆತ ಪ್ರಾರ್ಥಿಸುತ್ತಿದ್ದನೋ ಅದಕ್ಕೆ ಮಾತ್ರ ಸೀಮಿತವಾಗಿಯೂ ಆ ಪ್ರಾರ್ಥನೆ ಇರಲು ಸಾಧ್ಯವಿದೆ. ನೀವು ಕೇವಲ ವ್ಯಾವಹಾರಿಕ, ಭೌತಿಕ, ಪ್ರಾಣಿಕ, ಮಾನಸಿಕ, ಅಂತರಾತ್ಮಿಕ ಹಾಗೂ ಆಧ್ಯಾತ್ಮಿಕ ಹೀಗೆ ಬೇರೆ ಬೇರೆ ರೀತಿಯ ಪ್ರಾರ್ಥನೆ ಮಾಡಬಹುದು, ಪ್ರತಿಯೊಂದು ಪ್ರಾರ್ಥನೆಗೂ ಅದರದೇ ಆದ ವಿಶಿಷ್ಟ ಗುಣ ಇದೆ, ವಿಶೇಷ ಮೌಲ್ಯ ಇದೆ.

ಇನ್ನೊಂದು ತೆರನಾದ ಪ್ರಾರ್ಥನೆ, ಅದು ತಾನೇ ತಾನಾಗಿ ಉದ್ಭವಿಸುವಂಥದು, ಅದು ನಿಸ್ವಾರ್ಥಪರ, ಅದೊಂದು ನಿಜವಾದ ಕರೆ, ತನ್ನ ವೈಯಕ್ತಿಕ ವಿಷಯವನ್ನು ಕುರಿತು ಮಾಡಿದ್ದಲ್ಲ, ಒಂದು ರೀತಿಯಲ್ಲಿ ಪರಮಾತ್ಮನೊಡನೆ ಅನುಸಂಧಾನ, ಸಂವಹನ ಮಾಡುವಂಥ ಪ್ರಾರ್ಥನೆ. ಅದು ನಿಜವಾಗಿ ಅತ್ಯಂತ ಆಸಕ್ತಿಯುತವಾದದ್ದು. ಇಂಥ ಪ್ರಾರ್ಥನೆಯ ಮೂಲಕ ಎಷ್ಟೋ ಸಂಗತಿಗಳು ತತ್‌ಕ್ಷಣ ಪರಿಣಾಮ ಬೀರಿದ ಉದಾಹರಣೆಗಳನ್ನು ನಾನು ನೋಡಿದ್ದೇನೆ. ಅಲ್ಲಿ ಅತ್ಯಂತ ಉನ್ನತವಾದ ಶ್ರದ್ಧೆ, ಪ್ರಬಲ ಉತ್ಸಾಹ, ಅಪಾರ ನಂಬಿಕೆ, ಹಾಗೂ ಹೃದಯಾಂತರಾಳದ ಸರಳತೆ ಇರುತ್ತದೆ. ಅಲ್ಲಿ ವ್ಯವಹಾರ, ಲೆಕ್ಕಾಚಾರ,

ಯೋಜನೆ, ಹಂಚಿಕೆ, ಕೊಂಡುಕೊಳ್ಳುವ ವಿನಿಮಯ ಇವಾವೂ ಇರುವುದಿಲ್ಲ, ಭಗವಂತನಿಂದ ಏನನ್ನಾದರೂ ಪಡೆದುಕೊಳ್ಳಲು ಏನನ್ನಾದರೂ ನೀಡಬೇಕು ಎನ್ನುವ ಭಾವ ಅಲ್ಲಿರುವುದಿಲ್ಲ. ಬಹಳಷ್ಟು ಜನರು ಕೈಯಿಂದ ಕೊಟ್ಟಂತೆ ಮಾಡಿ, ಏನನ್ನಾದರೂ ಪ್ರತಿಫಲರೂಪವಾಗಿ ಪಡೆಯಲು ಆ ಕೈ ಚಾಚಿಕೊಂಡೇ ಇರುತ್ತಾರೆ. ಬಹಳಷ್ಟು ಪ್ರಾರ್ಥನೆ ಈ ವಿಧವಾಗಿಯೇ ಇರುತ್ತವೆ. ನಾನು ಇದೀಗ ಹೇಳಿದೆನಲ್ಲ ಅಂಥ ನಿಸ್ವಾರ್ಥ, ಕೃತಜ್ಞತಾ ಸಮರ್ಪಣದಂಥ ಸ್ತೋತ್ರ, ಪ್ರಾರ್ಥನೆಗಳೂ ಇರುತ್ತವೆ, ಅವು ಶ್ರೇಷ್ಠ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/141–42**

---

ಧ್ಯಾನ ಮಾಡುತ್ತಿರುವುದಾಗಿ ನಟಿಸುತ್ತೀರಿ ಆದರೆ ನಿಜವಾಗಿ ಧ್ಯಾನ ಮಾಡುತ್ತಿರುವುದಿಲ್ಲ, ಅಥವಾ ಇತರ ಜನರು ದೇವಸ್ಥಾನಗಳಿಗೆ, ಚರ್ಚಿಗೆ ಹೋಗಿ ಪ್ರಾರ್ಥನೆ ಮಾಡುವಂತೆ ಸುಮ್ಮನೆ ಯಾಂತ್ರಿಕವಾಗಿ ಪ್ರಾರ್ಥನೆ ಮಾಡುತ್ತೀರಿ, ಏನೋ ಸಾಂಪ್ರದಾಯಿಕ ವಿಧಿಗಳನ್ನು ಮಾಡುವುದು, ಮಾಡಿಸುವುದು, ಅವರು ಹೇಳಿಕೊಟ್ಟ ಪ್ರಾರ್ಥನೆಯನ್ನು ಹೇಳುವುದು ಇಂಥವುಗಳನ್ನು ಮಾಡುವಾಗ ನಿಮ್ಮಲ್ಲಿ ನಿಜವಾದ ನಿಷ್ಠೆ ಇರುವುದಿಲ್ಲ, ಅದು ಧ್ಯಾನವು ಅಲ್ಲ, ಪ್ರಾರ್ಥನೆಯೂ ಅಲ್ಲ, ಅದೊಂದು ಕೇವಲ ವೃತ್ತಿಯಂತಾಗಿ ಬಿಡುತ್ತದೆ. ಅದೇನೂ ಉಪಯೋಗವಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/228**

## ಪ್ರಾರ್ಥನೆಯು ದೈವಾಭಿಮುಖವಾಗಿರುತ್ತದೆ

ಸ್ಪಷ್ಟವಾಗಿ ಹೇಳಬೇಕೆಂದರೆ ಪ್ರಾರ್ಥನೆಯು ಯಾವಾಗಲೂ ಶಬ್ದಗಳ ಜೋಡಣೆಯಿಂದಲೇ ಕೂಡಿರುತ್ತದೆ. ಆದರೆ ಯಾವ ಭಾವನಾ ಸ್ಥಿತಿಯಲ್ಲಿ ಆ ಶಬ್ದಗಳು ಮೂಡಿಬಂದಿವೆಯೋ, ಅದರ ಮೇಲಿಂದ ಅವುಗಳ ಮಹತ್ವ ನಿರ್ಣಿತವಾಗುತ್ತದೆ. ಪ್ರಾರ್ಥನೆ ಅನ್ನುವುದು ಸಂರಚನೆಯಾದದ್ದು, ಅಭೀಪ್ಸೆ ಹಾಗಲ್ಲ. ಆದರೆ ಪ್ರಾರ್ಥನೆ ಮಾಡಬೇಕೆಂದರೆ ನೀವು ಯಾರನ್ನಾದರೂ ತ್ರೀವವಾಗಿ ಕೇಳಿಕೊಳ್ಳಲೇಬೇಕು. ಉದಾಹರಣೆಗೆ, ಕೆಲವರಿಗೆ ಈ ವಿಶ್ವದ ಬಗೆಗೊಂದು ಸಾಮಾನ್ಯ ತಿಳುವಳಿಕೆ ಅಥವಾ ಜ್ಞಾನ ಇದೆ, ಅದರ ಮೇಲಿಂದ ಅವರು ಮಾಡಿಕೊಳ್ಳುವ ದೇವರ ಕಲ್ಪನೆ ನಿರ್ಧರಿತವಾಗುತ್ತದೆ. (ಇಂಥ ಅನೇಕ ಜನರಿದ್ದಾರೆ, ಪ್ರಾರ್ಥನೆ ಮಾಡುವುದು ಅಂಥವರಿಗೆ ಸುಲಭವಲ್ಲ. ಭಗವಂತನೆಂಬ

ವ್ಯಕ್ತಿಯೊಬ್ಬನಿದ್ದಾನೆ, ಅವನು ಸರ್ವಜ್ಞ, ಸರ್ವಶಕ್ತ, ಅವನು ಅನುಪಮವಾದ ರೀತಿಯಲ್ಲಿ ಎಲ್ಲರಿಗಿಂತ ಎಲ್ಲದಕ್ಕಿಂತ ಪರಮಶ್ರೇಷ್ಠ ಎಂಬ ಕಲ್ಪನೆ ಅವರಿಗೆ ಒಗ್ಗದು, ಅಂಥ ಕಲ್ಪನೆ ಅವರ ಆತ್ಮಗೌರವಕ್ಕೆ ಧಕ್ಕೆ ಇದ್ದ ಹಾಗೆ. ಅಂಥವರು ಪರಮಾತ್ಮನಿಲ್ಲದ ಜಗತ್ತಿನ ಕಲ್ಪನೆಗೆ ಹೆಚ್ಚು ಒತ್ತು ನೀಡುತ್ತಾರೆ.) ಅಂಥವರು ಪ್ರಾರ್ಥನೆ ಮಾಡಲು ಸಾಧ್ಯವೇ ಇಲ್ಲ. ಅವರು ಯಾರನ್ನು ಕುರಿತು ಪ್ರಾರ್ಥನೆ ಮಾಡಿ ಯಾರು? ಅವರೇನು ತಮ್ಮನ್ನೇ ತಾವು ಪ್ರಾರ್ಥಿಸಬೇಕೇ? ಅದಂತೂ ಸಂಪ್ರದಾಯ ವಿರುದ್ಧ. ಆದರೆ ದೇವರ ಮೇಲೆ ನಂಬಿಕೆ ಇಲ್ಲದಿದ್ದರೂ ಪರವಾಗಿಲ್ಲ, ಆದರೆ ಅಭೀಪ್ಸೆ ಇರುವ ಸಾಧ್ಯತೆ ಇದೆ. ಅನೇಕ ಜನ ನಾಸ್ತಿಕರಿದ್ದಾರೆ, ಅವರು ದೇವರ ಅಸ್ತಿತ್ವವನ್ನೇ ನಂಬುವುದಿಲ್ಲ, ಅವರಿಗೆ ಪ್ರಗತಿಯಲ್ಲಿ, ಅಭಿವೃದ್ಧಿಯಲ್ಲಿ, ವಿಕಾಸದಲ್ಲಿ ನಂಬಿಕೆ ಇದೆ. ಈ ಜಗತ್ತು ನಿರಂತರವಾಗಿ ಪ್ರಗತಿ ಹೊಂದುತ್ತಲೇ ಇದೆ ಎಂದು ಅವರು ನಂಬುತ್ತಾರೆ. ಆ ಪ್ರಗತಿ ಹೊಂದುತ್ತಲೇ ಇದೆ ಎಂದು ಅವರು ನಂಬುತ್ತಾರೆ. ಆ ಪ್ರಗತಿ ಎಂದಿಗೂ ನಿಲ್ಲುವಂಥದಲ್ಲ, ಅದು ಅನಂತ ಕಾಲ ಮುಂದುವರಿಯುಂಥದು, ಅದು ನಿಲ್ಲುವಂಥದಲ್ಲ, ಅದು ಅನಂತ ಕಾಲ ಮುಂದುವರಿಯುವಂಥದು, ಅದು ಸದಾ ಉತ್ತರೋತ್ತರವಾಗಿ ಒಳ್ಳೆಯದರ ಕಡೆಗೇ ಸಾಗುತ್ತದೆ ಎಂಬ ದೃಢನಂಬಿಕೆ ಅವರಿಗಿರುತ್ತದೆ. ಇಂಥ ಜನರು ಪ್ರಗತಿಗಾಗಿ ಅಪಾರವಾದ ತೀವ್ರವಾದ ಅಭೀಪ್ಸೆ ಹೊಂದಿರುವ ಸಾಧ್ಯತೆ ಇದೆ, ಅಷ್ಟರ ಮಟ್ಟಿಗೆ ಅವರಿಗೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಬೇಕೇ ಬೇಕೆಂದೇನೋ ಇಲ್ಲ. ಅಭೀಪ್ಸೆ ಅಂದರೆ ನಂಬಿಕೆ ಹೌದು, ಆದರೆ ಅದು ಪರಮಾತ್ಮನಲ್ಲಿ ಎಂದೇನೂ ಅರ್ಥವಲ್ಲ. ಆದರೆ ಪ್ರಾರ್ಥನೆ ಹಾಗಲ್ಲ, ದೇವರಲ್ಲಿ ನಂಬಿಕೆ ಇಲ್ಲದೇ ಪ್ರಾರ್ಥನೆ ಮಾಡುವುದು ಸಾಧ್ಯವಿಲ್ಲ. ಪ್ರಾರ್ಥನೆ ಯಾರಿಗೆ? ನಿರಾಕಾರವಾದ ವಸ್ತು(ಅಥವಾ ವ್ಯಕ್ತಿಯನ್ನು)ವನ್ನು ಕುರಿತು ಪ್ರಾರ್ಥನೆ ಸಲ್ಲಿಸಲು ಸಾಧ್ಯವಿಲ್ಲವಲ್ಲ. ನಮ್ಮನ್ನು ಕೇಳುವವರೇ ಇಲ್ಲವಾದರೆ ಪ್ರಾರ್ಥಿಸುವುದಾದರೂ ಹೇಗೆ? ಆದ್ದರಿಂದ ನೀವು ಪ್ರಾರ್ಥನೆ ಮಾಡುತ್ತೀರಿ ಅಂದರೆ, ನೀವು ಒಪ್ಪಲಿ ಬಿಡಲಿ, ನಿಮಗಿಂತ ಎಷ್ಟೋ ಪಟ್ಟು ಅಧಿಕವಾದ ವ್ಯಕ್ತಿಯೊಬ್ಬನಿದ್ದಾನೆ, ನಮಗಿಂತ ಅತಿ ಶಕ್ತಿಶಾಲಿಯಾದವನಿದ್ದಾನೆ, ಅವನು ನಮ್ಮನ್ನು ಬದಲು ಮಾಡಬಲ್ಲ, ನಮ್ಮ ಅದೃಷ್ಟವನ್ನೂ ಬದಲು ಮಾಡಬಲ್ಲ ಎಂದು ನೀವು ದೃಢವಾಗಿ ನಂಬಿದ್ದೀರಿ ಎಂದೇ ಅರ್ಥ, ಇದೇ ಅವೆರಡರ ನಡುವೆ ಇರುವ ಮುಖ್ಯ ವ್ಯತ್ಯಾಸ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/142–43**

ಅನುಭವಿಗಳು ಅಥವಾ ಯೋಗಿಗಳು ಹೇಳುವುದೇನೆಂದರೆ, ಅಭೀಪ್ಸೆ ಒಳ್ಳೆಯದು, ಆದರೆ ನಿಮ್ಮ ಮೊರೆ ಭಗವಂತನಿಗೆ ಕೇಳಿಸಬೇಕಾದರೆ, ಅವನು ನಿಮ್ಮ ಬೇಡಿಕೆಗೆ ಕಿವಿಗೊಡಬೇಕೆಂದರೆ, ನೀವು ಪ್ರಾರ್ಥನೆ ಮಾಡಲೇಬೇಕು. ಮಗುವಿನಂಥ ಸರಳತೆಯೊಂದಿಗೆ, ಪೂರ್ವ ಪ್ರಾಮಾಣಿಕತೆಯಿಂದ ಪರಿಪೂರ್ಣವಾದ ನಂಬಿಕೆಯೊಂದಿಗೆ ನೀವು ಪ್ರಾರ್ಥನೆ ಮಾಡಬೇಕಾಗುತ್ತದೆ. “ನನಗಿಂಥದು ಬೇಕಾಗಿದೆ, (ಅದು ನೈತಿಕ ಅವಶ್ಯಕತೆಯಾಗಿರಬಹುದು ಇಲ್ಲವೇ ಭೌತಿಕ, ಪ್ರಾಪಂಚಿಕ ಅವಶ್ಯಕತೆ–ಯಾಗಿರಬಹುದು), ಹೌದು ನಾನು ಅದನ್ನು ಕೇಳುತ್ತೇನೆ, ನನಗದು ಬೇಕು, ನೀನು ನನಗೆ ಅದನ್ನು ನೀಡು” ಅಥವಾ “ನಾನೇನನ್ನು ಹೇಳಿದ್ದೆನೋ ಅದನ್ನು ನನಗೆ ಈಗಾಗಲೇ ಕೊಟ್ಟಿರುವಿ, ನನಗೆ ನೀಡಿ, ಸಾಕಾರಗೊಳಿಸಿಕೊಟ್ಟಿರುವಿ, ನಾನೀಗ ಅದ್ಭುತವೆನಿಸುವಂಥ ಪವಾಡಗಳನ್ನು ಬೇಕೆನಿಸಿದಾಗ ಮಾಡಬಲ್ಲೆ. ನಾನು ನಿನಗೆ ಅನಂತ ರೀತಿಯಲ್ಲಿ ಕೃತಜ್ಞನಾಗಿದ್ದೇನೆ. ನಾನು ನಿನ್ನ ಸೋತ್ರ ಮಾಡಿ ನನ್ನ ಕೃತಜ್ಞತೆ ಸಲ್ಲಿಸಬಯಸುತ್ತೇನೆ.” ಈ ರೀತಿ ಕೂಡ ಪ್ರಾರ್ಥಿಸಬಹುದು. ಅಭೀಪ್ಸೆಗಾಗಿ ನೀವು ಯಾರನ್ನಾದರೂ ಉದ್ದೇಶಿಸಿ ಅಭೀಪ್ಸೆ ಪಡಬೇಕಾಗಿಲ್ಲ. ಅಭೀಪ್ಸೆಯು ನಿಶ್ಚಿತವಾದ ಸ್ಥಿತಿಯ ಪ್ರಾಪ್ತಿಗಾಗಿ ಇರಬಹುದು, ಜ್ಞಾನ ಸಾಧನೆಗಾಗಿ ಇರಬಹುದು, ಸಾಕ್ಷಾತ್ಕಾರಕ್ಕಾಗಿ ಇರಬಹುದು ಅಥವಾ ನಿಶ್ಚಿತದ ಪ್ರಜ್ಞಾ ಸ್ಥಿತಿಯ ದೆಶೆಯಿಂದಲೂ ಇರಬಹುದು. ಅಭೀಪ್ಸೆ ಇರಬಹುದು, ಅಂದರೆ ಅದು ಪ್ರಾರ್ಥನೆಗಾಗಿಯೇ ಇರಬೇಕೆಂಬ ನಿಯಮವಿಲ್ಲ. ಪ್ರಾರ್ಥನೆಯು ಅಭೀಪ್ಸೆಯ ಹೆಚ್ಚುವರಿ ಭಾಗ ಇದ್ದಂತೆ.

ಪ್ರಾರ್ಥನೆ ವೈಯಕ್ತಿಕ, ತನ್ನ ವೈಯಕ್ತಿಕ ಆತ್ಮೀಯ ವ್ಯಕ್ತಿಯನ್ನು ಉದ್ದೇಶಿಸಿ ಪ್ರಾರ್ಥನೆ ಮಾಡಬಹುದು – ಶಕ್ತಿಯನ್ನೋ, ವ್ಯಕ್ತಿಯನ್ನೋ ಉದ್ದೇಶಿಸಿ ಮಾಡಬಹುದು – ಅವನು ಅಥವಾ ಅದು ನಿಮ್ಮ ಕೂಗಿಗೆ ಪ್ರತ್ಯುತ್ತರ ನೀಡುತ್ತದೆ ಎಂಬ ನಂಬಿಕೆ ಇರಬೇಕು. ಏನೂ ಕೇಳಲಾರಿರಿ. ತಿಳಿಯಿತೇ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/143 – ಶ್ರೀಮಾತೆ**

## ಹೃದಯದಲ್ಲಿ ದೀಪ ಬೆಳಗಿದೆ, ಪ್ರಾರ್ಥನೆ ಮಾಡಿರಿ

ಮಗುವಿನ ಹಾಗೆ ಮೊಳಕಾಲೂರಿ ಕುಳಿತು, ಕೈಮುಗಿದು "ಪರಮಾತ್ಮ, ನಾನು ನಿನ್ನನ್ನು ಪ್ರಾರ್ಥಿಸುತ್ತೇನೆ, ನನ್ನನ್ನು ಒಳ್ಳೆಯ ಮಗುವನ್ನಾಗಿ ಮಾಡು, ನನ್ನ ತಾಯಿಯನ್ನು ನಾನೆಂದಿಗೂ ನೋಯಿಸದಂತಾಗಲಿ" ಎಂದು ಬೇಡಿಕೊಳ್ಳುವುದು ಸುಲಭ. ಅದೇನು ಕೆಟ್ಟದೆಂದು ನಾನು ಹೇಳುವುದಿಲ್ಲ. ಆದರೆ ಹಾಗೆ ಮಾಡಬೇಕಾದ ಅಗತ್ಯವಿಲ್ಲ. ಕೆಲ ಮಕ್ಕಳ ಮಟ್ಟಿಗೆ ಈ ಪ್ರಾರ್ಥನೆ ಅಪ್ರಸ್ತುತ, ಏಕೆಂದರೆ ಅವರು "ನನ್ನನ್ನು ಒಳ್ಳೆಯವನನ್ನಾಗಿ ಮಾಡೆಂದು ನಾನೇಕೆ ನಿನ್ನನ್ನು ಪ್ರಾರ್ಥಿಸಬೇಕು. ನಾನು ನಿನ್ನನ್ನು ಕೇಳಿಕೊಳ್ಳದೇನೇ ನೀನು ನನ್ನನ್ನು ಒಳ್ಳೆಯವನನ್ನಾಗಿ ಮಾಡಲೇಬೇಕು. ಇಲ್ಲವಾದರೆ ನೀನೇ ತುಂಬ ಕೆಟ್ಟವನು". ಮಗುವಿನಂಥ ಸರಳ ಹೃದಯ ಇರುವುದು ಮಹತ್ವದ ವಿಷಯವೇ, ಬಹಳ ವಿಚಾರ ಮಾಡದಿರುವುದೂ ಒಳ್ಳೆಯದೇ. ಆದರೆ ಒಂದೊಮ್ಮೆ ವಿಚಾರ ಮಾಡಲು ಆರಂಭ ಮಾಡಿದರೆ, ಆಗ ಪ್ರಾರ್ಥಿಸುವುದು ಕಠಿಣವಾಗುವುದು. ದೇವರ ಮುಂದೆ ದೀಪ ಹಚ್ಚಿ, ಮೊಳಕಾಲೂರಿ ಕುಳಿತು, ಕೈಮುಗಿದು ಪ್ರಾರ್ಥನೆ ಮಾಡುವ ಬದಲು, ನಿಮ್ಮ ಹೃದಯದಲ್ಲಿ ದೀಪ ಬೆಳಗಿಸಿರಿ, ಆನಂತರ ಹೆಚ್ಚು ಸುಮಧುರವಾದ, ಹೆಚ್ಚು ನೈಜವಾದ, ಹೆಚ್ಚು ಉದಾತ್ತವಾದ, ನನಗೆ ಗೊತ್ತಿರುವ ಎಲ್ಲದಕ್ಕಿಂತ ಹೆಚ್ಚು ದೊಡ್ಡದಾದ, ವಸ್ತುವಿಗಾಗಿ ಅಭೀಪ್ಸೆಪಡುವುದು ಉತ್ತಮ ಎಂದು ನಿಮಗೆ ತಿಳಿಹೇಳಬಲ್ಲವರು ನಿಮ್ಮ ಪಕ್ಕದಲ್ಲಿ ಇರಬೇಕು. ನನಗೆ ಏನೆಲ್ಲ ಮಾಡಲು ಸಾಧ್ಯವಿದೆಯೋ ಅದನ್ನು ನಾನೇ ಚೆನ್ನಾಗಿ ತಿಳಿದುಕೊಳ್ಳಲಾರಂಭಿಸುವಂತೆ, ಹಾಗೂ ಏನನ್ನು ಮಾಡಲಾರನೋ ಅದನ್ನು ನಿಧಾನವಾಗಿ ಸ್ವಲ್ಪ ಸ್ವಲ್ಪವಾಗಿ ಮಾಡಲು ಸಾಧ್ಯವಾಗುವಂತೆ ಮಾಡು ಎಂದು ಪ್ರಾರ್ಥಿಸಬೇಕು. ಕಾರಣಾಂತರಗಳಿಂದ ನೀವು ಹೆಚ್ಚಿನ ತೊಂದರೆಯ ಪರಿಸ್ಥಿತಿಯಲ್ಲಿ ಸಿಲುಕಿದ್ದೀರಿ, ನಿಮಗೆ ಸ್ನೇಹಿತರಿದ್ದಾರೆ. ಆದರೆ ಅವರೂ ಸಂತೋಷವಾಗಿಲ್ಲ, ನಿಮಗೆ ಬಂಧುಗಳಿದ್ದಾರೆ ಆದರೆ ಅವರು ಸ್ವಸ್ಥವಿಲ್ಲ, ಇಂಥ ಸಂದರ್ಭಗಳಲ್ಲಿ ನಿಮ್ಮ ಸಂಪೂರ್ಣ ಪ್ರಜ್ಞೆಯು ಮೇಲಿನ (ಊರ್ಧ್ವದ) ಸ್ಥಿತಿಗೆ ಏರಲಿ, ಪರಿಪೂರ್ಣತೆಯೆಡೆಗೆ ಸಾಗಲಿ, ಈ ಜಗತ್ತನ್ನು ದುಃಖದ ಮಡುವಿಗೆ ನೂಕಿದ ಅಜ್ಞಾನ ಬದಲಾಗಲಿ, ಅದು ಪ್ರಬುದ್ಧ ಜ್ಞಾನವಾಗಿ ಪರಿವರ್ತನೆ ಹೊಂದಲಿ, ಇಲ್ಲಿರುವ ಕೆಟ್ಟದ್ದೆಲ್ಲವೂ ಪರಿವರ್ತನೆಗೊಂಡು ಪ್ರಕಾಶಿತವಾಗಲಿ, ಲಾಭಕರವಾಗಿ ಪರಿವರ್ತನೆ ಹೊಂದಲಿ ಎಂದು ನೀವು ಪ್ರಾರ್ಥನೆ ಮಾಡಬಹುದು. ಇದನ್ನು

ಎಷ್ಟು ಸಾಧ್ಯವೋ ಅಷ್ಟು, ಎಷ್ಟು ತಿಳಿಯುತ್ತದೋ ಅಷ್ಟು, ಎಲ್ಲವನ್ನು ಹೃದಯಪೂರ್ವಕವಾಗಿ ಬೇಡಿಕೊಳ್ಳಬೇಕು. ಮತ್ತು ಈ ಭಾವನೆಯೇ ನಿಜವಾಗಿ ಪ್ರಾರ್ಥನೆಯ ರೂಪತಾಳುವುದು. ಆಗ ತಿಳಿದುಕೊಳ್ಳುವಂಥ, ಸಾಧ್ಯವಾಗುವಂಥ, ತನಗಿಂತ ಹಿರಿದಾದ ಮತ್ತು ಶಕ್ತಿಶಾಲಿಯಾದ ಆ 'ತತ್'ನ್ನು ಕುರಿತು ಪ್ರಾರ್ಥಿಸಬೇಕು. ಅಂಥ ಪ್ರಾರ್ಥನೆ ಎಷ್ಟು ಸುಂದರವಾಗಿರಬಹುದಲ್ಲವೇ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/162–63**

### ಪ್ರಾರ್ಥನೆ ಮತ್ತು ನಂಬಿಕೆ

ನಂಬಿಕೆ ಅಥವಾ ವಿಶ್ವಾಸ ಇಲ್ಲದಿದ್ದರೆ ಪ್ರಾರ್ಥನೆ ಮಾಡುವುದು ಕಠಿಣ. ಆದರೆ ತನ್ನಲ್ಲಿರುವ ನಂಬಿಕೆ ಬೆಳೆಯಲೆಂಬ ಉದ್ದೇಶದಿಂದ ಪ್ರಾರ್ಥನೆಯನ್ನು ಸಾಧನವನ್ನಾಗಿ ಮಾಡಿಕೊಂಡು ಮಾಡುವುದು ಸಾಧ್ಯವಿದೆ. ಅಭೀಪ್ಸೆ ತೀವ್ರವಾಗಲೆಂದು, ಹಾಗೂ ಇಂತಹ ಅಭೀಪ್ಸೆ ಇದೆ ಎನ್ನುವ ಹಿರಿದಾದ ನಂಬಿಕೆ ಬೆಳಯಲಿ ಎಂಬ ಉದ್ದೇಶದಿಂದ ಪ್ರಾರ್ಥನೆ ಮಾಡುವುದು ಸಾಧ್ಯವಿದೆ. ಇಂಥದಕ್ಕೆಲ್ಲ ಸಾಕಷ್ಟು ಪ್ರಯತ್ನ ಬೇಕಾಗುತ್ತದೆ. ಯಾವುದೊಂದು ವಸ್ತು ನಿಮ್ಮಲ್ಲಿ ಇಲ್ಲ ಅಂದುಕೊಳ್ಳಿ, ಅದು ಬೇಕೇ ಬೇಕು ಎಂದು ತೀವ್ರವಾಗಿ ಅನಿಸಿದರೆ ಅದಕ್ಕಾಗಿ ಅತ್ಯಂತ ಕಠಿಣ ಪ್ರಯತ್ನ ಮಾಡಬೇಕಾಗಿ ಬರುತ್ತದೆ, ನಿರಂತರವಾದ ಪ್ರಯತ್ನ ಚಿರಂತರವಾದ ಅಭೀಪ್ಸೆ ಅಥವಾ ಹಂಬಲ, ನಿಶ್ಚಲವಾದ ಸಂಕಲ್ಪ, ಪ್ರತಿಕ್ಷಣದಲ್ಲಿಯೂ ಅತ್ಯಂತ ಪ್ರಾಮಾಣಿಕತೆ, ನಿಷ್ಠೆ ಇವು ಇರಲೇಬೇಕು. ಹಾಗಾದಾಗ ಮಾತ್ರ ಒಂದಿಲ್ಲೊಂದು ದಿನ, ಅಥವಾ ಕೆಲಗಂಟೆಗಳಲ್ಲಿಯೇ ಅದು ಬಂದು ಬಿಡುತ್ತದೆ, ಈ ಮಾತಿನಲ್ಲಿ ಸಂದೇಹವೇ ಇಲ್ಲ. ಕೆಲವರಲ್ಲಿ ತೀವ್ರವಾದ ಅಭೀಪ್ಸೆ ತುಡಿತ ಇರುತ್ತದಾದರೂ ಕೆಲ ಸಲ ವಿರೋಧಿ ಭಾವ ಹಾಗೂ ಪ್ರವೃತ್ತಿಗಳು ದಾಳಿ ಮಾಡುವುದುಂಟು. ಅವರ ಸಂಕಲ್ಪವು ನಿಜವಾಗಿಯೂ ನಿಷ್ಠೆಯಿಂದ ಕೂಡಿದ್ದರೆ, ಅದನ್ನೇ ರಕ್ಷಾಕವಚವನ್ನಾಗಿ ಮಾಡಿಕೊಂಡು ದಾಳಿಯನ್ನು ತಡೆಯಬಹುದು, ವಿರೋಧಿಸಬಹುದು. ಕೆಲವರಲ್ಲಿ ಅವರಿಗರಿವಿಲ್ಲದಂತೆಯೇ ಸಂಶಯ ಪ್ರವೃತ್ತಿ ಇರುತ್ತದೆ, ಇದು ಅತಿ ಅಪಾಯಕಾರಿಯಾದುದು. ಅದೊಂದು ರೀತಿ ಹಣ್ಣಿನೊಳಗೆ ಹುಳು ಸೇರಿದಂತೆ. ಅದು ಕೊನೆಗೆ ಹಣ್ಣನ್ನು ಪೂರ್ತಿಯಾಗಿ ತಿಂದು ಮುಗಿಸುತ್ತದೆ, ಆದ್ದರಿಂದ ಸಂದೇಹ ಬರುತ್ತಿದೆ ಎಂದು ಅನಿಸಿದ ತಕ್ಷಣ– ಸಾಮಾನ್ಯವಾಗಿ ಸಂದೇಹವು ಮೊದಲು ಮನಸ್ಸಿನೊಳಗೆ ಪ್ರವೇಶಿಸುತ್ತದೆ. ದೃಢ

ನಿರ್ಧಾರದ ಮೂಲಕ ಅದನ್ನು ನಿರಾಕರಿಸಬೇಕು. ಸುಮ್ಮನೇ ಕುಳಿತು ವೀಕ್ಷಿಸಬಾರದು. ಏನಾಗುವುದೋ ನೋಡೋಣ ಎಂಬ ಕುತೂಹಲ ನಿಜವಾಗಿಯೂ ತುಂಬ ಅಪಾಯಕಾರಿಯಾದುದು.

ಬುದ್ಧಿಜೀವಿಗಳೆಂದುಕೊಂಡವರಿಗೆ ನಂಬಿಕೆ, ಶ್ರದ್ಧೆ ಇವು ಕಡಿಮೆ; ಯಾರು ಸರಳವಾಗಿದ್ದಾರೋ, ನಿಷ್ಠಾಪೂರ್ಣರಾಗಿದ್ದಾರೋ, ನೇರಾನೇರ ನಡೆನುಡಿಯ–ವರಿಗಿದ್ದಾರೋ, ಅವರಿಗೆ ಬೌದ್ಧಿಕ ಜಟಿಲತೆಗಳ ಗೊಂದಲ ಇರುವದಿಲ್ಲ. ಆದರೆ ಇಂಥವರಿಗಿಂತ ಬುದ್ಧಿಜೀವಿಗಳಲ್ಲಿ ಶ್ರದ್ಧೆ ಕಡಿಮೆ. ಆದರೆ ಅಂಥ ಬುದ್ಧಿಜೀವಿಗೆ ನಿಜವಾದ ಶ್ರದ್ಧೆ ಇದ್ದುದೇ ಆದರೆ ಮಾತ್ರ ಅದು ಅತ್ಯಂತ ಪ್ರಬಲವಾಗಿರುತ್ತದೆ, ನನಗನಿಸುವಂತೆ ಅದು ಅದ್ಭುತ ಪವಾಡಗಳನ್ನೇ ಮಾಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/121**

### ಸಂಪೂರ್ಣ ನಂಬಿಕೆಯುಳ್ಳ ಪ್ರಾರ್ಥನೆ

ಶಕ್ತಿಬೇಕೆಂಬ ಅಭೀಪ್ಸೆ ಇದ್ದರೆ, ಭಗವಂತನನ್ನು ಸಹಾಯಕ್ಕಾಗಿ ಪ್ರಾರ್ಥಿಸುತ್ತಿದ್ದರೆ, ಅದು ಬಂದೇ ಬರುತ್ತದೆ, ಬರದೇ ಇರಲು ಸಾಧ್ಯವೇ ಇಲ್ಲ ಎಂಬ ಅತಿ ಬಲವಾದ ನಂಬಿಕೆಯಿಂದ ಪ್ರಾರ್ಥನೆ ಮಾಡಬೇಕು, ಆಗ ನಿಶ್ಚಿತವಾಗಿಯೂ ಬಂದೇ ಬರುತ್ತದೆ. ಇದು ನಿಜವಾಗಿಯೂ ಅಂತರಂಗದಲ್ಲಿ ತೆರದಿಟ್ಟುಕೊಂಡ ಹಾಗೆ, ಈ ಅಚಲ ವಿಶ್ವಾಸವೇ ನಿಜವಾದ ಉನ್ಮುಖತೆ. ಕೆಲ ಜನರು ಸದಾ ಈ ಸ್ಥಿತಿಯಲ್ಲಿ ಇರುತ್ತಾರೆ. ಪ್ರಸಾದ ಅಥವಾ ಅಂಥದೇನನ್ನಾದರೂ ಸ್ವೀಕಾರ ಮಾಡುವುದಿಲ್ಲ ಆದರೆ ಅವರು ಸದಾ ಮುಂದಿರುತ್ತಾರೆ. ಇನ್ನು ಕೆಲವರಿರುತ್ತಾರೆ, ಕೃಪೆ ಕೆಳಗಿಳಿದು ಬರುವ ಸಂದರ್ಭದಲ್ಲಿ ಸದಾ ತಪ್ಪಿಸಿಕೊಳ್ಳುತ್ತಾರೆ, ನಿರೀಕ್ಷಿತ ತಾಣದಲ್ಲಿರುವುದಿಲ್ಲ. ಯಾರಲ್ಲಿ ಮಗುವಿನಂಥ ನಿಜವಾದ ಮುಗ್ಧತೆ, ಸರಳತೆ ಇದೆಯೋ ಅವರು ಮಾತ್ರ ಸರಿಯಾದ ಸಮಯದಲ್ಲಿ ಸರಿಯಾದ ಜಾಗೆಯಲ್ಲಿದ್ದು ಕೆಳಗಿಳಿದು ಬರುತ್ತಿರುವ 'ಶಕ್ತಿ'ಯನ್ನು ಸ್ವೀಕರಿಸುತ್ತಾರೆ.

ತುಸು ವಿಚಿತ್ರವೆನಿಸುತ್ತದಲ್ಲವೇ? ಮೇಲ್ನೋಟಕ್ಕೆ ಯಾವ ಭೇದವೂ ಇಲ್ಲ. ಒಂದೇ ರೀತಿಯ ಸದಿಚ್ಛೆ, ಒಂದೇ ವಿಧವಾದ ಅಭೀಪ್ಸೆ, ಪರರಿಗೆ ಹಿತವನ್ನುಂಟು ಮಾಡಬೇಕೆಂಬ ಬಯಕೆ, ಎಲ್ಲ ಒಂದೇ ತೆರನಾಗಿರುತ್ತದೆ, ಆದರೆ ಯಾರಲ್ಲಿ ಈ ರೀತಿಯ ಮುಗುಳ್ನಗುವಿನಂಥ ವಿಶ್ವಾಸವಿದೆಯೋ, ಅವರು ಸಂದೇಹಪಡುವುದಿಲ್ಲ,

ಪ್ರಶ್ನೆ ಮಾಡುವುದಿಲ್ಲ, ನನಗದು ದೊರೆಯುವುದೋ ಇಲ್ಲವೋ ಎಂದು ವಿಚಾರ ಕೂಡ ಮಾಡುವುದಿಲ್ಲ, ಅಷ್ಟೇ ಏಕೆ ತಮ್ಮ ಅಭೀಪ್ಸೆಗೆ ಪರಮಾತ್ಮ ಸ್ಪಂದಿಸುವನೋ ಇಲ್ಲವೋ – ಪ್ರಶ್ನೆಯನ್ನೇ ಮಾಡುವುದಿಲ್ಲ, ಅವರಲ್ಲಿ ಅಂಥ ಪ್ರಶ್ನೆ ಉದ್ಭವಿಸುವುದೇ ಇಲ್ಲ, ಒಂದು ರೀತಿಯ ಭರವಸೆ, ವಿಶ್ವಾಸವಿರುತ್ತದೆ ಅಷ್ಟೇ.. ನನಗೇನು ಅವಶ್ಯಕತೆಯಿದೆಯೋ ಅದನ್ನು ಭಗವಂತ ಪೂರೈಸುವುದು ನಿಶ್ಚಿತ. ನಾನು ಪ್ರಾರ್ಥನೆ ಮಾಡಿದರೆ ಪರಮಾತ್ಮ ಅದನ್ನು ಕೇಳಿಯೇ ಕೇಳುತ್ತಾನೆ, ನನಗೆ ಉತ್ತರ ದೊರತೇ ತೀರುತ್ತದೆ. ನನಗೆ ತೊಂದರೆ ಇದ್ದು ನಾನು ಸಹಾಯಕ್ಕಾಗಿ ಅವನನ್ನು ಕೇಳಿದರೆ, ಅವನಿಂದ ಸಹಾಯ ಖಂಡಿತ ಬಂದೇ ತೀರುವುದು – ಬರೀ ಬರುವುದಷ್ಟೇ ಅಲ್ಲ, ಅದು ಎಲ್ಲವನ್ನೂ ಸರಿಪಡಿಸುವುದು. ಸುವ್ಯವಸ್ಥೆಗೊಳಿಸುವುದು ಇಂಥ ನಂಬಿಕೆ ಸಹಜವಾಗಿ, ತಾನೇ ತಾನಾಗಿ ಸ್ಪಷ್ಟವಾಗಿ, ಸ್ವಚ್ಛವಾಗಿ, ಪ್ರಶ್ನಾತೀತವಾಗಿ ಉದ್ಭವಿಸಿದ್ದೇ ಆದರೆ, ಅದು ಎಲ್ಲಕ್ಕಿಂತ ಹೆಚ್ಚು ಕೆಲಸ ಮಾಡುವುದು ಅದರ ಪರಿಣಾಮ ಕೂಡ ಅದ್ಭುತವಾಗಿರುವುದು. ಮನದಲ್ಲಿ ಸಂದೇಹ, ವೈರುಧ್ಯ "ಅಯ್ಯೋ, ಇದು ಸಾಧ್ಯವಿಲ್ಲ, ನನಗಿದನ್ನು ಸರಿಪಡಿಸಲಾಗುವುದಿಲ್ಲ, ಒಂದು ವೇಳೆ ಈ ಪರಿಸ್ಥಿತಿ ಉಲ್ಬಣಿಸಿದರೆ ಏನು ಮಾಡುವುದು? ನಾನು ಹಾಗೆಯೇ ಜಾರಿ ಬೀಳುತ್ತಲೇ ಹೋದರೆ ಮುಂದೇನು..?" ಈ ರೀತಿ ವಿಚಾರ ಮಾಡುತ್ತ ಹೋದರೆ ತನ್ನ ಹಾಗೂ ಇಳಿದು ಬರುತ್ತಿರುವ ಶಕ್ತಿಯ ನಡುವೆ ಒಂದು ದಪ್ಪನಾದ ಗೋಡೆಯನ್ನು ತಾನೇ ಕಟ್ಟಿಕೊಂಡಂತಾಗುತ್ತದೆ. ಅಂತರಾತ್ಮದಲ್ಲಿ ದೃಢವಾದ ವಿಶ್ವಾಸ ಇರುತ್ತದೆ, ಯಾವ ರೀತಿಯ ಸಂದೇಹದ ನೆರಳು ಕೂಡ ಇಲ್ಲದಷ್ಟು ಗಟ್ಟಿಯಾಗಿರುತ್ತದೆ, ಯಾವ ಪ್ರಶ್ನೆ ಇಲ್ಲ, ದ್ವಂದ್ವ ಇಲ್ಲ ಅತ್ಯಂತ ದೃಢವಾದ ನಂಬಿಕೆ ಇರುತ್ತದೆ. ಹಾಗಿದ್ದರೆ ಮಾತ್ರ ಎಲ್ಲ ಸಾಧ್ಯ, ಆಗ ಪ್ರತ್ಯುತ್ತರವಿಲ್ಲದ ಪ್ರಾರ್ಥನೆ ಅಥವಾ ಸಾಕಾರಗೊಳ್ಳದ ಅಭೀಪ್ಸೆ ಇಂಥ ಪ್ರಶ್ನೆ ಹಾಗೂ ಸಾಧ್ಯತೆ ಉದ್ಭವಿಸುವುದೇ ಇಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/403–04**

## ಪ್ರಾರ್ಥನೆ ಮತ್ತು ಅಭೀಪ್ಸೆಯ ಪ್ರಕಾರಗಳು

ಕೆಲವು ಪ್ರಾರ್ಥನೆಗಳು ತುಂಬ ಯಾಂತ್ರಿಕವಾಗಿರುತ್ತವೆ, ಪ್ರಾಪಂಚಿಕ ಅಥವಾ ವ್ಯಾವಹಾರಿಕವಾಗಿರುತ್ತವೆ, ಉರು ಹೊಡೆದ ಅಥವಾ ಹೇಳಿಕೊಟ್ಟ ಶಬ್ದಗಳನ್ನೇ ಪುನರುಚ್ಚರಿಸುತ್ತಿರುವಷ್ಟು ಮಾಂತ್ರಿಕವಾಗಿರುತ್ತವೆ. ಅಂಥವುಗಳಿಂದೇನೂ ವಿಶೇಷ

ಲಾಭವಾಗುವುದಿಲ್ಲ. ಒಂದೇ ಒಂದು ಸಣ್ಣ ಪರಿಣಾಮ, ಏನೆಂದರೆ ಪ್ರಾರ್ಥನೆ ಮಾಡುವ ವ್ಯಕ್ತಿ ನಿರ್ದಿಷ್ಟ ಸಮಯದವರೆಗಾದರೂ ಶಾಂತಿಯಿಂದ ಇರುತ್ತಾನೆ. ಏಕೆಂದರೆ ಪ್ರಾರ್ಥನೆಯನ್ನು ಪುನಃ ಪುನಃ ಹೇಳಿಕೊಳ್ಳುತ್ತಿದ್ದರೆ ಶಬ್ದಗಳ ಪರಿಣಾಮ ಅವನ ಮೇಲಾಗುವುದು ಖಂಡಿತ, ಅವನು ತುಸು ಶಾಂತವಾಗುತ್ತಾನೆ.

ಕೆಲವೊಂದು ಪ್ರಾರ್ಥನೆ ತಾವೇ ತಾವಾಗಿ ಸ್ವಯಂಸ್ಫೂರ್ತಿಯಿಂದ ಹುಟ್ಟುತ್ತವೆ. ಅವು ವ್ಯಕ್ತಿ ತನಗೇನು ಬೇಕಾಗಿದೆ, ಬೇಡಬೇಕಾಗಿದೆ ಎಂಬುದನ್ನು ಖಚಿತವಾಗಿ, ನಿಖರವಾದ ಶಬ್ದಗಳಲ್ಲಿ ವ್ಯಕ್ತಪಡಿಸುತ್ತವೆ. ಆ ವ್ಯಕ್ತಿ ಏನನ್ನೇ ಬೇಡಬಹುದು ಇದನ್ನೋ, ಅದನ್ನೋ, ಈ ವಸ್ತುವನ್ನೋ ಆ ವಸ್ತುವನ್ನೋ, ಇಂಥ ಸ್ಥಿತಿಯನ್ನೋ ಅಂಥ ಸ್ಥಿತಿಯನ್ನೋ, – ಅವನು ನಿರ್ದಿಷ್ಟ ವ್ಯಕ್ತಿಯನ್ನು ಕೇಳಿಕೊಂಡು ಕೂಡ ಪ್ರಾರ್ಥನೆ ಮಾಡಬಹುದು. ಆತ ಏನೋ ಕೇಳಬಹುದು, ಇಂಥದನ್ನೇ ಕೇಳಬೇಕೆಂಬ ನಿಯಮವೇ ಇಲ್ಲ.

ಅಭೀಪ್ಸೆ ಹಾಗೂ ಪ್ರಾರ್ಥನೆ ಎರಡೂ ಸಂಗಮಿಸುವ ಬಿಂದುವೊಂದಿದೆ; ಪ್ರಾರ್ಥನೆಗಳು ಜೀವಂತ ಅಥವಾ ಜೀವಂತ ಅನುಭವಿಸಿದ ಸಂಗತಿಗಳ ಸಹಜ ಅಭಿವ್ಯಕ್ತಿಯಾಗಿದ್ದರೆ ಅವು ಸಂಧಿಸಬಹುದು. ಅವು ಅಂತರಂಗದಿಂದ ತಾವಾಗಿ ಉದಯಿಸುತ್ತವೆ, ಆಳವಾಗಿ ಅನುಭವಿಸಿದ ಸಂಗತಿಗಳ ಅಭಿವ್ಯಕ್ತಿಯಾಗಿ, ಅನುಭವಗಳಿಗಾಗಿ ಸಲ್ಲಿಸುವ ಕೃತಜ್ಞತಾ ಪ್ರಕಟಣೆಗಾಗಿ, ಅಥವಾ ಅನುಭವಗಳ ಮರುಕಳಿಸುವಿಕೆಗಾಗಿ ಅಥವಾ ಅವುಗಳ ನಿರಂತರತೆಗಾಗಿ, ಹಾಗೂ ಕೆಲಸಲ ಆದ ಅನುಭವಗಳ ಅರ್ಥೈಸಿಕೊಳ್ಳುವಿಕೆಗಾಗಿ ಮಾಡಿದ ಪ್ರಾರ್ಥನೆಗಳು ಹೀಗೆ ಅಭೀಪ್ಸೆಯ ಜೊತೆ ಸಂಗಮಿಸುತ್ತವೆ. ಅದೇನೂ ಸರಿ, ಆದರೆ ಅಭೀಪ್ಸೆ ಯಾವಾಗಲೂ ಶಬ್ದಗಳ ಮೂಲಕ ಸಂರಚಿತವಾಗಬೇಕೆಂಬ ನಿಯಮವೇನಿಲ್ಲ. ಹಾಗೊಮ್ಮೆ ಶಬ್ದಗಳಲ್ಲಿ ನಿರೂಪಿತವಾದಾಗ ಅದು ಪ್ರಾರ್ಥನೆ, ಆರಾಧನೆಯಾಗಿ ಬಿಟ್ಟಿರುತ್ತದೆ. ನೀವೊಂದು ವಿಶಿಷ್ಟ ಸ್ಥಿತಿಯನ್ನು ಅನುಭವಿಸ ಬಯಸುತ್ತೀರಿ; ಉದಾಹರಣೆಗಾಗಿ, ನಿಮ್ಮ ಆದರ್ಶಕ್ಕೆ ಹೊಂದಿಕೊಳ್ಳಲಾರದಂಥ ಯಾವುದೋ ಒಂದು ಸಂಗತಿ ಅಥವಾ ಅಂಶ ನಿಮ್ಮೊಳಗಿದೆ ಎಂದು ನಿಮಗೆ ಗೊತ್ತಾಯಿತು ಎಂದು ಭಾವಿಸಿ, ಅದು ಅಜ್ಞಾನದ, ಕತ್ತಲೆಯ ಅಂಶವೆಂಬುದು ನಿಮಗೆ ತಿಳಿಯಿತು, ನೀವೇನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಯತ್ನಿಸುತ್ತಿದ್ದಿರೋ ಅದಕ್ಕೆ ತೀರ ವಿರುದ್ಧವಾದ ಅಥವಾ ವಿಷಯವಾದ ಅಂಶ ಎಂಬುದು ನಿಮಗೆ ಮನದಟ್ಟಾಯಿತು ಎಂದು ಭಾವಿಸಿ; ಆಗ ಏನಾಗುತ್ತದೆ? ನೀವದನ್ನು ಶಬ್ದಗಳ

ಮೂಲಕ ಹೇಳಲಾರಿರಿ, ಅಗ್ನಿ ಜ್ವಾಲೆ ತಾನಾಗಿ ಹೊತ್ತಿ ಉರಿಯುವಂತೆ ನಿಮ್ಮಲ್ಲಿ ಬಯಕೆ, ಅಭೀಪ್ಸೆ ಉದ್ಭವವಾಗಿ ಆ ವಿರುದ್ಧ ಅಂಶವನ್ನು ನೀವದರಲ್ಲಿ ಆಹುತಿ ನೀಡುವಂತಾಗುತ್ತದೆ, ಅದೊಂದು ಜೀವಂತ ಅನುಭವ, ಬೆಳೆಯಬೇಕೆಂಬ ಹೆಬ್ಬಯಕೆ, ಹೆಚ್ಚು ಹೆಚ್ಚು ಸ್ಪಷ್ಟ, ಸ್ವಚ್ಛ ಹಾಗೂ ನಿಖರವಾಗಬೇಕೆಂಬ ಬಯಕೆ ಅದು. ಇದನ್ನೆಲ್ಲ ನೀವು ಆ ಮೇಲೆ ಶಬ್ದ ರೂಪಕ್ಕಿಳಿಸಬಹುದು, ನೆನಪಿಸಿಕೊಂಡು, ಟಿಪ್ಪಣಿ ಬರೆದಿಟ್ಟುಕೊಂಡು ಅನುಭವವನ್ನು ಸಾದ್ಯಂತ ವಿವರಿಸಬಹುದು. ಆದರೆ ಅಭೀಪ್ಸೆ ಎಂಬುದು ಯಾವಾಗಲೂ ಅಗ್ನಿಯಂತೆ ಹೊತ್ತಿ ಫಡಫಡಿಸುತ್ತದೆ, ಉತ್ತರೋತ್ತರ ವರ್ಧಿಸುತ್ತ ನಿಮಗೇನುಬೇಕಾಗಿದೆ. ಏನನ್ನು ಬಯಸುತ್ತೀರಿ ಎಲ್ಲವನ್ನೂ ಪೂರೈಸುತ್ತ ಬೆಳೆಸುತ್ತ ಹೋಗುತ್ತದೆ. ನಾನಿಲ್ಲಿ "ಬಯಕೆ" ಎಂಬ ಶಬ್ದವನ್ನು ಉಪಯೋಗಿಸುತ್ತಿದ್ದೇನೆ ಸರಿಯಾದ ಶಬ್ದವೆಂದರೆ "ಅಭೀಪ್ಸೆ"; ಏಕೆಂದರೆ ಅಭೀಪ್ಸೆಯಲ್ಲಿ ಬಯಕೆಯ ಗುಣವೂ ಇಲ್ಲ ಸಾದೃಶ್ಯವೂ ಇಲ್ಲ.

ಅಭೀಪ್ಸೆಯು ನಿಜವಾಗಿ ಎಲ್ಲವನ್ನೂ ಪರಿಶುದ್ಧಗೊಳಿಸುವ ಅಗ್ನಿ ಇದ್ದಂತೆ, ಅದು ಸಂಕಲ್ಪದ ಅಗ್ನಿ. ಯಾವುದರ ಸಾಕ್ಷಾತ್ಕಾರಕ್ಕಾಗಿ ವ್ಯಕ್ತಿ ಹಂಬಲಿಸುತ್ತಿದ್ದಾನೋ ಅದು ಅಭೀಪ್ಸೆಯ ಹೃದಯದಲ್ಲಿ ಸಾಕಾರಗೊಂಡೇ ಇರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/139–40**

## ಪ್ರಾರ್ಥನೆಯ ಮೂಲಕ ಫಲಿತಾಂಶ ನಿರೀಕ್ಷಿಸುವುದು

*ಶ್ರೀಮಾತೆಯವರೇ, ದೈವೀ ಕೃಪೆಯ ಕಾರ್ಯಾನುಸಂಧಾನ ಬಯಸಿ ನಿಷ್ಠೆಯಿಂದ ಪ್ರಾರ್ಥನೆ ಮಾಡುವುದೆಂದರೆ ಅದರಿಂದ ನಿರ್ದಿಷ್ಟ ಪರಿಣಾಮವನ್ನು, ಫಲಿತಾಂಶವನ್ನು ನಿರೀಕ್ಷಿಸಿದಂತೆಯೇ ಅಲ್ಲವೇ?*

ಹಾಗೇನಿಲ್ಲ, ಅದು ಪ್ರಾರ್ಥನೆಯ ಮೂಲ ಒತ್ತಾಯದ ಧ್ವನಿಯ ಮೇಲೆ ಅವಲಂಬಿಸಿದೆ. ವ್ಯಕ್ತಿಯು ಕೇವಲ ದೈವೀ ಕೃಪೆ ಅಥವಾ ಪರಮಾತ್ಮನನ್ನೂ ಸರಳವಾಗಿ ಪ್ರಾರ್ಥಿಸುತ್ತ, ಪರಮಾತ್ಮನ ಕೈಯಲ್ಲಿ ತನ್ನನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡಿದ್ದೇ ಆದರೆ, ಅದರಿಂದ ಏನೂ ಪ್ರತಿಫಲವನ್ನು ನಿರೀಕ್ಷಿಸಿದಂತಾಗುವುದಿಲ್ಲ. ಏನಾದರೂ ನಿರ್ದಿಷ್ಟ ಫಲಿತಾಂಶ ಬೇಕಾಗಿದ್ದರೆ ಪ್ರಾರ್ಥನೆಯನ್ನು ವ್ಯವಸ್ಥಿತವಾಗಿ ರೂಪಿಸಬೇಕಾಗುತ್ತದೆ, ನಿರ್ದಿಷ್ಟವಾದ ವಸ್ತುವನ್ನು ಕೇಳಬೇಕಾಗುತ್ತದೆ. ನಿಮ್ಮಲ್ಲಿ ಕೇವಲ ಮಹಾ ಅಭೀಪ್ಸೆ ಇದೆ, ಕೇವಲ

ದೈವೀ ಕೃಪೆಯನ್ನು ಬಯಸುತ್ತೀರಿ, ಅದನ್ನೇ ಆರಾಧಿಸುತ್ತೀರಿ, ಪ್ರಾರ್ಥಿಸುತ್ತೀರಿ, ನಿಖರವಾಗಿ ಏನನ್ನೂ ಕೇಳಿಕೊಳ್ಳದೇ, ಬೇಡದೇ ಕೇವಲ ಆರಾಧಿಸುತ್ತೀರಿ, ಆಗ ದೈವೀ ಕೃಪೆಯೇ ನಿಮಗೆ ಏನು ಬೇಕೆಂಬುದನ್ನು ನಿರ್ಣಯಿಸುತ್ತದೆ, ನೀವಲ್ಲ, ಅದೇ ನಿರ್ಣಯಿಸುತ್ತದೆ, ಅದೇ ಪೂರೈಸುತ್ತದೆ.

*ಅದು ಒಳ್ಳೆಯದೇ ಅಲ್ಲವೇ?*

ಓಹ್! ಅದು ಮತ್ತೊಂದು ಪ್ರಶ್ನೆ.

ಏಕೆ? ಅದು ಗುಣಮಟ್ಟದಲ್ಲಿ ಉತ್ತಮವಾಗಿರುತ್ತದೆ, ಶ್ರೇಷ್ಠವಾಗಿರುತ್ತದೆ, ಎಂದೇ? ಆದರೂ ನಿಮಗೆ ಇಂಥದೇ ಎಂಬುದು ನಿಶ್ಚಿತವಾಗಿ ಬೇಕಾಗಿದ್ದರೆ ನೀವದನ್ನು ಸ್ಪಷ್ಟವಾದ ಶಬ್ದಗಳಲ್ಲಿ ಹೇಳಬೇಕು. ಯಾವುದಾದರೊಂದು ನಿರ್ದಿಷ್ಟ ಕಾರಣಕ್ಕಾಗಿ ನೀವು ದೈವೀ ಕೃಪೆಗಾಗಿ ಪ್ರಾರ್ಥಿಸುತ್ತಿದ್ದರೆ ನೀವದನ್ನು ಸ್ಪಷ್ಟವಾಗಿ ಅಸಂದಿಗ್ಧ ಶಬ್ದಗಳ ಮೂಲಕ ಹೇಳಬೇಕು.

ಹ್ಹಾ, ಒಂದು ವೇಳೆ ನೀವು ಸಂಪೂರ್ಣ ಶರಣಾಗತ ಸ್ಥಿತಿಯಲ್ಲಿದ್ದೀರಿ, ಪರಮಾತ್ಮನಿಗೆ ಎಲ್ಲವನ್ನು ಒಪ್ಪಿಸಿಬಿಟ್ಟಿದ್ದೀರಿ, ದೈವೀ ಕೃಪೆಗೆ ಎಲ್ಲವನ್ನೂ ಒಪ್ಪಿಸಿಬಿಟ್ಟು, ಎಲ್ಲವನ್ನು ದೈವೀ ಕೃಪೆಯೇ ಮಾಡಲಿ, ಮಾಡಿಸಲಿ ಎಂದು ನಿಶ್ಚಿಂತೆಯಿಂದ ಇರುವುದು ಸಾಧ್ಯವಾದರೆ, ಅತ್ಯಂತ ಉತ್ತಮ. ಆದರೆ ಅನಂತರ ಮಾತ್ರ ಪ್ರಶ್ನಿಸುವಂತಿಲ್ಲ, ಗೊಣಗುವಂತಿಲ್ಲ. "ನನಗದು ಸಿಕ್ಕೀತೆಂಬ ಕಲ್ಪನೆಯಿಂದ ನಾನು ಹಾಗೆ ಮಾಡಿದೆ" ಎಂದು ಆನಂತರ ಹೇಳುವಂತಿಲ್ಲ. ಏಕೆಂದರೆ ನಿಮಗೆ ನಿರ್ದಿಷ್ಟವಾದುದು ಬೇಕೇ ಆಗಿದ್ದರೆ ಅದನ್ನು ಸ್ಪಷ್ಟವಾದ ಶಬ್ದಗಳಲ್ಲಿ ಅತಿ ನಿಷ್ಠೆಯಿಂದ ದೈವೀ ಕೃಪೆಯ ಮುಂದಿರಿಸಬೇಕು. ಮುಂದಿನದನ್ನು, ಅಂದರೆ ನೀವು ಬೇಡಿದುದನ್ನು ಕೊಡುವುದೋ ಬಿಡುವುದೋ ಎಂಬುದನ್ನು ಆ ಕೃಪೆಗೆ ಬಿಟ್ಟುಬಿಡಬೇಕು. ಏನೇ ಆಗಲಿ ನಿಮಗೆ ಬೇಕಾಗಿರುವುದನ್ನು ಸ್ಪಷ್ಟವಾಗಿ ತೋಡಿಕೊಳ್ಳಬೇಕು, ಅದರಲ್ಲೇನೂ ತಪ್ಪಿಲ್ಲ.

ಕೆಟ್ಟದ್ದಾಗಿ ಎಲ್ಲಿ ಪರಿಣಮಿಸುತ್ತದೆ ಅಂದರೆ, ನಿಮ್ಮ ಪ್ರಾರ್ಥನೆ ಈಡೇರದೇ ಹೋದಾಗ ನೀವು ಪ್ರತಿಭಟನೆಗೆ ಇಳಿದಿರೆಂದರೆ ಮುಗಿಯಿತು, ಅಲ್ಲಿಂದ ಪ್ರಾರಂಭವಾಗುತ್ತದೆ. ಆಗ ಎಲ್ಲವೂ ಕೆಟ್ಟದ್ದೇ ಆಗುತ್ತದೆ. ಆ ಕ್ಷಣದಲ್ಲಿ ವ್ಯಕ್ತಿ ತಿಳಿದುಕೊಳ್ಳಬೇಕಾದ ಅಗತ್ಯವಿದೆ, ತಾನೇನನ್ನು ಬಯಸಿದ್ದನೋ, ಅಭೀಪ್ಸೆ ಏನಿತ್ತೋ ಅದು ಅಷ್ಟೇನೂ ಮಹತ್ವದ್ದಲ್ಲ, ತಾನೇನನ್ನು ಬೇಡಿಕೊಂಡಿದ್ದನೋ

ಅದು ಬಹುಶಃ, ತನ್ನ ಹಿತದ ದೃಷ್ಟಿಯಿಂದ ಸರಿಯಾಗಿರಲಿಲ್ಲವೋ ಏನೋ, ಆ ಕ್ಷಣದಲ್ಲಾತ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಸರಳವಾಗಿ ಆಯಿತು, ಶ್ರೀಮಾತೆಯೇ ನಿನ್ನ ಸಂಕಲ್ಪವೇ ನೆರವೇರಲಿ ಎಂದು ಹೇಳಿ ನಿಶ್ಚಿಂತೆಯಾಗಿ ಇದ್ದುಬಿಡಬೇಕು. ಆದರೆ ಎಲ್ಲಿಯವರೆಗೆ ಆಂತರಿಕ ದೃಷ್ಟಿಕೋನ, ಆಂತರಿಕ ಇಷ್ಟಾನಿಷ್ಟಗಳಿವೆಯೋ, ಅಲ್ಲಿಯವರೆಗೆ ತನ್ನ ಬೇಡಿಕೆಯನ್ನು ನಿಖರವಾಗಿ ಪರಮಾತ್ಮನ ಮುಂದಿಡುವುದು ತಪ್ಪೇನಲ್ಲ, ಅದು ಸಹಜವಾದುದು –

ಉದಾಹರಣೆಗಾಗಿ, ಯಾರೋ ಒಬ್ಬರು ಮೂರ್ಖತನದ ಕೆಲಸ ಮಾಡಿದ್ದರೆ, ತಪ್ಪು ಮಾಡಿದ್ದರೆ, ಅಂಥವರು ಕೂಡ ಮುಂದೆಂದೂ ಅಂಥ ತಪ್ಪು ಮಾಡುವುದಿಲ್ಲವೆಂದು ನಿಷ್ಠೆಯಿಂದ ಪ್ರಾಮಾಣಿಕವಾಗಿ ಪ್ರಾರ್ಥಿಸುತ್ತಿದ್ದರೆ, ಅದರಲ್ಲೇನೂ ತಪ್ಪಿಲ್ಲವೆಂದು ನಾನು ಭಾವಿಸುತ್ತೇನೆ, ಹಾಗೆ ನೋಡಿದರೆ ಅಂಥವರು ನಿಷ್ಠೆಯಿಂದ ಪ್ರಾರ್ಥಿಸಿದ್ದೇ ಆದರೆ ಅವರಿಗೆ ಆ ರೀತಿಯ ವರ ಸಿಕ್ಕುವ ಅವಕಾಶ ಹೆಚ್ಚು.

ಭಗವಂತ ನಿಮ್ಮ ವಿರೋಧವಾಗಿದ್ದಾನೆ ಎಂದು ಭಾವಿಸಬಾರದು. ಅವನೇನೂ ನಿಮ್ಮ ವಿರೋಧಿ ಅಲ್ಲ, ಅವನು ಹಾಗೆ ಮಾಡಲಾರ. ಆದರೆ, ಅವನು ನಿಮಗಿಂತ ಹೆಚ್ಚು ಚೆನ್ನಾಗಿ ನೋಡಬಲ್ಲ, ನಿಮಗೆ ನಿಜವಾಗಿ ಯಾವುದು ಹಿತವೆಂಬುದು ಅವನಿಗೆ ಗೊತ್ತು. ಅತ್ಯಂತ ಅನಿವಾರ್ಯವಾದ ಸಂದರ್ಭಗಳಲ್ಲಿ ಮಾತ್ರ ಅವನು ನಿಮ್ಮ ಬಯಕೆಯನ್ನು ವಿರೋಧಿಸಬಹುದು. ಅನ್ಯಥಾ ನೀವು ಬೇಡಿದ್ದೆಲ್ಲವನ್ನು ನೀಡಲು ಅವನು ಸದಾ ಸಿದ್ಧನಾಗಿರುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/254–55**

## ಬೇರೆ ಬೇರೆ ಪ್ರಕಾರದ ಪ್ರಾರ್ಥನೆಗಳು

ಭಕ್ತರೂ ಸಹ ಅನೇಕ ಪ್ರಕಾರದವರಿರುತ್ತಾರೆ, ಅವರು ಮಾಡುವ ಪ್ರಾರ್ಥನೆ, ಸ್ತೋತ್ರಗಳೂ ಕೂಡ ಅದೇ ರೀತಿ ಭಿನ್ನ ಭಿನ್ನವಾಗಿರುತ್ತವೆ. ಅರ್ತವಾದ ಸ್ಥಿತಿಯಿಂದ, ದುಃಖ ತೊಂದರೆಗಳಿಂದ ತ್ರಸ್ತನಾದ ಭಕ್ತನು, ತನ್ನ ಆಕ್ರಂದವನ್ನು, ಮೊರೆಯನ್ನು ಭಗವಂತನು ಕೇಳಲಿ ಎಂಬ ಉದ್ದೇಶದಿಂದ, ಅವನಿಂದ ಸಹಾಯ ದೊರೆತು ತನ್ನ ಕಷ್ಟಗಳು ನೀಗಲಿ ಎಂಬ ಉದ್ದೇಶದಿಂದ, ಅಂಥವೇ ಸೋತ್ರಗಳನ್ನು, ಪ್ರಾರ್ಥನೆಗಳನ್ನು ಭಗವಂತನಿಗೆ ಸಲ್ಲಿಸುತ್ತಾನೆ. ಯಾವುದೋ

ಒಂದು ನಿರ್ದಿಷ್ಟ ಉದ್ದೇಶದಿಂದ ಭಕ್ತನಾಗಿ ಪರಿವರ್ತನೆ ಹೊಂದಿದ ವ್ಯಕ್ತಿ ಆ ತನ್ನ ಉದ್ದೇಶದ ಈಡೇರಿಕೆಗಾಗಿ ಪ್ರಾರ್ಥನೆ ಮಾಡುತ್ತಾನೆ, ಅಂದರೆ ಸಂಪತ್ತು, ಕೀರ್ತಿ, ಸುಖ–ಸಂತೋಷ, ಅಭಿವೃದ್ಧಿ, ವಿಜಯ, ಭೋಗೈಶ್ವರ್ಯ, ಮುಕ್ತಿ ಇತ್ಯಾದಿಗಳ ಪೂರ್ತಿಯಾಗಿ ಗಳಿಸಿಕೊಳ್ಳುವಲ್ಲಿ ಪ್ರಾರ್ಥನೆ ಮಾಡುತ್ತಾನೆ. ಈ ವರ್ಗದ ಭಕ್ತರು ಭಗವಂತನನ್ನೇ ತಪ್ಪುದಾರಿಗೆಳೆಯಲು ಕೆಲಸಲ ಪ್ರಯತ್ನಿಸುತ್ತಾರೆ. ತಮ್ಮ ಬಯಕೆ ನೆರವೇರಲಿಲ್ಲವೋ ತುಂಬ ವ್ಯಗ್ರರಾಗುತ್ತಾರೆ, ಕ್ರುದ್ಧರಾಗುತ್ತಾರೆ, ಭಗವಂತನನ್ನು ನಿಂದಿಸಲು ಆರಂಭ ಮಾಡುತ್ತಾರೆ, ಅವನು ಮೋಸಗಾರ, ಅವನು ನಿರ್ದಯಿ, ಕ್ರೂರ, ಎಂದೆಲ್ಲ ಜರಿಯುತ್ತ, ಇನ್ನೆಂದು ಅವನನ್ನು ಪೂಜಿಸುವುದಿಲ್ಲ, ಅವನ ಮುಖ ನೋಡಲಿಚ್ಚಿಸುವುದಿಲ್ಲ, ಅಷ್ಟೇ ಏಕೆ ಅವನಿದ್ದಾನೆ ಎಂಬುದನ್ನೇ ಒಪ್ಪುವುದಿಲ್ಲ ಎಂದು ಎಗರಾಡತೊಡಗುತ್ತಾರೆ. ಅನೇಕ ಜನರಂತೂ ನಿರಾಶೆಯಿಂದ ದೈವ ವಿರೋಧಿಗಳಾಗಿ, ನಾಸ್ತಿಕರಾಗಿ ಬದಲಾಗುತ್ತಾರೆ, ಈ ಜಗತ್ತು ದುಃಖ, ಹಿಂಸೆ, ನೋವುಗಳ ಕ್ಷೇತ್ರ, ಇಲ್ಲಿ ದೇವರು ಇಲ್ಲವೇ ಇಲ್ಲ ಎಂಬ ನಿರ್ಣಯಕ್ಕೆ ಬಂದು ಬಿಡುತ್ತಾರೆ. ಈ ವರ್ಗದ ಜನರ ಆರಾಧನೆ ನಿಜವಾಗಿ ಅಜ್ಞಾನ ಜನ್ಯವಾದುದು. ಆದರೂ ಸಹ ಅವರ ‘ಆರಾಧನೆ’ಯನ್ನು ತಳ್ಳಿಹಾಕಲಾಗದು. ಏಕೆಂದರೆ, ಏರುವುದೆಂದರೆ ಹಾಗೇ ತಾನೇ? ಸಣ್ಣದರಿಂದ ದೊಡ್ಡದಕ್ಕೆ ಹೋಗಬೇಕು, ಕೆಳಗಿನಿಂದ ಮೇಲಕ್ಕೆ ಹೋಗಬೇಕು. ಅಜ್ಞಾನದ ಅವ್ಯವಸ್ಥೆಯಿಂದಲೇ ಜ್ಞಾನದ ಸುವ್ಯವಸ್ಥೆಗೆ ಹೋಗಬೇಕು. ಈಗ ಒಂದು ಮಗು, ಅದು ಮುಗ್ಧವಾದುದು, ಅದರ ಮುಗ್ಧತೆಯಲ್ಲೇ ಒಂದು ತೆರನಾದ ಮೋಹಕತೆ ಅಡಗಿದೆ. ಆ ಮಗು ಅಳುತ್ತಲೇ ತಾಯಿಯ ಕಡೆಗೆ ಬರುತ್ತದೆ. ತೊಂದರೆಯಿಂದ, ಕಷ್ಟದಿಂದ ಪಾರು ಮಾಡುವಂತೆ ಕೇಳುತ್ತದೆ. ಸಮಾಧಾನಕ್ಕಾಗಿ, ಸ್ವಹಿತದ ಅಪೇಕ್ಷೆಯಿಂದ ತಾಯಿಯೆದುರು ಹೋಗಿ ಅಳುತ್ತದೆ, ಕರೆಯುತ್ತದೆ, ವಾದ ಮಾಡುತ್ತದೆ, ತಾಯಿ ಕೇಳಲಿಲ್ಲವೋ ಆಗ ಸಿಟ್ಟಿಗೇಳುತ್ತದೆ, ಒದರಾಡುತ್ತದೆ, ತಾಯಿಗೇ ತೊಂದರೆ ನೀಡಲು ಆರಂಭಿಸುತ್ತದೆ. ಆದರೂ ಕೂಡ, ತಾಯಿಯಾದವಳು, ಈ ವಿಶ್ವಮಾತೆಯು ಸಹ, ಈ ಮುಗ್ಧ, ಅಜ್ಞಾನಾವೃತ ಭಕ್ತರ ಬೇಡಿಕೆಗಳನ್ನು, ಗದ್ದಲವನ್ನು ನಗುಮುಖದಿಂದಲೇ ಸಹಿಸಿಕೊಳ್ಳುತ್ತಾಳೆ.

ಇನ್ನು ಜಿಜ್ಞಾಸೆ, ಅಂದರೆ ಜ್ಞಾನಕ್ಕಾಗಿ ಪ್ರಯತ್ನಪಡುವ ಸಾಧಕನು ಈ ಸ್ತೋತ್ರ, ಪ್ರಾರ್ಥನೆ ಮುಂತಾದವುಗಳಿಗೆ ಮೊರೆ ಹೊಗುವುದಿಲ್ಲ. ತನಗೆ ಬೇಕಾದ ಜ್ಞಾನಕ್ಕಾಗಿ, ಅಥವಾ ಭಗವಂತನ ಜ್ಞಾನಕ್ಕಾಗಿ ಅವನು ಪೂಜೆ, ಆರಾಧನೆ,

ಇವುಗಳ ಬೆನ್ನು ಬೀಳುವುದಿಲ್ಲ. ಅವನ ಮಟ್ಟಿಗೆ ಧ್ಯಾನ, ಸ್ತೋತ್ರ, ಪ್ರಾರ್ಥನೆ ಇವೆಲ್ಲ ಪರಮಾತ್ಮನನ್ನು ತಿಳಿದುಕೊಳ್ಳಲು ಬೇಕಾದ ಸಾಧನಗಳು ಹಾಗೂ ತನ್ನ ಪ್ರಜ್ಞೆಯನ್ನು ಬೆಳಸಿಕೊಳ್ಳುವ ಉಪಾಯಗಳು. ಆದರೆ ಜ್ಞಾನಿಯಾದ ಸಾಧಕನಿಗೆ ಈ ಪ್ರಾರ್ಥನೆಯ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಅವನಿಗೆ ಈಗಾಗಲೇ ಆತ್ಮಜ್ಞಾನವಾಗಿದೆ, ಅವನ ಪ್ರಜ್ಞೆ ಪ್ರತಿಷ್ಠಿತವಾಗಿದೆ; ಪ್ರಾರ್ಥನೆ, ಸ್ತೋತ್ರ ಇವೆಲ್ಲ ಬೇಕಾಗಿರುವುದು ಹೃದಯದಲ್ಲಿ ತುಂಬಿರುವ ಭಾವನೆಗಳನ್ನು ಪ್ರಕಟಪಡಿಸಲು, ಅಭಿವ್ಯಕ್ತಗೊಳಿಸಲು, ಅಂತೆಯೇ ಭಗವದ್ಗೀತೆ ಹೀಗೆ ಹೇಳುತ್ತದೆ, "ನಾಲ್ಕು ತರಹದ ಭಕ್ತರಿದ್ದಾರೆ, ಅವರೆಲ್ಲರೂ ಸುಕೃತಿಗಳೇ. ಯಾರೂ ಕನಿಷ್ಠರಲ್ಲ, ನಗಣ್ಯರಲ್ಲ, ಭಗವಂತನಿಗೆ ಎಲ್ಲರೂ ಪ್ರಿಯರೇ ಆದರೂ ಅವರೆಲ್ಲರಲ್ಲಿ ಜ್ಞಾನಿಯು ಅವನಿಗೆ ಹೆಚ್ಚು ಪ್ರಿಯನು, ಏಕೆಂದರೆ ಯಾರಿಗೆ ಜ್ಞಾನ ಸಾಕ್ಷಾತ್ಕಾರವಾಗಿದೆಯೋ ಅವರಿಗೆ ಮತ್ತು ಭಗವಂತನಿಗೆ ವಿಶೇಷ ಭೇದವಿಲ್ಲ. ಇಬ್ಬರೂ ಒಂದೇ ಆಗಿರುತ್ತಾರೆ."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 9/186–87 – ಶ್ರೀ ಅರವಿಂದರು**

**ಸಾಮೂಹಿಕ ಧ್ಯಾನ ಮತ್ತು ಪ್ರಾರ್ಥನೆ**

ಸಾಮೂಹಿಕ ಧ್ಯಾನವೆಂದರೆ ನಿರ್ದಿಷ್ಟವಾದ ಉದ್ದೇಶಕ್ಕಾಗಿ ಕೆಲ ಜನರು ಒಂದೆಡೆ ಸೇರಿ ಧ್ಯಾನ ಮಾಡುವುದು. ಉದಾಹರಣೆ, ಅನೇಕ ಜನರು ಒಂದೆಡೆ ಸೇರಿ ಪ್ರಾರ್ಥನೆ ಮಾಡುವ ಸಂಪ್ರದಾಯ ಎಲ್ಲ ಜನಾಂಗಗಳಲ್ಲೂ ಎಲ್ಲ ಯುಗಗಳಲ್ಲೂ ಇದ್ದೇ ಇದೆ. ಸಾಮಾನ್ಯವಾಗಿ ಚರ್ಚುಗಳಲ್ಲಿ, ಸಾಮೂಹಿಕ ಧ್ಯಾನವೇ ನಡೆಯುತ್ತದೆ, ಚರ್ಚುಗಳ ಹೊರಗೆ ಕೂಡ ಕೆಲವರು ಗುಂಪು. ಧ್ಯಾನ ಅಥವಾ ಸಮೂಹ ಧ್ಯಾನಕ್ಕಾಗಿ ಸಾಮೂಹಿಕ ಧ್ಯಾನ ಶಿಬಿರಗಳನ್ನು ಏರ್ಪಡಿಸುತ್ತಾರೆ. ಈ ರೀತಿಯ ಪ್ರಾರ್ಥನೆಯಲ್ಲಿ ಕೂಡ ಎರಡು ವಿಧಗಳಿವೆ.

ಮಾನವ ಜನಾಂಗದ ಆರಂಭದಿಂದಲೂ ಈ ರೀತಿ ಅನೇಕ ಜನರು ಒಂದೆಡೆ ಸೇರಿ, ತಮ್ಮೆಲ್ಲರಲ್ಲಿ ಸಮಾನವಾಗಿರುವ ಆತ್ಮಸ್ಥಿತಿಯನ್ನು ತೋಡಿಕೊಳ್ಳಲು ಅಥವಾ ಪ್ರಚುರಪಡಿಸಲು ಸಾಮೂಹಿಕ ಧ್ಯಾನ ಮಾಡುವ ಪದ್ಧತಿ ಸಂಪ್ರದಾಯ ಇದ್ದಿತು. ಭಗವಂತನ ನಾಮಸ್ಮರಣೆ ಮಾಡಲು, ಅವನ ಕೀರ್ತನ ಮಾಡಲು, ಉಪಕೃತಿ ಸಲ್ಲಿಸಲು, ಆರಾಧನೆಯನ್ನು ಪ್ರಕಟಪಡಿಸಲು, ಭಗವಂತನನ್ನು ಹಾಡಿ

ಹೊಗಳಲು, ಸ್ತುತಿಸಲು ಹೀಗೆ ಬೇರೆ ಬೇರೆಯಾದ ಆದರೆ ಒಂದೇ ರೀತಿಯ ಅಭೀಪ್ಸೆಯಿಂದ ಅನೇಕ ಜನರು ಒಂದೆಡೆ ಸೇರಿ ಗಾಯನ ಸಭೆ ಏರ್ಪಡಿಸುತ್ತಿದ್ದರು. ಇನ್ನುಳಿದ ಕೆಲವರು, – ಐತಿಹಾಸಿಕವಾಗಿ ಕೂಡ ಇದಕ್ಕೆ ಪುಷ್ಠಿ ನೀಡಬಹುದು – ಅನೇಕ ಜನರು ಒಂದೆಡೆ ಸೇರಿ ತಮ್ಮ ಕೋರಿಕೆಯನ್ನು ಭಗವಂತನೆದುರು ತೋಡಿಕೊಳ್ಳುತ್ತಿದ್ದರು, ಅನೇಕ ಜನರು ಸೇರಿ ಈ ಪ್ರಾರ್ಥನೆ ಮಾಡುತ್ತಿದ್ದರು, ತಮ್ಮ ಆರಾಧನೆ, ತಮ್ಮ ಪ್ರಾರ್ಥನೆಗೆ ಈ ರೀತಿ ಎಲ್ಲರೂ ಸೇರಿಕೊಂಡು ಮಾಡುವುದರಿಂದ ಅಧಿಕ ಬಲ ಬರುತ್ತದೆ ಎಂಬ ವಿಶ್ವಾಸ ಅವರಲ್ಲಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/37**

## ಸಾಮೂಹಿಕ ಪ್ರಾರ್ಥನೆಯ ವಿವಿಧ ಪ್ರಕಾರಗಳು

ಅನೇಕ ಪ್ರಕಾರದ ಗುಂಪುಗಳಿರುವಂತೆ, ಅನೇಕ ಪ್ರಕಾರದ ಸಾಮೂಹಿಕ ಪ್ರಾರ್ಥನೆಗಳೂ ಇರುತ್ತವೆ. ಯಾರು ಯಾರೋ ಸೇರಿ ಆದ ಗುಂಪು, ಜನ ಸಮೂಹ, ಸಂದರ್ಭಾನುಸಾರ ಸೇರಿದ ಗುಂಪು, ಆಂತರಿಕವಾಗಿ ಸಹಕಾರ ಇಲ್ಲದೇ ಸುಮ್ಮನೇ ಒಂದೆಡೆ ಸೇರಿದ ಜನ, ಉದಾಹರಣೆಗೆ, ಅನೇಕ ಜನರ ಆಕರ್ಷಣೆಯ ಕೇಂದ್ರವಾಗಿದ್ದ ರಾಜ ಅಥವಾ ಪ್ರಭಾವಿ ವ್ಯಕ್ತಿ ತುಸು ಗಂಭೀರ ಸ್ಥಿತಿಯಲ್ಲಿದ್ದಾನೆ, ವ್ಯಾಧಿಪೀಡಿತನೋ ಅಥವಾ ಅಪಘಾತಕ್ಕೆ ಸಿಲುಕಿದ್ದಾನೋ, ಆಗ ಜನ ಅವನ ಸುದ್ದಿಗಾಗಿ, ಅವನ ಬಗ್ಗೆ ತಿಳಿದುಕೊಳ್ಳುವ ಕುತೂಹಲದಿಂದ ಒಂದೆಡೆ ಸೇರುತ್ತಾರೆ, ಅವನ ಬಗ್ಗೆ ಮಾತನಾಡುತ್ತ ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಿರುತ್ತಾರೆ. ಕೇವಲ ಸಂದರ್ಭಾನುಸಾರ ಅಲ್ಲಿ ಜನ ಸೇರಿದ್ದಾರೆ ಅಷ್ಟೇ, ಅವರಾರಿಗೂ ಆಂತರಿಕ ಸಂಬಂಧ ಇಲ್ಲ. ಅಂಥದರಲ್ಲಿ ಏನೋ ಒಂದು ಸಂಚಲನೆ–ಯುಂಟಾಗುತ್ತದೆ, ಎಲ್ಲರೂ ಸೇರಿ ಆ ವ್ಯಕ್ತಿಯು ಗುಣಮುಖನಾಗಲೆಂದು ಪ್ರಾರ್ಥನೆ ಮಾಡತೊಡಗುತ್ತಾರೆ. ಕೆಲವರಂತೂ ತಮಗೆ ಇಷ್ಟರಾಗಿದ್ದವರ ಒಳಿತಿಗಾಗಿ ಪ್ರಾರ್ಥಿಸುತ್ತಾರೆ. ಹೌದು, ಏಕೆಂದರೆ ಅಲ್ಲಿ ಜನ ಬೇರೆ ಬೇರೆ ಉದ್ದೇಶಗಳಿಗಾಗಿ ಸೇರಿದ್ದಾರೆ, ಕೆಲವರಲ್ಲಿ ದ್ವೇಷವಿದೆ, ಅವರ ಆಕ್ರಂದನ (ಶಾಪ) ಕೂಡ ಒಂದು ರೀತಿ ಪ್ರಾರ್ಥನೆಯೇ, ವಿರೋಧಿ ಶಕ್ತಿಗಳಿಗೆ, ದುಷ್ಟಶಕ್ತಿಗಳಿಗೆ ಸಲ್ಲುವ ಪ್ರಾರ್ಥನೆ ಅದು –

ಅವು ಸ್ವಯಂ ಆಗಿ ನಿರ್ಮಾಣವಾದ ಪ್ರಸಂಗಗಳು, ವ್ಯವಸ್ಥಿತವಾಗಿ ನೆರವೇರಿಸಿದವುಗಳಲ್ಲ, ಅವು ಅನೀರಿಕ್ಷಿತ ಕೂಡ.

ಇನ್ನು ಕೆಲವೆಡೆ ಕೆಲಜನ ಸೇರುತ್ತಾರೆ, ಒಂದೇ ಆದರ್ಶ, ಒಂದೇ ಬೋಧನೆಯ ಅಥವಾ ಕಾರ್ಯದ ನಿಮಿತ್ತ ಸೇರಿದ ಗುಂಪಿನ ಜನ. ಅವರಿಗೆ ಆ ಆದರ್ಶ, ಬೋಧನೆ ಕಾರ್ಯಗತವಾಗಬೇಕೆಂಬ ಅಪೇಕ್ಷೆ, ಅಂಥವರ ನಡುವೆ ಸುವ್ಯವಸ್ಥಿತವಾದ ಸಂಬಂಧವಿದೆ, ಸಂಪರ್ಕ ಇದೆ. ಅದು ಯಾವುದೆಂದರೆ ಒಂದೇ ಉದ್ದೇಶ, ಒಂದೇ ಸಂಕಲ್ಪ, ಒಂದೇ ವಿಶ್ವಾಸ. ಅಂಥವರು ಒಂದೆಡೆ ವ್ಯವಸ್ಥಿತವಾಗಿ ಸೇರಿಕೊಂಡ ಸಾಮೂಹಿಕ ಧ್ಯಾನ, ಪ್ರಾರ್ಥನೆ ನೆರವೇರಿಸಬಹುದು. ಅವರ ಗುರಿ ಉನ್ನತವಾಗಿದ್ದರೆ, ವ್ಯವಸ್ಥೆ ಚೆನ್ನಾಗಿದ್ದರೆ, ಅವರ ಆದರ್ಶ ಪ್ರಬಲವಾಗಿದ್ದರೆ, ಅಂಥವರ ಸಾಮೂಹಿಕ ಧ್ಯಾನ ಮತ್ತು ಪ್ರಾರ್ಥನೆಗಳು ಜಾಗತಿಕ ಘಟನೆಗಳ ಮೇಲೆ ಕೂಡ ಪರಿಣಾಮ ಬೀರಬಲ್ಲವು, ಅವರವರ ಆಂತರಿಕ ಅಭಿವೃದ್ಧಿ ಹಾಗೂ ಸಾಮೂಹಿಕ ಸಾಧನೆಯ ಪ್ರಗತಿಗೆ ಬಲ ಬರುವುದು. ಇಂಥ ಗುಂಪು ಉಳಿದವುಗಳಿಗಿಂತ ತುಂಬ ಶ್ರೇಷ್ಠ, ಮುಖ್ಯವಾಗಿ ಅಲ್ಲಿ ಜನಜಂಗುಳಿಯ ಕುರುಡು ಬಲ ಇರುವುದಿಲ್ಲ, ಜನ ಜಂಗುಳಿಯ ಸಾಮೂಹಿಕ ಕಾರ್ಯ ಸಾಮರ್ಥ್ಯ ಇರುವುದಿಲ್ಲ. ಅಂಥ ಗುಂಪು ಜನ ಜಂಗುಳಿಯ ಭಾವೋದ್ವೇಗತೆ, ತೀವ್ರತೆಯ ಪರ್ಯಾಯವಾಗಿ ಉದ್ದೇಶಪೂರ್ವಕ ಮತ್ತು ಪ್ರಜ್ಞಾಪೂರ್ವಕ ವ್ಯವಸ್ಥೆಯನ್ನು ಬಳಸಿಕೊಳ್ಳುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/369–70 – ಶ್ರೀಮಾತೆ**

ನಮ್ಮಲ್ಲಿ ಯಾರಿಗೆಲ್ಲ ಉದ್ಧಾರಗೊಳ್ಳಬೇಕೆಂಬ ಒಂದೇ ಬಯಕೆ, ಆದರ್ಶ ಇದೆಯೋ ಅವರೆಲ್ಲ ಒಂದೆಡೆ ಸೇರೋಣ. ಈ ರೀತಿ ಸೇರುವಿಕೆಯಿಂದ ಮತ್ತು ಇಂಥ ಗುಂಪಿನ ಮೂಲಕ ವಿರೋಧಿ ಶಕ್ತಿಗಳಾದ ಕತ್ತಲೆ, ಅಜ್ಞಾನ, ವಿನಾಶಗಳ ದಾಳಿಯನ್ನು ಎದುರಿಸೋಣ ಮತ್ತು ಗೆಲ್ಲೋಣ. ಏಕತೆಯಲ್ಲಿಯೇ ಶಕ್ತಿ ಇದೆ, ಏಕತೆಯಲ್ಲಿಯೇ ಬಲ ಇದೆ, ಏಕತೆಯಲ್ಲಿಯೇ ವಿಜಯದ ಖಚಿತತೆ ಇದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/194–95 – ಶ್ರೀಮಾತೆ**

# ಪ್ರಾರ್ಥನೆ ಮತ್ತು ಗಮ್ಯತೆ

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

## ಪ್ರಾರ್ಥನೆಯ ಹಸ್ತಕ್ಷೇಪದಿಂದ ಗಮ್ಯದ ಬದಲಾವಣೆ

ಜೀವಿಸುವ ಕಲೆ ಹೇಗಿರಬೇಕೆಂದರೆ ನಾವು ಯಾವಾಗಲೂ ನಮ್ಮ ಉನ್ನತ ಪ್ರಜ್ಞೆಯ ಸ್ಥಿತಿಯಲ್ಲಿ ಇರಬೇಕು. ಆಗ ನಮ್ಮ ಉನ್ನತವಾದ ಗಮ್ಯವು, ಬೇರೆಯವರದಕ್ಕಿಂತ ಜೀವನದಲ್ಲಿ ಮತ್ತು ಕ್ರಿಯೆಯಲ್ಲಿ ಪ್ರಾಬಲ್ಯವಾಗಿರುತ್ತದೆ. ಆದ್ದರಿಂದ ನಾವು ಯಾವುದೇ ಅಂಜಿಕೆ ಇಲ್ಲದೆ, ತಪ್ಪು ಮಾಡಲಾರವೆಂದು ಹೇಳಬಹುದು. ಅನವರತ ನಿಮ್ಮ ಪ್ರಜ್ಞೆಯ ಶೃಂಗದಲ್ಲಿದ್ದಾಗ ಯಾವಾಗಲೂ ನಿಮಗೆ ಒಳ್ಳೆಯದೇ ಆಗುತ್ತದೆ. ಆದರೆ ಅದು ಅತ್ಯುನ್ನತವಾದದ್ದು, ಅಷ್ಟೊಂದು ಸುಲಭವಾಗಿ ತಲುಪಲಾಗುವುದಿಲ್ಲ. ಯಾವಾಗ ಈ ಆದರ್ಶ ಸ್ಥಿತಿಯನ್ನು ಸಾಕ್ಷಾತ್ಕರಿಸಿ–ಕೊಳ್ಳಲಾಗುವುದಿಲ್ಲವೋ, ಆಗ ವ್ಯಕ್ತಿಯು, ಕನಿಷ್ಠ ಯಾವಾಗ ಅವನು ಅಪಾಯ ಅಥವಾ ನಿರ್ಣಾಯಕ ಸ್ಥಿತಿಯನ್ನು ತಲುಪುತ್ತಾನೋ, ಆಗ ಅವನು ಉನ್ನತವಾದ ಗಮ್ಯವನ್ನು ಅಭಿಪ್ಸೆಯಿಂದಲೇ ಕರೆಯಬೇಕು, ಪ್ರಾರ್ಥನೆ ಮತ್ತು ನಂಬಿಕೆಯಿಂದ ದೈವೀ ಸಂಕಲ್ಪಕ್ಕೆ ಶರಣಾಗಬೇಕು. ನಂತರ, ಅವನ ಪ್ರಾಮಾಣಿಕತೆಗನುಗುಣವಾದ ಕರೆಯಂತೆ ಈ ಉನ್ನತವಾದ ಗಮ್ಯವು ವ್ಯಕ್ತಿಯ ಸಾಮಾನ್ಯ (ಗುರಿಯನ್ನು) ಗಮ್ಯವನ್ನು ಅನುಕೂಲಕರವಾಗಿ ಹಸ್ತಕ್ಷೇಪ ಮಾಡುತ್ತದೆ ಮತ್ತು ಅದು ಅವನ ವ್ಯಕ್ತಿಗತ ಸಂಬಂಧ ಘಟನೆಗಳನ್ನು ಬದಲಾಯಿಸುತ್ತದೆ. ಹಾಗೂ ಇಂತಹ ಘಟನೆಗಳು ಹೊರ ಪ್ರಜ್ಞೆಗೆ ಪವಾಡವಾಗಿ ಕಾಣಿಸುತ್ತವೆ, ದೈವೀ ಹಸ್ತಕ್ಷೇಪವಾಗಿ ತೋರುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/78–79** **– ಶ್ರೀಮಾತೆ**

## ಪ್ರಾರ್ಥನೆಯ ಫಲದಾಯಕತ್ವ

– ಅನುವಾದ: ಪುಟ್ಟು ಕುಲಕರ್ಣಿ

ಪ್ರಾರ್ಥನೆಯ ಫಲದಾಯಕತ್ವದ ಗುಣವನ್ನು ಯಾವಾಗಲೂ ಸಂದೇಹಾಸ್ಪದವಾಗಿಯೇ ಗಮನಿಸಲಾಗುತ್ತಿದೆ. ಅದಕ್ಕಿಂತ ಮೇಲಾಗಿ ಸ್ವತಃ ಪ್ರಾರ್ಥನೆಯೇ ಒಂದು ಅಸಂಗತ (ತರ್ಕರಾಹಿತ್ಯದ) ವಸ್ತುವಾಗಿದ್ದು ಮತ್ತು ಅದು ಅವಶ್ಯಕತೆಗಿಂತ ಹೆಚ್ಚೇ ಅತಿರಿಕ್ತವಾಗಿ ಮತ್ತು ಪರಿಣಾಮರಹಿತವಾಗಿದೆ ಎಂದೇ ಭಾವಿಸಲ್ಪಟ್ಟಿದೆ. ವಿಶ್ವದ ಇಚ್ಛೆಯು ಯಾವಾಗಲೂ "ತನ್ನದೇ ಗುರಿಯನ್ನು"

ಅನುಷ್ಠಾನಗೊಳಿಸುತ್ತದೆ ಎನ್ನುವದು ಸತ್ಯ, ಮತ್ತು ಅಹಂಕಾರಪೂರಿತವಾದ ತುಷ್ಟೀಸಾಧನಗಳ ಮತ್ತು ಸಾನುನಯತೆಯಿಂದ (ವಿನಂತಿಪೂರ್ವಕ) ಕೂಡಿದ ಮನವಿಗಳಿಂದ ಎಂದಿಗೂ ಅದು ತನ್ನ ಪಥದಿಂದ ಬದಲುಗೊಳ್ಳುವದಿಲ್ಲ.

ಈ ವಿಶ್ವದ ನಿಯತಿಯ ಪ್ರಕಾರವಾಗಿ, ಯಾವುದು ತನ್ನನ್ನು ತಾನೇ ಅಭಿವ್ಯಕ್ತಗೊಳಿಸಿಕೊಳ್ಳುತ್ತಿದೆಯೋ, ಆ ವಿಶ್ವೋತ್ತೀರ್ಣ (ಪಾರಮಾರ್ಥ ಸತ್ಯ) ವು ಆ ನಿಯತಿಯ ಪ್ರಕಾರವಾಗಿಯೇ, ತಾನು ಸರ್ವಜ್ಞವಾಗಿರುವದರ ಜೊತೆಗೆ – ಅವನ ಆ ಬೃಹದ್–ಜ್ಞಾನವೂ ಖಚಿತವಾಗಿ ಅದನ್ನು ಪೂರ್ವಭಾವಿಯಾಗಿಯೇ (ಮುಂಗಾಣ್ಕೆಯಲ್ಲಿಯೇ) ಕಂಡು (ದರ್ಶನಗೊಂಡು) ಕೊಳ್ಳುವದು ನಿಜವಾಗಿದೆ. ಅದಕ್ಕಿಂತ ಮುಖ್ಯವಾಗಿ ಇದು ಯಾವುದೇ ಕಾರಣಕ್ಕೂ ಮಾನವ ಚಿಂತನಗಳಿಂದ ನಿರ್ದೇಶನವನ್ನಾಗಲೀ ಮತ್ತು ಉತ್ತೇಜನವನ್ನಾಗಲಿ ಬಯಸುವದಿಲ್ಲ. ಮತ್ತೆ ವ್ಯಕ್ತಿಯೋರ್ವನ ವ್ಯಕ್ತಿಗತ ಬಯಕೆಗಳು ಸಹಿತ ಎಂದಿಗೂ ಈ ನಿಜವಾದ ನಿರ್ಧರಣಾ ವ್ಯವಸ್ಥೆಯಲ್ಲಿ ವಿಶ್ವದ ಕ್ರಮದಲ್ಲಿ ಇರುವದಿಲ್ಲ.

ಒಟ್ಟಿನಲ್ಲಿ ಇದು ಒಂದು ಕ್ರಮವೂ ಆಗಿರುವದಿಲ್ಲ. ಅಷ್ಟೇ ಅಲ್ಲದೇ ವಿಶ್ವದ ಇಚ್ಛೆಯ ಅನುಷ್ಠಾನವೂ ಆಗಿರುವದಿಲ್ಲ. ಇವೆಲ್ಲವೂ ಯಾಂತ್ರೀಕತೆಯ (ಏಕತಾನತೆಯ) ಶಾಸನಗಳಿಂದ ಪ್ರಭಾವಿತಗೊಂಡಿರುತ್ತವೆ. ಏಕೆಂದರೆ ಇಲ್ಲಿ, ಮಾನವನ ಇಚ್ಛೆಗನುಗುಣವಾಗಿ ಶಕ್ತಿ ಹಾಗೂ ಬಲಗಳ ಮುಖಾಂತರ ಪರಿಣಾಮಗೊಳ್ಳುತ್ತಿರುತ್ತದೆ. ಅಂತಹ ಅಭೀಪ್ಸೆಯಿಂದ ಮತ್ತು ಅಲ್ಲಿರುವ ವಿಶ್ವಾಸ ಇವೆಲ್ಲವೂ ಅತ್ಯಂತ ಕಡಿಮೆ ಮಹತ್ವ ಹೊಂದಿರುವ ಶಕ್ತಿಯೂ ಆಗಿರುವದಿಲ್ಲ.

ಪ್ರಾರ್ಥನೆ ಎನ್ನುವದು ಆ ಇಚ್ಛೆಗೆ, ಅಭೀಪ್ಸೆ ಮತ್ತು ವಿಶ್ವಾಸಕ್ಕೆ ನೀಡಲ್ಪಟ್ಟಿರುವ ಒಂದು ನಿಗದಿತ ರೂಪ ಮಾತ್ರ ತಾನಾಗಿದ್ದು, ಅದೇ ಅಭೀಪ್ಸೆ ಮತ್ತು ವಿಶ್ವಾಸವಾಗಿದೆ. ಕೆಲವೊಮ್ಮೊಮ್ಮೆ ಮಾತ್ರ ಇದರ ರೂಪಗಳು ಅಪರಿಷ್ಕೃತವಾಗಿದ್ದು ಕೇವಲ ಬಾಲಿಶತನದಿಂದಲೂ ಕೂಡಿರುವದಲ್ಲದೇ, ಅದರಂತರಂಗದಲ್ಲಿ ಅದು ಯಾವುದೇ ದೋಷವನ್ನು ಹೊಂದಿದ್ದರೂ, ಬಹುತೇಕ ಬಾಲಿಶತನದಿಂದಲೇ ಕೂಡಿರುತ್ತದೆ. ಆದಾಗ್ಯೂ ಸಹಿತ, ಅಲ್ಲಿ ನೈಜ ಶಕ್ತಿ ಮತ್ತು ಮಹತ್ವ ಇರುತ್ತದೆ. ಇದರ ಬಲ (ಶಕ್ತಿ) ಹಾಗೂ ಇದರ ಸಂವೇದನೆಯು ಇಚ್ಛೆಯಲ್ಲಿ ಇಡಲ್ಪಟ್ಟಿದೆ. ಅಭೀಪ್ಸೆಯಲ್ಲಿ ಮತ್ತು ಮಾನವನ ವಿಶ್ವಾಸದಲ್ಲಿರುವ ಆ ದೈವೀ ಇಚ್ಛೆಯನ್ನು ಸ್ಪರ್ಶ ಮಾಡುವ ಮೂಲಕ ಹಾಗೂ ಈ ರೀತಿಯಲ್ಲಿಯೇ ಪ್ರಜ್ಞಾವಂತ ಜೀವಿಯಾಗಿ, ಚೇತನವನ್ನು ಪ್ರವೇಶಿಸಿ ಮತ್ತು ಸಜೀವ–ಸಂಬಂಧಗಳನ್ನು ಪಡೆದುಕೊಳ್ಳುತ್ತದೆ.

ನಮ್ಮ ಇಚ್ಛೆ ಹಾಗೂ ನಮ್ಮ ಅಭೀಪ್ಸೆಗಳು ಬಹುತೇಕವಾಗಿ ನಮ್ಮ ಸ್ವಂತ ಬಲದ ಮೇಲೆ ಹಾಗೂ ಪ್ರಯತ್ನಗಳ ಮೂಲಕವಾಗಿ ಕ್ರಿಯೆಗೆ ತೊಡಗುತ್ತವೆ. ಈ ಕ್ರಿಯೆಯಿಂದಾಗಿ ಈ ಒಂದು ವಿಷಯವನ್ನು ಮಹತ್ವದನ್ನಾಗಿಸುತ್ತದೆ, ಹಾಗೂ ಪರಿಣಾಮಕಾರಿಯನ್ನಾಗಿಸುತ್ತದೆ. ಅದೂ ಉನ್ನತೋನ್ನತ ಉದ್ದೇಶಗಳಿಗೂ ಹಾಗೂ ಕೆಳಸ್ತರದ ಘಟನಾವಳಿಗಳಿಗೂ ಇರಬಹುದಾದ ಸಂಗತಿಯಾಗಿದೆ.

ಇವೆಲ್ಲದರ ಜೊತೆಗೆ ಇಲ್ಲಿ ಶಿಸ್ತಿನ (ಅನುಶಾಸನೀಯ) ಹಂತಗಳು ಹಲವಾರು ಇರುತ್ತವೆ, ಇವೆಲ್ಲವೂ ಅದನ್ನು ಅನುಷ್ಠಾನಗೊಳಿಸುವ ಸಲುವಾಗಿ, ಉಪಯೋಗಿಸಿಕೊಳ್ಳುವ ಸಲುವಾಗಿ ಲಭ್ಯವಾಗುವಂತೆ ಮಾಡುತ್ತದೆ. – ಅಥವಾ ಒಮ್ಮೊಮ್ಮೆ ಅವಲಂಬಿತವಾಗಿರುವಂತೆಯೇ ಕ್ರಿಯೆಯಲ್ಲಿ ಆ ವಿಶ್ವ ಶಕ್ತಿಯ ಸಲುವಾಗಿ ಅಥವಾ ಆ ದಿವ್ಯತ್ವದ ಸಹವರ್ತಿಯಾಗಿರುತ್ತದೆ. ತದನಂತರದಲ್ಲಿ ಈ ದಿವ್ಯತ್ವದ ಮಾರ್ಗವು ಮತ್ತೆ ನಮ್ಮ ಅಭೀಪ್ಸೆಗೆ ಅತ್ಯಾವಶ್ಯವಾದ ಉತ್ತರಾದಾಯಿತ್ವವನ್ನು ಹೊಂದಿರುತ್ತದೆ. ಆದರೂ ಬಹತೇಕವಾಗಿ ಯಾಂತ್ರೀಕೃತವಾಗಿ ಶಕ್ತಿಯ ನಿಯಮದ ಅಂಶವಾಗಿ ಅಥವಾ ಯಾವುದೇ ಪ್ರಮಾಣದಲ್ಲಿ ಕೊಂಚ ವ್ಯತಿರಿಕ್ತವಾಗಿ ಅಥವಾ ಬಹುತೇಕವಾಗಿ ಇವೆಲ್ಲವನ್ನೂ ಮುಖ್ಯವಾಗಿಯೇ ಗಮನಿಸುತ್ತಾ – ಆ ದೈವೀ–ಅಭೀಪ್ಸೆಗೆ ಪ್ರಜ್ಞಾಪೂರ್ವಕವಾಗಿ ಪ್ರತಿಕ್ರಿಯಿಸುತ್ತಾ ಮತ್ತು ಮಾನವನ ಆತ್ಮದ ವಿಶ್ವಾಸವು ಮತ್ತು ಅದಕ್ಕೆ ಪ್ರಜ್ಞಾಪೂರ್ವಕವಾಗಿ ಸಹಕಾರಿಯಾಗಿ, ಮಾರ್ಗದರ್ಶಿಯಾಗಿ, ರಕ್ಷಕನಾಗಿ ಮತ್ತು ಬೇಡಿಕೆಯ ಸಿದ್ಧಿಯನ್ನು (ಫಲಪ್ರದವನ್ನು) ಒದಗಿಸುತ್ತದೆ. ಇದೇ "ಯೋಗಕ್ಷೇಮಂ ವಹಾಮ್ಯಹಮ್" ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 24/566–67**

**ಕಟ್ಟುನಿಟ್ಟಿನ ನಿಯಮಗಳಿಲ್ಲ**

ಖಂಡಿತವಾಗಿ ಎಲ್ಲಾ ಪ್ರಾರ್ಥನೆಗಳು ಆಲಿಸಲ್ಪಡುವುದಿಲ್ಲ. ಏಕೆಂದರೆ, ಎಷ್ಟೇ ಶ್ರದ್ಧೆಯಿಂದಿದ್ದರೂ ಎಲ್ಲ ಪ್ರಾರ್ಥನೆಗಳು ಆಲಿಸಲ್ಪಟ್ಟರೆ, ಆಗ ಈ ಜಗತ್ತು ಈಗಿರುವುದಕ್ಕಿಂತ ಇನ್ನೂ ಹೆಚ್ಚು ಕೆಟ್ಟದಾಗಿರುತ್ತದೆ, ಭಗವಂತನ ಕಡೆಗಿನ ಪ್ರಾರ್ಥನೆಯು ಕೂಡ ಯಾವಾಗಲೂ ಆಲಿಸಲ್ಪಡುವುದಿಲ್ಲ. ನಂಬಿಕೆ ಕೂಡ ಒಮ್ಮೆಲೇ ಯಾವಾಗಲೂ ಸಮರ್ಥಿಸಿಕೊಳ್ಳಲಾಗುವುದಿಲ್ಲ. ಪ್ರಾರ್ಥನೆ ಮತ್ತು ನಂಬಿಕೆ ಮಾನವನ ಸಾಕ್ಷಾತ್ಕಾರದೆಡೆಗಿನ ಪಯಣದ ಕಷ್ಟದಲ್ಲಿ ಸಹಾಯಕ್ಕಾಗಿ ಕೊಟ್ಟ ಎರಡು ಶಕ್ತಿಗಳು. ಅವುಗಳಿಲ್ಲದೆ ಅಭೀಪ್ಸೆಯಿಲ್ಲದೆ ಮತ್ತು ಸಂಕಲ್ಪ ಮತ್ತು ನಂಬಿಕೆ (ಅಭೀಪ್ಸೆಗೋಸ್ಕರ

ಪ್ರಾರ್ಥನೆ) ಇಲ್ಲದೆ ಅವನು ಎಲ್ಲಿಗಾದರೂ ತಲುಪಲು ಕಷ್ಟ. ಆದರೆ ಇವೆಲ್ಲವೂ ದೈವೀ ಶಕ್ತಿಯನ್ನು ಕ್ರಿಯೆಯಲ್ಲಿಳಿಸಲು ಕೇವಲ ಸಾಧನಗಳು. ಶಕ್ತಿಗಳು ಕೆಲಸ ಮಾಡಲು ಅಥವಾ ಪ್ರಾರಂಭಿಸಲು ಅವುಗಳ ಪರಿಣಾಮ ಕಾಣಲು ಕೆಲವು ಸಲ ಬಹಳ ಸಮಯ ಬೇಕಾಗುತ್ತದೆ ಪ್ರಾರ್ಥಿಸುವುದಕ್ಕಾಗಿ, ಯಾವುದೇ ಕಟ್ಟುಪಾಡುಗಳನ್ನು ಹಾಕಲಾಗುವುದಿಲ್ಲ, ಕೆಲವು ಪ್ರಾರ್ಥನೆಗಳು ಮಾತ್ರ ಉತ್ತರಿಸಲ್ಪಡುವವು, ಎಲ್ಲವೂ ಅಲ್ಲ. ಎಲ್ಲಾ ಪ್ರಾರ್ಥನೆಗಳು ಏಕೆ ಉತ್ತರಿಸಲ್ಪಡುವುದಿಲ್ಲ ಎಂದು ನೀವು ಕೇಳಬಹುದು. ಆದರೆ ಅದೆಲ್ಲ ಯಾಕೆ? ಅದೊಂದು ಯಂತ್ರವಲ್ಲ: ಹೌದು, ಪ್ರಾರ್ಥನೆಯನ್ನು ಹಾಕಿ ಮತ್ತು ನಿಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಅದೇನು ಯಂತ್ರವಲ್ಲ; ಅದಲ್ಲದೆ, ಒಂದೇ ಕ್ಷಣದಲ್ಲಿ ಮಾನವ ಜನಾಂಗಕ್ಕೆ ಅವುಗಳೆಲ್ಲವನ್ನು ಅನುಗ್ರಹಿಸಲು ದೇವರು ಕೂಡ ಪೇಚಿಗೆ ಸಿಲುಕುತ್ತಾನೆ, ಹೀಗಾಗಿ ಅದು ಈಡೇರುವದಿಲ್ಲ.

ಯಾರು ಜಗತ್ತಿನಲ್ಲಿ ಬದುಕುತ್ತಿದ್ದಾರೊ, ಅವರೆಲ್ಲಾ ಪ್ರಾರ್ಥನೆಗಳನ್ನು ಅರ್ಪಿಸಬಹುದು (ಪ್ರಾಪಂಚಿಕ ಸಮಸ್ಯೆಗಳ ನಿವಾರಣೆ ಬಗ್ಗೆ) ಆದರೆ ದೇವರು ಅವೆಲ್ಲಾ ಪ್ರಾರ್ಥನೆಗಳನ್ನು ಈಡೇರಿಸುತ್ತಾನೆ ಎಂದು ನಿರೀಕ್ಷಿಸಬಾರದು ಅಥವಾ ಅವನು ಹಾಗೆ ಮಾಡಲು ಬದ್ಧನಿದ್ದಾನೆಂದು ಆಲೋಚಿಸಬಾರದು. ಯಾರು ಸಾಧಕರಿದ್ದಾರೋ ಅವರು ಅಂತರಂಗದ ಸಾಧನೆಗಾಗಿ ಪ್ರಾರ್ಥಿಸಬೇಕು ಮತ್ತು ಬಾಹ್ಯ ವಿಷಯಗಳ ಬಗ್ಗೆ ಎಷ್ಟು ಪ್ರಾರ್ಥಿಸಬೇಕೆಂದರೆ ಅವುಗಳು ಅಂತರಂಗದ ಏಳಿಗೆಗಾಗಿ ಮತ್ತು ದೈವೀ ಕೆಲಸಕ್ಕಾಗಿ ಅಗತ್ಯವಿದ್ದಷ್ಟೇ ಮಾತ್ರ.

ನೀನು ಪ್ರಾರ್ಥನೆ ಬಗ್ಗೆ ಏನು ಹೇಳುತ್ತಿದ್ದಿಯೋ ಅದು ಸರಿಯಾಗಿದೆ (ವ್ಯಕ್ತಿಗತವಲ್ಲದ ಪ್ರಾರ್ಥನೆ) ಉನ್ನತವಾದ ಆಶಯವನ್ನು ಇಟ್ಟುಕೊಂಡ ರೀತಿಯ ಪ್ರಾರ್ಥನೆ ಅದಾಗಿರುತ್ತದೆ, ಆದರೆ ಬೇರೆ ರೀತಿಯ ಪ್ರಾರ್ಥನೆ ಕೂಡ (ಹೆಚ್ಚು ವ್ಯಕ್ತಿಗತವಾದ) ಒಪ್ಪಬಲ್ಲ ಮತ್ತು ಅಪೇಕ್ಷಣೀಯವಾದದ್ದೇ ಆಗಿದೆ. ಸರಿಯಾದ ರೀತಿಯಲ್ಲಿ ಅರ್ಪಣೆ ಮಾಡಿದಂತಹ ಪ್ರಾರ್ಥನೆಗಳು, ನಮ್ಮನ್ನು ದೈವೀ ಸನಿಹಕ್ಕೆ ತರುವವು. ಹಾಗೂ ಅವನೊಂದಿಗೆ ಸರಿಯಾದ ಸಂಬಂಧವನ್ನು ಏರ್ಪಡಿಸುವವು. ಪ್ರಾರ್ಥನೆಗಳಿಗೆ ಸಂಬಂಧಿಸಿದಂತೆ, ವಸ್ತುಸ್ಥಿತಿಯ ಪ್ರಾರ್ಥನೆ ಮತ್ತು ಅದು ತರುವ ನಿಲುವು ತದ್ವಾಪಿ ಬೇರೆಯವರಿಗಾಗಿ ಮಾಡುವ ನಿಸ್ವಾರ್ಥ ಪ್ರಾರ್ಥನೆ ನಿಮ್ಮನ್ನು ಹೆಚ್ಚಿನ ಶಕ್ತಿಗಳ ಹಂತಕ್ಕೆ ಕರೆದುಕೊಂಡು ಹೋಗುವದಲ್ಲದೇ ನಿಮಗೆ ಹೊಸ ಮಾರ್ಗವನ್ನು ಅದು ತೆರೆಸುತ್ತದೆ, ಯಾವ ವ್ಯಕ್ತಿಯ ಸಲುವಾಗಿ ಪ್ರಾರ್ಥನೆ ಸಲ್ಲಿಸಲಾಗಿದೆಯೋ, ಆ ವ್ಯಕ್ತಿಯಲ್ಲಿ ಪರಿಣಾಮ ಬೀರದೆ ಇರಬಹುದು. ಧನಾತ್ಮಕವಾಗಿ

ಅದರ ಬಗ್ಗೆ ಏನೂ ಹೇಳಲಾಗದಿರಬಹುದು, ಪರಿಣಾಮ ಮಾತ್ರ ಅವಶ್ಯಕವಾಗಿ ವ್ಯಕ್ತಿಯ ಮೇಲೆ ನಿರ್ಭರವಾಗಿರುತ್ತದೆ ಅವರು ಮುಕ್ತರೋ ಅಥವಾ ಗ್ರಹಿಸುವವರೋ ಅಥವಾ ಅವರಲ್ಲಿರುವ ಏನೋ ಒಂದು, ಈ ಪ್ರಾರ್ಥನೆಯು ಇಳಿಸಿ ತರುವ ಶಕ್ತಿಗೆ ಪ್ರತಿಸ್ಪಂದಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/366–67 – ಶ್ರೀ ಅರವಿಂದರು**

## ಶ್ರದ್ಧೆಯು ಮತ್ತು ತೀವ್ರತರವಾದ ಪ್ರಾರ್ಥನೆಯು ಗವ್ಯದ ಹಾದಿಯನ್ನು ಬದಲಾಯಿಸಬಹುದು

ಸಾಕಷ್ಟು ಶ್ರದ್ಧೆಯ, ಅಭೀಪ್ಸೆಯ ಸಾಕಷ್ಟು ತೀವ್ರತರವಾದ ಪ್ರಾರ್ಥನೆಗೆ ಪ್ರಕಟವಾಗುವ ಹಾದಿಯನ್ನು ಬದಲಾಯಿಸುವ ಸಾಮರ್ಥ್ಯ ಇಲ್ಲವೆಂದು ಯಾರು ಹೇಳಿದರು? ಇದರರ್ಥ ಎಲ್ಲಾ ಸಾಧ್ಯತೆಗಳಿವೆ. ಈಗ ಸಾಕಷ್ಟು ಅಭೀಪ್ಸೆ ಮತ್ತು ಪ್ರಾರ್ಥನೆ ಬಹಳ ತೀವ್ರತರದ್ದಾಗಿರಬೇಕು ಇದು ಮನುಷ್ಯರ ಸ್ವಭಾವಕ್ಕೆ ಕೊಡಲ್ಪಟ್ಟಿದೆ ಮಾನವನ ಸ್ವಭಾವಕ್ಕೆ ಕೃಪೆಯ ಒಂದು ಅದ್ಭುತವಾದ ಕೊಡುಗೆ. ಒಂದು ವಿಷಯವೇನೆಂದರೆ, ಅದನ್ನು ಉಪಯೋಗ ಹೇಗೆ ಮಾಡಬೇಕೆಂದು ಗೊತ್ತಿಲ್ಲ.

ಇದರಿಂದ ನಾವು ಏನು ನಿರ್ಣಯಿಸಬಹುದೆಂದರೆ, ಕಣ್ಣಿನ ನೇರಕ್ಕೆ ನಡೆಯುವ (ಸಮತಟ್ಟಾದ ಘಟನೆಗಳ) ಸ್ಥರದಲ್ಲಿ ಹೆಚ್ಚಾಗಿ, ಕೇವಲವಾದ ನಿರ್ಣಾಯಕತೆಗಳು ಘಟಿಸುತ್ತವೆ. ಯಾರಾದರೂ ಸಮತಟ್ಟಾದ ಸ್ಥರವನ್ನು ದಾಟಿ ಉನ್ನತವಾದ ಪ್ರಜ್ಞಾ ಕೇಂದ್ರಕ್ಕೆ ದಾಟಿಹೋದರೆ ಅವರು ವಿಷಯಗಳನ್ನು ಪರಿವರ್ತಿಸುವ ಸಾಮಾರ್ಥ್ಯ ಹೊಂದಿರುತ್ತಾರೆ. ಆದರೆ, ಇದು ಕೇವಲ ನಿರ್ಣಾಯಕತೆ ಮತ್ತು ಕೇವಲ ಸ್ವಾತಂತ್ರ್ಯ ಎರಡು ಕೂಡಿದಾಗ ಸಾಧ್ಯ. ನೀವು ಅದರಿಂದ ಯಾವಾಗ ಬೇಕಾದರೂ ಹಿಂದೆ ಸರಿಯಬಹುದು. ಅದು ಹಾಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/88 – ಶ್ರೀಮಾತೆ**

ನಾನು ಈ ಅಂತರಾತ್ಮ ಪ್ರಜ್ಞೆಯನ್ನು ಹೇಗೆ ಪಡೆಯಬಹುದು?

ಅಭೀಪ್ಸೆಯ ಪ್ರಾರ್ಥನೆ ಮತ್ತು ಏಕಾಗ್ರತೆಯಿಂದ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/102 – ಶ್ರೀಮಾತೆ**

## ಶಕ್ತಿಗಳ ಲೀಲೆ ಸಂಕೀರ್ಣ ಮತ್ತು ಸೂಕ್ಷ್ಮ

ಒಂದು ವಿಷಯ ಸಂಪೂರ್ಣವಾಗಿ ನಿರ್ಣಯಿಸಲಾಗಿದೆ ಎಂದು ತೋರುತ್ತಿದೆ. ಅದು ಹಾಗೆ ಆಗುತ್ತದೆ ಕೂಡ, ನಿಮ್ಮೊಳಗಿನ ಒಂದು ಸಂಕಲ್ಪ ಮೇಲೇರಿ ಬರುತ್ತದೆ ಒಂದು ಜ್ಯೋತಿ ಬೆಳಗುತ್ತದೆ, ಒಂದು ಉನ್ನತ ಅಭೀಪ್ಸೆ ಉನ್ನತವಾದ ಸಂಕಲ್ಪದೊಂದಿಗೆ ಸಾಮರಸ್ಯದಿಂದಿದೆ ಮತ್ತು ನೀವು ಘಟನೆಗಾಗಿ ಒತ್ತಾಯಿಸುವಿರಿ ಮತ್ತು ಒಂದು ರೀತಿಯ ಒಂದಾಗುವಿಕೆ ಆಗುತ್ತದೆ. ಏನು ಆಗಬೇಕು ಅದಾಗುತ್ತದೆ ಆದರೆ ಅದರ ಜೊತೆ ಮತ್ತೇನೋ ಆಗಿ ಮೊದಲದರ ಸ್ವಭಾವವನ್ನು ಬದಲಾಯಿಸುತ್ತದೆ ಭೂಮಿಗೆ ಮುಖ್ಯವಾದಂತಹ ಘಟನೆಗಳನ್ನು ಇದು ಆವಾಗಾವಾಗ ಆಗುತ್ತದೆ ಉದಾಹರಣೆಗೆ ಎಲ್ಲಾ ಚಲನೆಗಳು ಸನ್ನಿವೇಶಗಳು ಶಕ್ತಿಗಳ ಕೂಡುವಿಕೆ ಒಂದು ಯುದ್ದ ಆಗೇ ಬಿಡುತ್ತದೆ ಎಂದೆನಿಸಬಹುದು ಆವಾಗ ಬೇರೆ ಶಕ್ತಿಗಳನ್ನು ಬೇಡಿಕೊಂಡಾಗ ಯುದ್ಧದ ಪರಿಣಾಮಗಳನ್ನು ಬದಲಾಯಿಸಬಹುದು ಕೆಲವು ಸಲ ಯುದ್ಧದ ಸ್ವಭಾವವನ್ನು ಕೂಡ, ಆದರೆ ಯುದ್ಧವನ್ನು ತಪ್ಪಿಸಲಾಗುವುದಿಲ್ಲ. ಈ ರೀತಿಯದಂತಹ ಉದಾಹರಣೆಗಳನ್ನು ಕೊಡಬಲ್ಲೆ ಸಾಮನ್ಯ ಸ್ವಭಾವದಂತಹುಗಳನ್ನು....

ನಾನು ನಿಮ್ಮ ಗಮನಕ್ಕೆ ಏನು ತರಬಯಸುವುದೇನೆಂದರೆ ಸಮಸ್ಯೆ ತೀವ್ರವಾಗಿ ಸಂಕೀರ್ಣವಾಗಿದೆ ಮತ್ತು ಸೂಕ್ಷ್ಮ ಮತ್ತು ಎಲ್ಲಾ ಕ್ಷಣದಲ್ಲೂ ಕ್ರಿಯೆಯ ಹಾದಿಯನ್ನು ಸ್ವಲ್ಪ ಬದಲಿಸಬಹುದು. ಬೇರೆ ಸಮಯದಲ್ಲಿ ಕ್ರಿಯೆಯನ್ನು ವಿರುದ್ಧ ದಿಕ್ಕಿನಲ್ಲಿ ತಿರುಗಿಸಬಹುದು ಮತ್ತು ಕೆಲವು ಸಲ ಪರಿಣಾಮಗಳನ್ನು ಮತ್ತು ಕ್ರಿಯೆಯಲ್ಲಿನ ಅಂತರಂಗದ ವರ್ತನೆಯನ್ನು ಸಹ ಬದಲಾಯಿಸಬಹುದು. ಮನುಷ್ಯರು ಇದನ್ನು ಬಹಳ ಸರಳವಾಗಿ ನೋಡಿ ವ್ಯಾಖ್ಯಾನಿಸುತ್ತಾರೆ. ಇದೆಲ್ಲಾ ದೇವರನ್ನು ಪ್ರಾರ್ಥಿಸಿದ್ದರಿಂದ ಎಂದು ಅವರು ಒಂದು ಸಂದರ್ಭದಲ್ಲಿ "ನಾನು ದೇವರಿಂದ ಏನು ಕೇಳಿದ್ದೆನೋ ಅದನ್ನು ಕೊಟ್ಟಿದ್ದಾನೆ" ಮತ್ತೊಂದು ಸಂದರ್ಭದಲ್ಲಿ "ದೇವರು ನನ್ನನ್ನು ತಿರಸ್ಕರಿಸಿದ್ದಾನೆ" ಆದ್ದರಿಂದ ಅದು ಹಾಗೆ, ಅದನ್ನು ಹಾಗೆ ತಿಳಿದುಕೊಳ್ಳುತ್ತಾರೆ ಮತ್ತು ಅದು ಮೂರ್ಖತನ. ಅದು ಹೇಗೆ ಘಟಿಸುತ್ತದೆ ಎಂದು ತಿಳಿದುಕೊಂಡರೆ, ನೀವು ಸಾಮಾನ್ಯವಾಗಿ ಸಾಮೂಹಿಕ ಪ್ರಜ್ಞೆ ಕಡಿಮೆಯೆಂದರೆ ಭೂಮಿಯಷ್ಟು ವಿಶಾಲವಾಗಿ, ಕಡಿಮೆಯೆಂದರೆ ಅಷ್ಟು, ನಿಜವಾಗಿ ತಿಳಿದುಕೊಳ್ಳಬೇಕೆಂದರೆ ವಿಶ್ವಾತ್ಮಕವಾದ ಪ್ರಜ್ಞೆ ಇರಬೇಕು, ಆವಾಗ ನಿಮಗೆ ತಿಳಿಯುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/191–92**

## ನಾನು ನಿಮ್ಮೊಂದಿಗೆ ಇದ್ದೇನೆ

ನಾನು ನಿಮ್ಮೊಂದಿಗಿದ್ದೇನೆ, ಏಕೆಂದರೆ ನಾನು ನಿಮ್ಮೊಂದಿಗಿದ್ದೇನೆ ಅದು ವಸ್ತುಗಳ ವಿಶ್ವದಲ್ಲಿ ಪ್ರಮುಖವಾದುದು. ಏಕೆಂದರೆ ನಾನು ನಿಮ್ಮೊಂದಿಗಿದ್ದೇನೆ ಎಲ್ಲಾ ಮಟ್ಟದಲ್ಲಿದ್ದೇನೆ ಎಲ್ಲಾ ಸ್ತರದಲ್ಲಿದ್ದೇನೆ ಪರಮ ಪ್ರಜ್ಞೆಯಿಂದ ಪೂರ್ತಿ ಕೆಳಗಿನ ನನ್ನ ಭೌತಿಕ ಪ್ರಜ್ಞೆತನಕ. ಇಲ್ಲಿ, ಪಾಂಡಿಚೇರಿಯಲ್ಲಿ, ನೀವು ನನ್ನ ಪ್ರಜ್ಞೆಯ ಉಸಿರಿಲ್ಲದೆ ಉಸಿರಾಡಲಾರಿರಿ. ಅದು ಹತ್ತಿರತ್ತರ ಭೌತಿಕ ವಾತಾವರಣವನ್ನು ಪೂರ್ಣವಾಗಿ ತುಂಬಿದೆ, ಸೂಕ್ಷ್ಮ ಭೌತಿಕದಲ್ಲಿ, ಮತ್ತು ಇಲ್ಲಿಂದ ಹತ್ತು ಕಿಲೋಮೀಟರ್ ದೂರದ ಸರೋವರದ ತನಕ, ಇನ್ನೂ ಮುಂದೆ ನನ್ನ ಪ್ರಜ್ಞೆಯನ್ನು ಭೌತಿಕ ಪ್ರಾಣದಲ್ಲಿ ಸಂವೇದಿಸಬಹುದು ನಂತರ ಮನಸ್ಸಿನ ಸ್ತರದಲ್ಲಿ ಮತ್ತು ಇನ್ನು ಹೆಚ್ಚಿನ ಸ್ತರದಲ್ಲಿ ಎಲ್ಲಾ ಕಡೆ. ನಾನು ಇಲ್ಲಿಗೆ ಪ್ರಥಮ ಬಾರಿ ಬಂದಾಗ ನಾನು ಶ್ರೀ ಅರವಿಂದರ ವಾತಾವರಣವನ್ನು ಸಂವೇದಿಸಿದೆ ಭೌತಿಕವಾಗಿ ಹತ್ತು ಮೈಲಿ ದೂರದಲ್ಲಿ ಸಂವೇದಿಸಿದೆ ಹತ್ತು ನಾವಿಕರ ಮೈಲಿ, ಕಿಲೋಮೀಟರ್‌ಗಳಲ್ಲ, ಅದು ಬಹಳ ಅನಿರೀಕ್ಷಿತವಾದ ಬಹಳ ಸದೃಢ, ಒಂದು ಶುದ್ಧ ವಾತವರಣ, ಪ್ರಕಾಶ ಮಾನವದ ಬೆಳಕು, ನಿಮ್ಮನ್ನು ಮೆಲಕ್ಕೆತ್ತುವ ಬೆಳಕು, ಇದು ಬಹಳ ಹಿಂದಿನಿಂದ ಶ್ರೀ ಅರವಿಂದರು ಆಶ್ರಮದ ಎಲ್ಲಾ ಕಡೆ ನೆನಪಿನ ರೀತಿ ನಿಮಗೆ ಗೊತ್ತಿರುವ ಹಾಗೆ ಹಚ್ಚಿದ್ದಾರೆ.

"ನಿಮ್ಮನ್ನು ಯಾವಾಗಲೂ ಶ್ರೀಮಾತೆ ನೋಡುತ್ತಿದ್ದಾರೆಂದುಕೊಂಡು ವರ್ತಿಸಿರಿ, ಏಕೆಂದರೆ ಆಕೆ ನಿಜವಾಗಿ ಯಾವಾಗಲೂ ಉಪಸ್ಥಿತರಿರುತ್ತಾರೆ.

ಇದು ಬರಿ ಪದಗಚ್ಚಗಳಲ್ಲಾ, ಸಾಮಾನ್ಯ ಶಬ್ಧಗಳಲ್ಲಾ, ಅದು ವಸ್ತುಸ್ಥಿತಿ. ನಾನು ಸದೃಢ ರೀತಿಯಲ್ಲಿ ನಿಮ್ಮೊಟ್ಟಿಗಿದ್ದೇನೆ ಮತ್ತು ಯಾರಿಗೆ ಸೂಕ್ಷ್ಮದೃಷ್ಟಿ ಇದೆಯೋ ನನ್ನನ್ನು ಕಾಣಬಲ್ಲರು. ಸಾಮಾನ್ಯವಾದ ರೀತಿಯಲ್ಲಿ ನನ್ನ ಶಕ್ತಿ ಸದಾ ಕಾರ್ಯನಿರತವಾಗಿರುತ್ತದೆ. ಸತತವಾಗಿ ನಿಮ್ಮ ಸತ್ತೆಯ ಮಾನಸಿಕ ಮೂಲತತ್ವಗಳನ್ನು ಪಲ್ಲಟಿಸಿ ಹೊಸ ಸಂಬಂಧಗಳೊಂದಿಗೆ ಬೆಸೆದು ಮತ್ತು ನಿಮ್ಮಷ್ಟಕ್ಕೆ ನಿಮ್ಮ ಸ್ವಭಾವದ ವಿವಿಧ ಮುಖಗಳನ್ನು ವ್ಯಾಖ್ಯಾನಿಸುತ್ತ ಅದರಿಂದ ನೀವು ಏನನ್ನು ಬದಲಾಯಿಸಬೇಕು ಬೆಳಸಬೇಕು ತ್ಯಜಿಸಬೇಕೆಂದು ತೋರುತ್ತದೆ. ಅದಲ್ಲದೆ ನಿಮ್ಮ ಮತ್ತು ನನ್ನ ನಡುವೆ ಒಂದು ವಿಷೇಶವಾದ ಭಾಂದವ್ಯವಿದೆ ಯಾರು ಶ್ರೀ ಅರವಿಂದರ ಮತ್ತು ನನ್ನ ಭೋಧನೆ ಕಡೆ ತಿರುಗಿದ್ದಾರೋ ಅವರೊಂದಿಗೆ ಮತ್ತು ಅದನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ, ಇಲ್ಲಿ ದೂರ ಎಣಿಕೆಗೆ ಬರುವುದಿಲ್ಲ. ನೀವು ಫ್ರಾನ್ಸಿನಲ್ಲಿರಬಹುದು,

ನೀವು ಬೇರೆ ಕಡೆಗಿನ ಜಗತ್ತಿನಲ್ಲಿರಬಹುದು ಅಥವಾ ಪಾಂಡಿಚೇರಿಯಲ್ಲಿ, ಈ ಭಾಂದವ್ಯ ಸತ್ಯ ಮತ್ತು ಜೀವಂತ ಮತ್ತು ಪ್ರತಿಸಲ ಕರೆ ಬಂದಾಗ ಪ್ರತಿಸಲ ಅವಶ್ಯಕತೆಯಿದೆ ಎಂದು ನನಗನಿಸಿದಾಗ ನಾನು ನನ್ನ ಶಕ್ತಿಯನ್ನು ಕಳಿಸುತ್ತೇನೆ. ಒಂದು ಅಭೀಪ್ಸೆ, ಒಂದು ರಕ್ಷಣೆ ಅಥವಾ ಇನ್ನಾವದೋ ವಿಷಯ ಒಂದು ತರಹದ ಸಂದೇಶ ನನಗೆ ತಕ್ಷಣ ಬಂದಾಗ ಮತ್ತು ಅವಶ್ಯವಾದುದನ್ನು ಮಾಡುತ್ತೇನೆ. ಈ ರೀತಿಯ ಸಂವಾರ್ತೆಗಳು ಯಾವುದೇ ಕ್ಷಣದಲ್ಲೂ ತಲುಪಬಹುದು ಮತ್ತು ನೀವು ವಾಕ್ಯದ ಮದ್ಯೆ ಅಥವಾ ಕೆಲಸದಲ್ಲಿದ್ದಾಗ ಅಚಾನಕ್ಕಾಗಿ ನಿಂತದ್ದನ್ನು ನೀವು ಎಲ್ಲರೂ ನೋಡಿರುತ್ತೀರಿ. ಇದು ಏಕೆಂದರೆ, ಕೆಲವೊಂದು ನನ್ನ ಬಳಿ ಬರುತ್ತವೆ ಒಂದು ಸಂವಾರ್ತೆ ಮತ್ತು ನಾನು ಏಕಾಗ್ರಹಿಸುತ್ತೇನೆ .... ಅದೊಂದು ಭಾಂದವ್ಯಕಿಂತ ಹೆಚ್ಚಿನದು ನನ್ನಿಂದ ಅದು ಹೊರ ಹೊಮ್ಮುತ್ತದೆ. ಈ ಹೊರ ಸೂಸುವಿಕೆ ಅವಶ್ಯಕತೆಯ ಬಗ್ಗೆ ನನನ್ನು ಎಚ್ಚರಿಸುತ್ತೆ ಮತ್ತು ಏನಾಗುತ್ತಿದೆಯೆಂದು ನನಗರಹುತ್ತದೆ. ನೀವು ಯಾವುದೋ ಕಾರಣದಿಂದ ನನ್ನ ಸಹಾಯಕ್ಕಾಗಿ ಬರೆಯುತ್ತೀರಿ ಮತ್ತು ನಾನು ನಿಮ್ಮೊಂದಿಗಿದ್ದೇನೆ ಎಂದು ಉತ್ತರಿಸುತ್ತೇನೆ. ಅದರರ್ಥ ನನ್ನ ನಿಮ್ಮೊಟ್ಟಿಗಿನ ಸಂವಹನ ಕ್ರಿಯಾತ್ಮಕವಾಗಿದೆ, ನೀವು ನನ್ನ ಕ್ರಿಯಾತ್ಮಕವಾದ ಪ್ರಜ್ಞೆಯೊಟ್ಟಿಗೆ ಸಂಪರ್ಕಕ್ಕೆ ಒಂದು ಕ್ಷಣಕ್ಕೆ ಬಂದಿದ್ದೀರಿ, ಅವಶ್ಯಕತೆಯ ಸಮಯಕ್ಕಾಗಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/73–74 – ಶ್ರೀಮಾತೆ**

ಕೆಲವು ಇಷ್ಟವಿಲ್ಲದಿರುವ ಪ್ರಾರ್ಥನೆ, ಅಂತಹವು ಅವರ ಹೃದಯದ ಆಳಕ್ಕಿಳಿದರೆ ಅವರು ಅದನ್ನು ಪ್ರತಿಷ್ಠೆ ಅನ್ನುತ್ತಾರೆ, ಅದಕ್ಕಿಂತ ಕೆಟ್ಟದ್ದೆಂದರೆ, ಜಂಬ ಎಂದುಕೊಳ್ಳುತ್ತಾರೆ ಮತ್ತೆ ಕೆಲವರಿಗೆ ಅಭೀಪ್ಸೆ ಇರುವುದಿಲ್ಲ ಅವರು ಪ್ರಯತ್ನಿಸುತ್ತಾರೆ ಮತ್ತು ಅಭೀಪ್ಸೆ ಪಡಲಾಗುವುದಿಲ್ಲ. ಏಕೆಂದರೆ ಅವರಲ್ಲಿ ಸಂಕಲ್ಪವೆಂಬ ಜ್ವಾಲೆ ಇರುವುದಿಲ್ಲ, ಅವರಲ್ಲಿ ವಿನಯವೆಂಬ ಜ್ವಾಲೆ ಇರುವುದಿಲ್ಲ, ಎರಡೂ ಬೇಕು. ತಮ್ಮ ಕರ್ಮವನ್ನು ಬದಲಾಯಿಸಲು ಬಹಳ ಉನ್ನತವಾದ ವಿನಯವಂತಿಕೆ ಮತ್ತು ಬಹಳ ಉನ್ನತವಾದ ಸಂಕಲ್ಪ ಇರಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/92 – ಶ್ರೀಮಾತೆ**

# ಪ್ರಾರ್ಥನೆ ಮತ್ತು ಆಧ್ಯಾತ್ಮಿಕ ಜೀವನ

– ಅನುವಾದ: ಡಾ॥ ಮಹಾದೇವ ಸಕ್ರಿ

## ಪ್ರಾರ್ಥನೆ ಮತ್ತು ಅಭೀಪ್ಸೆಗಳು ಆಧ್ಯಾತ್ಮಿಕ ಜೀವನದ ಅವಿಭಾಜ್ಯ ಅಂಗಗಳು;

ಪ್ರಾರ್ಥನೆ ಮತ್ತು ಆಭೀಪ್ಸೆ ಇವು ಆಧ್ಯಾತ್ಮ ಜೀವನದ ಎರಡು ಅಂಶಗಳು ಮತ್ತು ಅವು ಶರಣಾಗತಿಯೊಂದಿಗೆ ಯಾವಾಗಲೂ ಸಂಘರ್ಷ ಮಾಡುವುದಿಲ್ಲ. ಇದು, ಎರಡರಲ್ಲಿ ಯಾವುದಾದರೊಂದು, ಪ್ರಾರ್ಥನೆಯ ಈಡೇರುವಿಕೆಯಿಂದ ಅಥವಾ ಈಡೇರದಿರುವಿಕೆಯಿಂದ ತೊಂದರೆ ಪಡದಿದ್ದಲ್ಲಿ ಮತ್ತು ಒಬ್ಬರ ನಂಬುಗೆ ಮತ್ತು ಶಾಂತತೆ ಯಾವಾಗಲೂ ಒಂದೇ ತೆರನಾದ ಪಕ್ಷದಲ್ಲಿ ಮಾತ್ರ ಇದು ಸಂಭವಿಸುವದು. ಸಾಮಾನ್ಯ ಜೀವನದಲ್ಲಿ, ಪ್ರಾರ್ಥನೆಯು, ದೇವರ ಜೊತೆ ಮಾನವರ ಸಂಬಂಧದ ಒಂದು ಮುಖ್ಯವಾದ ತತ್ವವಾಗಿದೆ. ಬಹಳಷ್ಟು ಸಲ ಈ ಪ್ರಾರ್ಥನೆಗೆ ಸ್ಪಂದನೆ ಸಿಗುವುದಿಲ್ಲ. ಸ್ಪಂದನೆ ಸಿಗದಿದ್ದ ಪಕ್ಷದಲ್ಲಿ, ಮನುಷ್ಯನು ತನ್ನ ವಿಶ್ವಾಸವನ್ನು ದೇವರಲ್ಲಿ ಇಡುತ್ತಾನೆ. ಈ ರೀತಿ ದೈವೀ ಸ್ಪಂದನೆ ದೊರೆಯದಿದ್ದಾಗ, ಮನುಷ್ಯನು, ದೇವರು ನನ್ನ ಪ್ರಾರ್ಥನೆಗೆ ಸ್ಪಂದಿಸಲು ಏಕೆ ಇಚ್ಛಿಸಲಿಲ್ಲ ಎಂದು ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತಾನೆ ಮತ್ತು ತನ್ನ ಪ್ರಾರ್ಥನೆ ಕೇಳಿಸುವವರೆಗೆ ತೀವ್ರವಾಗಿ ಪ್ರಾರ್ಥನೆ ಮಾಡುತ್ತಾನೆ. ಇದು ಪ್ರಾರ್ಥನೆ ಮಾಡುವ ಮನುಷ್ಯನ ಮೇಲೆ ಮತ್ತು ಸನ್ನಿವೇಶಗಳ ಮೇಲೆ ಅವಲಂಬಿಸಿದೆ: ಒಬ್ಬ ಸಾಧಕನು ಇನ್ನೊಬ್ಬರ ಸಂಗತಿಗಳಲ್ಲಿ ಆಂತರಿಕವಾಗಿ ಪ್ರಾರ್ಥಿಸಬಹುದು; ಆದರೆ ಅವನು ಸಮಾನ ಮನಸ್ಕನಾಗಿ ಮತ್ತು ಯಾವುದಕ್ಕೂ ಅಂಟಿಕೊಳ್ಳದೆ ಇರಬೇಕು ಇಲ್ಲವೆ ಮಧ್ಯ ಪ್ರವೇಶ ಮಾಡುವುದನ್ನು ಬಿಡಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/365–66**

## ಪ್ರಾರ್ಥನೆಗಳು ಮತ್ತು ಸ್ತೋತ್ರಗಳು ದೇವರನ್ನು ಕಾಣುವ ವಿಧಾನಗಳು

ಪ್ರಾರ್ಥನೆಗಳು ಮತ್ತು ಸ್ತೋತ್ರಗಳು ದೈವೀ ಸಾಕ್ಷಾತ್ಕಾರ ಮಾಡಿಕೊಳ್ಳುವ ಒಂದು ಅತಿ ಮುಖ್ಯ ಸಾಧನಾ ಪಥವಾಗಿದೆ. ಆದರೆ, ಇದು ಎಲ್ಲರಿಗೂ ಸೂಕ್ತವಾದ ಮಾರ್ಗವಲ್ಲ. ಯಾರು ಜ್ಞಾನ ಮಾರ್ಗವನ್ನು ಅನುಸರಿಸುತ್ತಾರೋ, ಅವರು ಧ್ಯಾನಕ್ಕೆ ಮತ್ತೂ ಏಕಾಗ್ರತೆಯನ್ನು ಹೊಂದುತ್ತಾರೆ. ಕೆಲಸಗಾರನಿಗೆ,

ಕೃತಿಗಳ ಸಮರ್ಪಣೆ ಉತ್ತಮ ಮಾರ್ಗವಾಗಿದೆ. ಪ್ರಾರ್ಥನೆಗಳು ಮತ್ತು ಸ್ತೋತ್ರಗಳು ಭಕ್ತಿಯ ಅವಯವಗಳಾಗಿವೆ; ಆದಾಗ್ಯೂ ಅವು ಅತ್ಯುತ್ತಮವಾದ ಅವಯವವಲ್ಲ; ಪ್ರೀತಿಯು ಭಕ್ತಿಯ ಅತ್ಯುನ್ನತ ಪರಿಪೂರ್ಣತೆಯಾಗಿದೆ. ಸ್ತೋತ್ರಗಳ ಮತ್ತು ಪ್ರಾರ್ಥನೆಗಳ ಮುಖಾಂತರ ಆ ಪ್ರೀತಿಯು ನಿಜವಾದ ದೈವೀಕತೆಯನ್ನು ಅರ್ಥಮಾಡಿಕೊಳ್ಳಬಹುದು. ಆ ಮೇಲೆ ಅವಶ್ಯಕತೆಯನ್ನು ಮೀರಿ ದೈವೀ ಸಂತೋಷದಲ್ಲಿ ಒಂದಾಗುತ್ತದೆ. ಆದಾಗ್ಯೂ, ಒಬ್ಬ ಭಕ್ತಿಯ ಮನುಷ್ಯನ (ಭಕ್ತನ) ಪ್ರಾರ್ಥನೆಗಳು ಮತ್ತು ಸ್ತೋತ್ರಗಳಿಲ್ಲದೆ ಏನನ್ನಾದರೂ ಮಾಡುವುದು ಸ್ವಲ್ಪ ಕಷ್ಟ. ಯಾವಾಗ, ಸಾಧನೆ ಮತ್ತು ಕಾರ್ಯವಿಧಾನಗಳು ಬೇಕಾಗಿಲ್ಲವೋ, ಆವಾಗ ಪ್ರಾರ್ಥನೆಗಳಲ್ಲಿ ಮತ್ತು ಸ್ತೋತ್ರಗಳಲ್ಲಿ ಹೃದಯವು ಸಹ ಸಮರ್ಪಕವಾಗಿ ಕೆಲಸ ಮಾಡುತ್ತದೆ. ಬರೀ ಪದ್ಧತಿಯೆ/ವಿಧಾನವೆ ಲಕ್ಷ್ಯವಾಗಬಾರದೆಂಬುದನ್ನು ನೆನಪಿನಲ್ಲಿಡಬೇಕು; ಮತ್ತು ನನ್ನ ವಿಧಾನ ಇನ್ನೊಬ್ಬರದಾಗಿರಲಿಕ್ಕಿಲ್ಲ. ಯಾರು ಪ್ರಾರ್ಥನೆಗಳನ್ನು ಮತ್ತು ಸ್ತೋತ್ರಗಳನ್ನು ಇಷ್ಟಪಡುವುದಿಲ್ಲವೋ, ಯಾರು ಅವುಗಳಲ್ಲಿ ಪರಮಾನಂದವನ್ನು ಹೊಂದುವುದಿಲ್ಲವೋ, ಅಂಥವರು ಆಧ್ಯಾತ್ಮಿಕ ವ್ಯಕ್ತಿಗಳಲ್ಲ ಎಂಬುದು ಬಹಳ ಜನರ ಅಭಿಮತ. ಆದರೆ ಇದು ದೋಷ ಹಾಗೂ ಸಂಕುಚಿತತೆಯ ಸಂಕೇತವಾಗಿದೆ. ಬುದ್ಧನು ಸ್ತೋತ್ರಗಳಲ್ಲಿ ಮತ್ತು ಪ್ರಾರ್ಥನೆಗಳಲ್ಲಿ ಪಾಲ್ಗೊಳ್ಳಲಿಲ್ಲ. ಹಾಗೆಂದ ಮಾತ್ರಕ್ಕೆ, ಬುದ್ಧನನ್ನು ಆಧ್ಯಾತ್ಮಿಕವಲ್ಲದ ವ್ಯಕ್ತಿ ಎಂದು ಹೇಳಲಾದೀತೆ? ಭಕ್ತಿಯ ಸಾಧನೆಗಾಗಿ ಸ್ತೋತ್ರಗಳನ್ನು ಮತ್ತು ಪ್ರಾರ್ಥನೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 9/186**

**ದೈವದೊಡನೆ ಸಂಬಂಧವನ್ನು ರೂಪಿಸುವ ಒಂದು ಮಾಧ್ಯಮ**

ಪ್ರಾರ್ಥನೆಯು, ಮೊದಲು ನಮಗೆ ಕೆಳ ಸ್ತರದಲ್ಲಿ – ಅಂದರೆ – (ಅದು ಬರೀ ಭ್ರಾಂತಿ ಮತ್ತು ಆತ್ಮಭ್ರಮೆಯೊಡನೆ ಸ್ಥಿರವಾಗಿದ್ದಾಗ) ದೈವದೊಡನೆ ನಮ್ಮ ಸಂಬಂಧವನ್ನು ಸಿದ್ಧಗೊಳಿಸಲು, ನಮಗೆ ಸಹಾಯ ಮಾಡುತ್ತದೆ. ನಂತರದಲ್ಲಿ, ಭ್ರಾಂತಿಯ ಹಿಂದಿರುವ ಆಧ್ಯಾತ್ಮಿಕ ಸತ್ಯದೆಡೆಗೆ ಸೆಳೆಯಲ್ಪಡುತ್ತೇವೆ. ಹಾಗೆಂದು ಅದು, ನಾವು ಪ್ರಾಮುಖ್ಯವಾದುದನ್ನು ಕೇಳಿದ್ದಕ್ಕಾಗಿ ಕೊಟ್ಟ ವಸ್ತುವಲ್ಲ, ಅದು ಸ್ವತಃ – ಸಂಬಂಧವಾಗಿದೆ: ದೇವರೊಡನೆ ಮನುಷ್ಯ ಜೀವನದ ಸಂಪರ್ಕವಾಗಿದೆ. ಅದು ಪ್ರಜ್ಞಾಪೂರ್ವಕ ವಿನಿಮಯವಾಗಿದೆ. ಆಧ್ಯಾತ್ಮಿಕ ವಿಷಯಗಳಲ್ಲಿ ಮತ್ತು

ಆಧ್ಯಾತ್ಮಿಕ ಲಾಭವನ್ನು ನಿರೀಕ್ಷಿಸುವಲ್ಲಿ, ಈ ಪ್ರಜ್ಞಾಪೂರ್ವಕ ಸಂಬಂಧವು ಒಂದು ಆಗಾಧವಾದ ಶಕ್ತಿಯಾಗಿದೆ. ನಮ್ಮ ಸ್ವಂತ, ಪೂರ್ಣ ಸ್ವಾವಲಂಬಿ ಹೋರಾಟ ಮತ್ತು ಪ್ರಯತ್ನಕ್ಕಿಂತ ಅದು ಅತಿ ಹೆಚ್ಚಿನ ಸಾಮರ್ಥ್ಯವುಳ್ಳದ್ದು. ಅದು ಪೂರ್ಣಪ್ರಮಾಣದ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಅನುಭವವನ್ನು ತರುತ್ತದೆ. ಕೊನೆಯಲ್ಲಿ ಪ್ರಾರ್ಥನೆಯು, ಒಂದೋ, ನಮ್ಮನ್ನು ಯಾವುದಕ್ಕಾಗಿ ಸಿದ್ಧಗೊಳಿಸಿದೆಯೋ ಅದಕ್ಕಿಂತ ಉನ್ನತ ಸಂಗತಿಯಲ್ಲಿ ಅವಶ್ಯವಾಗಿ ಕೊನೆಗೊಳಿಸುತ್ತದೆ. (ವಾಸ್ತವವಾಗಿ, ನಾವು ಪ್ರಾರ್ಥನೆಯೆಂದು ಯಾವುದನ್ನು ಕರೆಯುತ್ತೇವೆಯೋ ಅದು ವಿಶ್ವಾಸ, ಸಂಕಲ್ಪ ಮತ್ತು ಹಂಬಲವಿರುವವರೆಗೆ ಅಗತ್ಯವಿಲ್ಲ) ಅಥವಾ ಸಂಬಂಧದ ಆನಂದಕ್ಕಾಗಿ ಮಾತ್ರ ಉಳಿಯುತ್ತದೆ. ನಾವು ಎಲ್ಲಿಯತನಕ ಅತ್ಯುನ್ನತವಾದ ಪ್ರೇರಣಾರಹಿತ ಭಕ್ತಿಯನ್ನು (ಬೇಡಿಕೆ ಮತ್ತು ಹಂಬಲವಿಲ್ಲದ ಶುದ್ಧ ಹಾಗೂ ಸರಳ ದೈವಭಕ್ತಿ) ಮುಟ್ಟುವುದಿಲ್ಲವೋ, ಪ್ರಾರ್ಥನೆಯ ಉದ್ದೇಶಗಳು ಅದನ್ನು ಅರಿಯಲು ಬೇಕಾದ ಉತ್ಸುಕತೆಯು ಎತ್ತರ–ಎತ್ತರವಾಗುತ್ತ ಬರುತ್ತದೆ.

**– CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 24/567–68**

---

***ಪ್ರಾರ್ಥನೆಗಳು, ಆತ್ಮವಿಶ್ವಾಸದಿಂದ ತುಂಬಿರಬೇಕು ಮತ್ತು ದುಃಖ ಅಥವಾ ದುಗುಡದಿಂದ ಮುಕ್ತವಾಗಿರಬೇಕು.***

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/367 – ಶ್ರೀ ಅರವಿಂದರು**

### ದೇವರೊಂದಿಗೆ ಸಂಬಂಧಗಳ ಸ್ವಭಾವ

ಯಾವ ಸಂಬಂಧಗಳು ದೈವೀ ಶಕ್ತಿಯ ಕಡೆಗಿನ ಶುದ್ಧ ಮತ್ತು ಸರಳ ನಿಲುವಿನಿಂದ ಉದ್ಭವಿಸುತ್ತವೆಯೋ, ಅಂಥವುಗಳು ಮಗುವಿನೊಂದಿಗೆ ದೈವಿಕ ತಂದೆ–ತಾಯಿ ಸಂಬಂಧದಂತೆ ಮತ್ತು ದೈವಿಕ ಸ್ನೇಹಿತನಂತೆ ಇರುತ್ತವೆ. ಈ ವಿಷಯಗಳಂತೆ, ದೈವೀಕತೆಗೆ ಮಾನವನ ಆತ್ಮವು, ಸದಾ ಸಹಾಯಕ್ಕಾಗಿ, ರಕ್ಷಣೆಗಾಗಿ, ಫಲಸಾಧನೆಗಾಗಿ ತುಡಿತ ಹೊಂದಿಬರುತ್ತದೆ. ಒಂದು ವೇಳೆ ಜ್ಞಾನವು ಗುರಿಯಾಗಿದ್ದರೆ, ಮಾರ್ಗದರ್ಶಿಗೆ, ಶಿಕ್ಷಕರಿಗೆ, ಬೆಳಕನ್ನು ನೀಡುವವರಿಗೆ, ದೇವರು ಜ್ಞಾನದ ಸೂರ್ಯನಂತೆ – ಅಥವಾ ಇದು ಬರಿಯ ಸಮಾಧಾನಕ್ಕಾಗಿ ಮತ್ತು ಬಿಡುಗಡೆಗಾಗಿ ಮತ್ತು ಸಾಂತ್ವನಕ್ಕಾಗಿ ನೋವಿನ ಮತ್ತು ನರಳುವಿಕೆಯ

ಹಿನ್ನೆಲೆಯಲ್ಲಿ ಬಂದಿರಬಹುದು. ಈ ಬಿಡುಗಡೆಯು ಒಂದೋ ಸ್ವತಃ ನರಳುವಿಕೆಯಿಂದ ಇರಬಹುದು ಅಥವಾ ಎಲ್ಲ ನರಳುವಿಕಗೆ ಕಾರಣವಾದ ಈ ಜಗತ್ತಿನಿಂದ ಇರಬಹುದು ಅಥವಾ ಎಲ್ಲ ಒಳಗಣ ಮತ್ತು ಸತ್ಯ ಕಾರಣಗಳಿಂದ ಇರಬಹುದು[1]. ಈ ವಿಷಯಗಳಲ್ಲಿ ನಿಶ್ಚಿತವಾದ ಶ್ರೇಣಿಗಳು ಇರುವುದನ್ನು ನಾವು ಕಾಣಬಹುದು. ಪಿತೃತ್ವದ ಸಂಬಂಧವು ಯಾವಾಗಲೂ ಕಡಿಮೆ ನಿಕಟವಾಗಿದ್ದರೂ, ತೀಕ್ಷ್ಣ, ಭಾವೋದ್ರಿಕ್ತ, ಆತ್ಮೀಯವಾಗಿದೆ. ಆದುದರಿಂದ ಅದು ಅತಿ ಹತ್ತಿರದ ಮಿಲನವಾದ ಯೋಗದ ಮೇಲೆ ಕಡಿಮೆ ಅವಲಂಬಿತವಾಗಿದೆ. ದೈವಿಕ ಸ್ನೇಹಿತನ ವಿಷಯವು ಮಧುರವಾಗಿರುತ್ತದೆ ಮತ್ತು ಹೆಚ್ಚು ನಿಕಟವಾಗಿದೆ. ಅಸಮಾನತೆಯಲ್ಲಿ ಮತ್ತು ಪರಸ್ಪರ ಸ್ವ–ಕೊಡುವಿಕೆಯಲ್ಲಿ ಸಹ ಸಮಾನತೆ ಮತ್ತು ಅನ್ಯೋನ್ಯತೆಯನ್ನು ಒಪ್ಪಿಕೊಳ್ಳುತ್ತದೆ; ಯಾವಾಗ ಕೊಡುವ–ತೆಗೆದುಕೊಳ್ಳುವ ಎಲ್ಲ ಕಲ್ಪನೆಗಳೂ ಮರೆಯಾಗುತ್ತದೆಯೋ, ಯಾವಾಗ ಈ ಸಂಬಂಧವು ತೃಪ್ತಿಕರವಾದ ಪ್ರೀತಿಯ ಪ್ರಚೋದನೆಯ ಹೊರತು ಪ್ರೇರಣಾರಹಿತವಾಗುತ್ತದೆಯೋ, ಆಗ ಆ ಸಂಬಂಧವು ಅಸ್ತಿತ್ವದ ಲೀಲೆಯಲ್ಲಿ, ಆ ಜೊತೆಗಾರನ ಸಂಬಂಧವು ಮುಕ್ತ ಮತ್ತು ಆನಂದಯುತವಾಗಿ ಮಾರ್ಪಾಡು ಹೊಂದುತ್ತದೆ. ಆದರೆ ತಾಯಿ ಮತ್ತು ಮಗುವಿನ ಸಂಬಂಧ ಇನ್ನೂ ಗಾಢವಾದದ್ದು ಮತ್ತು ಹೆಚ್ಚು ಅನ್ಯೋನ್ಯವಾದದ್ದು. ಎಲ್ಲಿಯಾದರೂ, ಆಧ್ಯಾತ್ಮಿಕ ಉತ್ಸಾಹವು ಹೆಚ್ಚು ತೀವ್ರತರವಾಗಿರುತ್ತದೆಯೋ ಮತ್ತು ಮನುಷ್ಯನ ಹೃದಯದಿಂದ ಬುಗ್ಗೆಯಾಗಿ ಚಿಮ್ಮುತ್ತದೆಯೋ, ಅಲ್ಲಿ ಈ ಸಂಬಂಧ (ತಾಯಿ–ಮಗುವಿನ ಸಂಬಂಧ) ಒಂದು ದೊಡ್ಡದಾದ ಪಾತ್ರವನ್ನು ವಹಿಸುತ್ತದೆ. ಆತ್ಮವು ತನ್ನ ಎಲ್ಲ ಅಪೇಕ್ಷೆಗಳ ಮತ್ತು ತೊಂದರೆಗಳಲ್ಲಿಯೂ ಸಹಿತ ಆ ಮೂಲ ಪರಮ–ಆತ್ಮದೆಡೆ ಹೋಗುತ್ತದೆ. ಅದು ಹಾಗಾಗಬೇಕೆಂದು ದಿವ್ಯ ಮಾತೆಯ ಬಯಕೆ. ಈ ಪ್ರೀತಿಯ ಸ್ವಯಂ ಅಸ್ತಿತ್ವದ ಸ್ವಭಾವದಿಂದ, ಅವಳತ್ತಲೂ ಸಹಿತ ತಿರುಗುತ್ತದೆ. ಅದಕ್ಕೆ ಕಾರಣ, ಈ ಜಗತ್ತಿನಲ್ಲಿ ನಾವು ನಮ್ಮ ಅಲೆದಾಟದಿಂದ ಮತ್ತು ವೃಕ್ಷಸ್ಥಳದಲ್ಲಿ (ಹೃದಯದಲ್ಲಿ) ನಾವು ವಿಶ್ರಾಂತಿಯನ್ನು ಕಂಡುಕೊಳ್ಳುವುದಕ್ಕಾಗಿ ಅದು ನಮ್ಮ ನಿವಾಸದ ಕಡೆಗೆ ಬೊಟ್ಟು ಮಾಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 24/568**

---

1. ಗೀತೆಯು ಗುರುತಿಸಿರುವ ನಾಲ್ಕು ವರ್ಗಗಳ ಭಕ್ತರಲ್ಲಿ ಇಲ್ಲಿ ಮೂರು ಜನರು ಅರ್ತ, ಅರ್ಥಾರ್ಥಿ, ಜಿಜ್ಞಾಸುಗಳಾಗಿದ್ದು, ಅವರು ಬಳಲಿದ, ವೈಯಕ್ತಿಕ ವಸ್ತುಗಳನ್ನು ಬಯಸುವ ಮತ್ತು ದೈವಿಕ ಜ್ಞಾನವನ್ನು ಬೇಡುವವರಾಗಿದ್ದಾರೆ.

## ಅತ್ಯುಚ್ಚ ಮತ್ತು ಉತ್ಕಟ ಸಂಬಂಧ

ಅತ್ಯುಚ್ಚ ಮತ್ತು ಉತ್ಕಟ ಸಂಬಂಧವು ಯಾವುದೇ ಸಾಧಾರಣ ಧಾರ್ಮಿಕ ಪ್ರೇರಣೆಗಳಿಂದ ಪ್ರಾರಂಭವಾಗದೆ, ಆದರೆ ಅದು ಯೋಗದ ಜೀವಾಳವಾಗಿದ್ದು, ವಾತ್ಸಲ್ಯದ ಸ್ವರೂಪದಿಂದ ಚಿಮ್ಮುತ್ತದೆಯೋ ಆ ಸಂಗತಿಯಾಗಿದೆ; ಇದು ಪ್ರೇಮಿ ಮತ್ತು ಪ್ರಿಯತಮೆಯ ಭಾವೋದ್ವೇಗದಂತೆ ಇದೆ. ಎಲ್ಲಿ ಆತ್ಮವು ದೇವರೊಡನೆ ಸಂಪೂರ್ಣ ಮಿಲನದ ಬಯಕೆ ಹೊಂದಿರುತ್ತದೆಯೋ, ಅಲ್ಲಿ ಈ ತರಹದ ದೈವಿಕ ಹಂಬಲವು, ಧರ್ಮಗಳಲ್ಲಿ ಅದರ ಮಾರ್ಗವನ್ನು ಮಾಡಿಕೊಳ್ಳುತ್ತದೆ (ಸಾಮಾನ್ಯ ವ್ಯವಸ್ಥೆಯಲ್ಲಿ ಅದಕ್ಕೆ ಯಾವುದೇ ಸ್ಥಾನವು ಇಲ್ಲದ ಹಾಗೆ ತೋರುತ್ತದೆ). ಇಲ್ಲಿ, ಒಂದು ವಸ್ತುವನ್ನು ಕೇಳಿದ್ದು 'ಪ್ರೀತಿ', ಒಂದು ವಸ್ತುವಿನಿಂದ ಹೆದರಿದ್ದು "ಪ್ರೀತಿಯ ಹಾನಿ", ಒಂದು ದುಃಖ ಎಂದರೆ ಪ್ರೀತಿಯ ಬೇರ್ಪಡುವಿಕೆಯ/ಅಗಲಿಕೆಯ ದುಃಖ. ಎಲ್ಲಾ ಇತರ ವಿಷಯಗಳು ಪ್ರೇಮಿಗಾಗಿ ಅಸ್ತಿತ್ವದಲ್ಲಿರುವುದಿಲ್ಲ, ಒಂದೋ ಬರೀ ಘಟನೆಗಳಾಗಿ ಬರುತ್ತವೆ ಅಥವಾ ಫಲಿತಾಂಶಗಳಾಗಿ ಆದರೆ ಪ್ರೀತಿಯ ವಸ್ತುಗಳಾಗಲಿ ಅಥವಾ ಕರಾರುಗಳಾಗಲಿ ಅಲ್ಲ. ಪ್ರೀತಿಯು, ಒಂದು ಜೀವಿಯಲ್ಲಿ ಏಕಾಂತ, ಏಕತ್ವದಿಂದ ಮತ್ತು ಇನ್ನೂ ತನ್ನಷ್ಟಕ್ಕೆ ತಾವು ಒಂದರಿಂದ ಒಂದು ಬೇರೆಯಾಗಿ ಮತ್ತು ಸಂಯೋಗಗೊಳಲು ಶಕ್ತವಾದ ಹೃದಯದಲ್ಲಿ ಆತ್ಮಗಳ ಮಧ್ಯೆ ಏಕಾಂತ ಭಾವದಿಂದ ಅಥವಾ ಏಕಾಂತತೆಯ ಬಯಕೆಯಿಂದ ಚಿಮ್ಮುತ್ತದೆ. ಆದ್ದರಿಂದ ಇವು ಎಲ್ಲವೂ, ಬೇರೆ ಸಂಬಂಧಗಳೂ ಬರೀ ಪ್ರೀತಿಯ ಸಲುವಾಗಿ, ಜೀವಿಯ ಸ್ವಯಂ ಅಸ್ತಿತ್ವದಲ್ಲಿರುವ ಪ್ರೇರಣಾರಹಿತ ಆನಂದಕ್ಕಾಗಿ ಅವರಲ್ಲಿಗೆ ಬರುವವು. ಆದರೂ, ಸಂಬಂಧಗಳು ಪ್ರಾರಂಭವಾಗಿ ಕೊನೆಯಲ್ಲಿ ತಮ್ಮ ಆಟದ ತೃಪ್ತಿಯನ್ನು ಬೇರೆ ಉದ್ದೇಶಗಳಲ್ಲಿ ಸ್ವಲ್ಪಮಟ್ಟಿಗೆ ಕಂಡುಕೊಳ್ಳುತ್ತದೆ. ಆದರೆ, ಇಲ್ಲಿ ಪ್ರೀತಿಯೇ ಪ್ರಾರಂಭ, ಪ್ರೀತಿಯೇ ಅಂತ್ಯ ಮತ್ತು ಪ್ರೀತಿಯೇ ಒಟ್ಟು ಉದ್ದೇಶ. ಆದಾಗ್ಯೂ, ಅಲ್ಲಿ ಸ್ವಾಧೀನತೆಯ ಬಯಕೆ ಇದೆ. ಆದರೂ ಸ್ವಯಂ–ಅಸ್ತಿತ್ವದ ಪ್ರೀತಿಯ ಪೂರ್ಣತೆಯಲ್ಲೂ ಸಹ ಇದನ್ನು ಜಯಿಸಬಹುದು.

ಕೊನೆಯಲ್ಲಿ ಭಕ್ತನ ಬೇಡಿಕೆ ಏನೆಂದರೆ, ಅವನ ಭಕ್ತಿ ಎಂದಿಗೂ ಕಡಿಮೆಯಾಗಬಾರದು ಹಾಗೂ ಕೊನೆಯಾಗಬಾರದು. ಅವನು ಸ್ವರ್ಗವನ್ನು ಬೇಡುವುದಿಲ್ಲ, ಜನನದಿಂದ ಮುಕ್ತಿಯನ್ನು ಬೇಡುವುದಿಲ್ಲ ಅಥವಾ ಬೇರೆ

ವಸ್ತುಗಳನ್ನು ಕೇಳುವುದಿಲ್ಲ. ಅವನು ಕೇಳುವುದು ಒಂದನ್ನೇ: ತನ್ನ ಪ್ರೀತಿ ಪರಿಪೂರ್ಣವಾಗಿರಬೇಕು ಮತ್ತು ಶಾಶ್ವತವಾಗಿರಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 24/569**

**ಬಯಕೆ ನೆರವೇರಿಸುವ ಸ್ಥಳಗಳ ವಾತಾವರಣ**

ಕಲಾತ್ಮಕ ದೃಷ್ಟಿಯಿಂದ ಅತ್ಯಂತ ಭವ್ಯವೆಂದು ಊಹಿಸಬಹುದಾದ ಸ್ಮಾರಕ, ಅತ್ಯಂತ ಸುಂದರವಾದ ಪ್ರಾರ್ಥನಾ ಮಂದಿರವನ್ನು ನಾನು ಫ್ರಾನ್ಸ್‌ನಲ್ಲಿ ನೋಡಿದೆನು. ಅಲ್ಲಿ, ಅತ್ಯಂತ ಪವಿತ್ರವಾದ ಒಂದು ಸ್ಥಳದಲ್ಲಿ ಅಗಾಧವಾದ ಕತ್ತಲೆಯ ವಿಶಾಲ ಪ್ರದೇಶದಲ್ಲಿ ಒಂದು ಜೇಡವು ತನ್ನ ಬಲೆಯನ್ನು ಹೆಣೆದುಕೊಂಡಿದೆ. ಭಕ್ತರ ಪ್ರಾರ್ಥನೆಯಿಂದ ಹೊರಡುವ ಶಕ್ತಿಗಳನ್ನು, ಜನರ ಭಕ್ತಿಯಿಂದ ಹೊರಸೂಸುವ ಶಕ್ತಿಗಳನ್ನು ಅದು ತನ್ನತ್ತ ಹೀರಿಕೊಂಡು ಹಿಡಿಯುತ್ತಲಿದೆ. ಯಾರು ಆ ಸ್ಥಳದಲ್ಲಿದ್ದು ಪ್ರಾರ್ಥನೆ ಮಾಡುತ್ತಿದ್ದರೋ ಅವರು ದೈವಿಕ ಸ್ಪರ್ಶವನ್ನು ಅನುಭವಿಸುತ್ತಿದ್ದರು. ಅವರ ಪ್ರಾರ್ಥನೆಗಳಿಂದ ಎಲ್ಲ ತರಹದ ವರಗಳನ್ನು ಪಡೆದುಕೊಂಡರು. ಅದು ಅಷ್ಟೊಂದು ಪ್ರೋತ್ಸಾಹದಾಯಕ ನೋಟವಾಗಿರಲಿಲ್ಲ. ಆದರೂ ಅಲ್ಲಿ ಏನಿರಬೇಕಾಗಿತ್ತೋ ಅದು ಇತ್ತು. ಆ ದುಷ್ಟ ಸಂಗತಿಯನ್ನು ಏನೋ ಒಂದು ಉತ್ತಮವಾದುದರಲ್ಲಿ ಬದಲಾವಣೆ ಮಾಡುವ ವಿಶ್ವಾಸ ಅವರಲ್ಲಿತ್ತು. ನೀವು ದೇವರನ್ನು ಪ್ರಾರ್ಥಿಸುತ್ತಿದ್ದೆವೆಂದು ಯೋಚಿಸುತ್ತಿದ್ದೀರಾ? ಆ ಅತಿ ದೊಡ್ಡ ಜೇಡಕ್ಕೆ ನಿಮ್ಮ ಪ್ರಾರ್ಥನೆಗಳ ಶಕ್ತಿಯು ಆಹಾರವಾಗಿದೆ ಎಂದು ನಿಜವಾಗಿಯು ನಾನೇನಾದರು ಅವರಿಗೆ ಹೇಳಿದರೆ, ಅದೊಂದು ಧಾರ್ಮಿಕ ಕೆಲಸವಾಗಲಾರದು. ಯಾವಾಗಲೂ ಮತ್ತು ಎಲ್ಲ ಸಮಯದಲ್ಲೂ ಬಹುತೇಕ ಇದೇ ತರಹ ಇರುತ್ತದೆ. ಮನುಷ್ಯನ ಭಾವನೆಗಳ (ದುಗುಡ) ಕಂಪನಗಳಿಂದ/ತರಂಗಗಳಿಂದ ಈ ಪ್ರಾಣಿಕ ಶಕ್ತಿಗಳು ತಮ್ಮ ಆಹಾರವನ್ನು ದೊರಕಿಸಿಕೊಳ್ಳುತ್ತವೆ. ಕೇವಲ ಕೆಲವೇ ಕೆಲ, ಅತ್ಯಲ್ಪ ಜನ ಮಾತ್ರ ನಿಜವಾದ ಧಾರ್ಮಿಕ ಭಾವನೆಗಳೊಂದಿಗೆ ಚರ್ಚಿಗೆ ಅಥವಾ ಮಂದಿರಗಳಿಗೆ ಹೋಗುತ್ತಾರೆ. ಆ ಜನ ಚರ್ಚುಗಳಿಗೆ ಅಥವಾ ಮಂದಿರಗಳಿಗೆ ಹೋಗುವುದು ಪ್ರಾರ್ಥನೆ ಮಾಡುವುದಕ್ಕಲ್ಲ ಅಥವಾ ದೇವರಿಂದ ಏನನ್ನಾದರೂ ಕೇಳುವುದಕ್ಕಲ್ಲ; ಅವರು ಹೋಗುವುದು ತಮ್ಮನ್ನು ತಾವು ಅರ್ಪಿಸಿಕೊಳ್ಳಲಿಕ್ಕಾಗಿ, ಧನ್ಯವಾದ ಹೇಳುವುದಕ್ಕಾಗಿ ಮಾತ್ರ. ಹೀಗೆ ಮಾಡುವವರು ದಶ ಲಕ್ಷದಲ್ಲಿ ಒಬ್ಬರಿರಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/194–95** **– ಶ್ರೀಮಾತೆ**

### ಬಾಹ್ಯ ಅಥವಾ ಆಂತರಿಕ ವಿಷಯಗಳಿಗಾಗಿ ಪ್ರಾರ್ಥಿಸುವುದು

*"ಒಬ್ಬನು ಸಾಧಕನಿದ್ದಾಗ, ಪ್ರಾರ್ಥನೆಯು ಸಾಧನೆಗೆ ಸೇರಿದ, ದೈವೀ ಕಾರ್ಯಕ್ಕಾಗಿ ಅವಶ್ಯಕವಾದ ಆಂತರಿಕ ವಿಷಯಗಳಿಗಾಗಿ ಮತ್ತು ಬಾಹ್ಯ ವಿಷಯಗಳಿಗಾಗಿ ಮಾತ್ರ ಎಂದು", ನೀವು ಹೇಳಿದಿರಿ, ಆದರೆ, ಪ್ರಾರ್ಥನೆಯ ಬಗ್ಗೆ ಹೇಳಿದ ನಂತರದ ಭಾಗವು ನನಗೆ ಸ್ಪಷ್ಟವಾಗಲಿಲ್ಲ. ದಯವಿಟ್ಟು ವಿವರಿಸುವಿರಾ?*

ಒಬ್ಬರ ಸ್ವಂತ ಅನುಕೂಲಕ್ಕಾಗಿ, ತೃಪ್ತಿಗಾಗಿ, ಲಾಭಕ್ಕಾಗಿ ಅಥವಾ ಆಧ್ಯಾತ್ಮ ಜೀವನದ ಭಾಗವಾಗಿ, ಕಾರ್ಯದ ಯಶಸ್ಸಿಗಾಗಿ, ಉಪಕರಣಗಳ ಬೆಳವಣಿಗೆಗಾಗಿ ಇತ್ಯಾದಿಗಳನ್ನು ಪಡೆಯುವುದರ ಮೇಲೆ ಬಾಹ್ಯ ವಿಷಯಗಳ ಅವಲಂಬನೆಯಾಗಿದೆ. ಇದು ಮುಖ್ಯವಾಗಿ ಆಂತರಿಕ ಮನೋವೃತ್ತಿಯ ಪ್ರಶ್ನೆಯಾಗಿದೆ. ಉದಾಹರಣೆಗಾಗಿ, ಅಂಗುಳವನ್ನು (ನಾಲಿಗೆಯನ್ನು) ತೃಪ್ತಿಪಡಿಸುವುದಕ್ಕಾಗಿ ಒಳ್ಳೆಯ ಆಹಾರ ಕೊಂಡುಕೊಳ್ಳಲು ದುಡ್ಡು ಬೇಕೆಂದು ಪ್ರಾರ್ಥಿಸಿದರೆ, ಅದು ಒಬ್ಬ ಸಾಧಕನಿಗೆ ಸರಿಯಾದ ಪ್ರಾರ್ಥನೆಯಲ್ಲ. ಒಂದು ವೇಳೆ ಅದೇ ಪ್ರಾರ್ಥನೆಯು, ಮಾತೆಯವರ ಕೆಲಸಕ್ಕಾಗಿ ಹಣ ಬೇಕೆಂದು ಮಾಡಿದರೆ ಅದು ನ್ಯಾಯಯುತವಾದ ಪ್ರಾರ್ಥನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/314–15**

### ಅತೀಂದ್ರಿಯ ವ್ಯಕ್ತಿಗೆ ಆವಿರ್ಭಾವಕ್ಕಾಗಿ ಅನುಮತಿಸಬೇಕಾದ ಮಾರ್ಗ

ರೂಪಿಸುವುದಕ್ಕಾಗಿ ಮತ್ತು ಸಂಘಟನೆಗಾಗಿ ಈ ಮನಸ್ಸು ಒಂದು ಉಪಕರಣವಾಗಿದೆ. ಒಂದು ವೇಳೆ ಅತೀಂದ್ರಿಯವು ಅದನ್ನು ಉಪಯೋಗಿಸಲು ಮನಸ್ಸು ಬಿಟ್ಟದ್ದೇ ಆದರೆ, ಅದೂ ಒಂದು ರೀತಿಯಲ್ಲಿ ಉತ್ತಮವಾದದ್ದೇ ಆಗಿದೆ. ಆದರೆ, ಅತೀಂದ್ರಿಯವು ಪ್ರಕಟವಾಗಲು ಸಹಾಯ ಮಾಡುವುದು ಮನಸ್ಸಲ್ಲ. ಅಲ್ಲಿ ಪಾತ್ರಗಳು ವ್ಯತಿರಿಕ್ತವಾಗುತ್ತವೆ. ಮನಸ್ಸು, ಬಾಹ್ಯ ಪ್ರಜ್ಞೆಯನ್ನು ಅದಾಗಲೇ ತನ್ನ ಹತೋಟಿಯಲ್ಲಿ ತೆಗೆದುಕೊಂಡ ನಂತರದಲ್ಲಿ, ಅತೀಂದ್ರಿಯವು ಪ್ರಕಟವಾಗಲು ಒಂದು ಉಪಕರಣವಾಗಬಹುದು. ಅದಕ್ಕಿಂತ ಮೊದಲೇ ಆಗುವುದು ಅತಿ ವಿರಳ. ಸಾಮಾನ್ಯವಾಗಿ ಅದೊಂದು (ಮನಸ್ಸು), ಮುಸಕು (ಮುಚ್ಚಳದಂತೆ) ಮತ್ತು ಒಂದು ಅಡಚಣೆ ಕೂಡ ಹೌದು. ಆದರೆ, ನಿಶ್ಚಯವಾಗಿಯೂ, ಅದು ಪ್ರಕಟವಾಗಲು ಸಹಾಯ ಮಾಡಲಾರದು. ಒಂದು ವೇಳೆ ಅದು ತನ್ನ ಕ್ರಿಯೆಯಲ್ಲಿ

ನಿಜ ಸ್ಥಾನವನ್ನು ಮತ್ತು ನಿಜ ಚಲನೆಯನ್ನು ತೆಗೆದುಕೊಂಡಾಗ ಸಹಾಯ–ವಾಗಬಹುದು. ಒಂದು ವೇಳೆ ಅದು ಅತೀಂದ್ರಿಯ ಪ್ರೇರಣೆಗೆ ಪೂರ್ಣವಾಗಿ ನಮ್ರವಾದರೆ, ಅದು ಜೀವನವನ್ನು ಕ್ರಮಗೊಳಿಸಲು ಸಹಾಯ ಮಾಡುತ್ತದೆ. ಇದು ಅದರ ಕಾರ್ಯವೂ ಹೌದು, ಇರುವಿಕೆಯ ಕಾರಣವೂ ಹೌದು. ಮೊಟ್ಟ ಮೊದಲನೆಯದಾಗಿ, ಅತೀಂದ್ರಿಯವು ಈ ಕ್ಷೇತ್ರವನ್ನು ತನ್ನ ಸ್ವಾಧೀನದಲ್ಲಿ ತೆಗೆದುಕೊಂಡಿರಬೇಕು, ನಿಲಯದ ಯಜಮಾನನಾಗಿರಬೇಕು, ನಂತರದಲ್ಲಿ ವಸ್ತುಗಳನ್ನು ಜೋಡಿಸಬಹುದು.

ಬಾಹ್ಯ ಅಸ್ತಿತ್ವಕ್ಕೆ ಇರುವುದು ಒಂದೇ ಒಂದು ಮಾರ್ಗ. ಈಗ ಭೌತಿಕ ಜೀವಿಯನ್ನು ತೆಗೆದುಕೊಳ್ಳೋಣ – ಪುಟ್ಟ ಬಡಪಾಯಿ ಭೌತಿಕ ಜೀವಿ, ಬಾಹ್ಯ ಜೀವಿ, ಏನೂ ಗೊತ್ತಿಲ್ಲದ, ತನ್ನಷ್ಟಕ್ಕೆ ತಾನು ಏನೂ ಮಾಡದ ಭೌತಿಕ ಜೀವಿಯಾಗಿದ್ದಾನೆ. ಸರಿ, ಅತೀಂದ್ರಿಯ ಜೀವಿಗೆ ಪ್ರಕಟವಾಗಲು ಅವಕಾಶ ಮಾಡಿಕೊಡಲು ಅದಕ್ಕೆ ಇರುವುದು ಒಂದೇ ಒಂದು ಮಾರ್ಗ: ಏನೊಂದೂ ವಾದ ಮಾಡದೇನೆ ಅಥವಾ ತಿಳಿದುಕೊಳ್ಳಲು ಪ್ರಯತ್ನ ಮಾಡದೇನೆ, ಯಾವ ರೀತಿ ಒಂದು ಮಗುವು ಸರಳವಾಗಿ ಪ್ರೀತಿ ಪೂರ್ವಕವಾಗಿ ಅಭೀಪ್ಸೆ ಪಡುವಂತೆ, ಪ್ರಾರ್ಥನೆ ಮಾಡುವಂತೆ, ಕೇಳುವಂತೆ, ತನ್ನೆಲ್ಲ ಶಕ್ತಿಯಿಂದ ಬಯಸುವಂತೆ ಮತ್ತು ತರ್ಕ ಮಾಡುವಲ್ಲಿ ಆದ ಅಡಚಣೆ ಮತ್ತು ಅರ್ಥ ಮಾಡಿಕೊಳ್ಳಲು ಮಾಡಿದ ಈ ಪ್ರಯತ್ನದಲ್ಲಿ ಎಷ್ಟೊಂದು ವ್ಯಾಪಕ ಅನುಭವವನ್ನು ಹಾಕಲಾಗಿದೆ ಎಂದು ಊಹಿಸುವುದು ಕಷ್ಟ. ಯಾವಾಗ ನೀವು ಒಂದು ಸ್ಥಿತಿಯನ್ನು ತಲುಪುವ ಹಂತದಲ್ಲಿರುತ್ತೀರೋ, ಆ ಕ್ಷಣದಲ್ಲಿ "ಏನೋ ಒಂದು" ಸಂಭವಿಸುತ್ತದೆ. ಜೀವಿಯ ಪ್ರಜ್ಞೆಯಲ್ಲಿ ಕೆಲ ಕಂಪನಗಳ ಮೂಲಕ ಬದಲಾಯಿಸಲ್ಪಡುತ್ತದೆ. ನೀವು ಎಲ್ಲರೂ ಮಹತ್ವಾಕಾಂಕ್ಷೆಯಲ್ಲಿ ಉದ್ವಿಗ್ನರಾಗಿದ್ದೀರಿ, ಮತ್ತು ನೀವು ಮಹತ್ವಾಕಾಂಕ್ಷೆಯನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಗಿದ್ದೀರಿ ಮತ್ತು ಉತ್ತರಕ್ಕಾಗಿ ಕಾಯುತ್ತ ನಿಂತಿದ್ದೀರಿ "ಏನು ಸಂಭವಿಸುತ್ತಿದೆ, ಮತ್ತು ಏನು ಸಂಭವಿಸಬಹುದು, ಯಾವಾಗ ಸಂಭವಿಸಬಹುದು, ಯಾವ ರೀತಿ ಸಂಭವಿಸಬಹುದು, ಅದು ಏಕೆ ಹಾಗೆ, ಮತ್ತು ಯಾವ ಶ್ರೇಣಿಯಲ್ಲಿ ವಿಷಯಗಳು ಪ್ರಕಟವಾಗಬಹುದು?".. ಈಗ ಎಲ್ಲ ಮುಗಿಯಿತು, ನೀನು ಇನ್ನು ಎದ್ದು ಕೋಣೆಯ ಕಸ ಗೂಡಿಸಬಹುದು, ನೀನು ಯಾವುದಕ್ಕೂ ಪ್ರಯೋಜನವಿಲ್ಲದವ ಎಂದು ಈ ದರಿದ್ರ ಮನಸ್ಸು ಕೋಲಾಹಲ ಮಾಡಲು ಮತ್ತು ಆಶ್ಚರ್ಯಪಡಲು ಶುರು ಮಾಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/41–42**

## ನಮ್ಮ ಕೃತಜ್ಞತೆಗಳನ್ನು ವ್ಯಕ್ತಪಡಿಸುವ ಅತ್ಯುತ್ತಮ ಮಾರ್ಗ

ನಮ್ಮಲ್ಲಿರುವ ಎಲ್ಲ ಅಹಂಭಾವವನ್ನು ಜಯಿಸಿ ಮತ್ತು ಈ ಬದಲಾವಣೆಗಾಗಿ ಮಾಡುವ ಸತತ ಪ್ರಯತ್ನವೇ ನಮ್ಮ ಕೃತಜ್ಞತೆಗಳನ್ನು ವ್ಯಕ್ತಪಡಿಸಲು ಮಾಡಬೇಕಾದ ಒಳ್ಳೆಯ ಕೆಲಸವಾಗಿದೆ. ಬೇರೆಯವರು ಬದಲಾವಣೆ ಹೊಂದಿಲ್ಲ ಎಂಬ ತಳಹದಿಯ ಮೇಲೆ ಮನುಷ್ಯನ ಅಹಂಭಾವವು, ಪದತ್ಯಾಗ ಮಾಡಲು ನಿರಾಕರಿಸುತ್ತದೆ. ಆದರೆ ಅದು ಕೆಟ್ಟ ಇಚ್ಛೆಯ ಪ್ರಬಲ ಕೇಂದ್ರವಾಗಿದೆ. ಬೇರೆಯವರು ಏನು ಮಾಡುತ್ತಾರೆ ಎಂಬುದನ್ನು ಪರಿಗಣಿಸದೆ ತಮ್ಮನ್ನು ತಾವು ರೂಪಾಂತರ ಮಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/428 – ಶ್ರೀಮಾತೆ**

ಸಂಸಾರ ಜೀವನವು ತನ್ನ ಸಹಜ ಸ್ವಭಾವದಲ್ಲಿ ಒಂದು ಅವಿಶ್ರಾಂತ ಕ್ಷೇತ್ರ. ಅದರ ಮೂಲಕ ಸರಿಯಾದ ಮಾರ್ಗದಲ್ಲಿ ಹೋಗಬೇಕಾದರೆ, ನಾವು ನಮ್ಮ ಜೀವನ ಮತ್ತು ಕ್ರಿಯೆಗಳನ್ನು ದೇವರಿಗೆ ಅರ್ಪಿಸಬೇಕು ಮತ್ತು ಅಂತರಂಗದ ದೇವರನ್ನು ಶಾಂತಿಗಾಗಿ ಪ್ರಾರ್ಥಿಸಬೇಕು. ಯಾವಾಗ ಮನಸ್ಸು ನಿಶ್ಚಲವಾಗುತ್ತದೆಯೋ ಆಗ ಶ್ರೀಮಾತೆಯವರು ನಮ್ಮ ಜೀವನಕ್ಕೆ ಆಸರೆಯಾಗಿರುವುದನ್ನು ಹಾಗೂ ಎಲ್ಲವನ್ನು ಅವರಿಗೆ ಒಪ್ಪಿಸಿದ ಅನುಭವವಾಗಬಹುದು.

*

ಸಾಧನೆಯಲ್ಲಿ ಪ್ರವೇಶ ಮಾಡಬೇಕೆಂದರೆ, ಯಾವಾಗಲೂ ದೇವರನ್ನು ನೆನೆಯಬೇಕೆಂದು ಅವಳ ಷರತ್ತು. ತನ್ನ ತೊಂದರೆಗಳನ್ನು ಹಾದುಹೋಗಬೇಕಾದ ಕಠಿಣ ಪರೀಕ್ಷೆಗಳೆಂದು ಪರಿಗಣಿಸಿ, ಸತತವಾಗಿ ಪ್ರಾರ್ಥಿಸಿ ಮತ್ತು ದೈವೀ ಸಹಾಯವನ್ನು ಹಾಗೂ ರಕ್ಷಣೆಯನ್ನು ಬಯಸು, ಮತ್ತು ದೈವೀ ಉಪಸ್ಥಿತಿಗಾಗಿ ತನ್ನ ಹೃದಯವನ್ನು ಹಾಗೂ ಪ್ರಜ್ಞೆಯನ್ನು ತೆರೆದುಕೊಳ್ಳಬೇಕೆಂದು ಬೇಡುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/345 – ಶ್ರೀ ಅರವಿಂದರು**

# ಸಾಧನಾ ಸೂತ್ರ

– ಅನುವಾದ: ಪುಟ್ಟು ಕುಲಕರ್ಣಿ

## ಹೃತ್ಪೂರ್ವಕ ವಿಶ್ವಾಸದ ಅವಶ್ಯಕತೆ

ನಾನು ಹೇಳುತ್ತಿರುವದು ಏನೆಂದರೆ ಒಂದು ಬಲವಾದ, ಹೃತ್ಪೂರ್ವಕವಾದ ಮತ್ತು ಒಂದು ವೇಳೆ ಸಾಧ್ಯವಾದಲ್ಲಿ ಸಂಪೂರ್ಣ ವಿಶ್ವಾಸ ಹೊಂದುವ ವಿಷಯವಾಗಿದೆ. ಏಕೆಂದರೆ, ನಿಮ್ಮ ದೃಷ್ಟಿಕೋನವು ಬಹುತೇಕವಾಗಿ ನೀವೆ ಸಂಪೂರ್ಣವಾಗಿ ಜವಾಬ್ದಾರಿಯನ್ನು ಹೊತ್ತುಕೊಂಡಂತೆ ಇರುವಂತಿದೆ – ಆದರೆ ಸಾಕ್ಷಾತ್ಕಾರ, ಅಸ್ತಿತ್ವ ಇಂತಹ ಉಳಿದೆಲ್ಲ ಅತೃಪ್ತದಾಯಕವಾಗಿರುವಂತೆಯೇ ಇದೆ. ಮತ್ತೆ ನಿಮ್ಮ ಪ್ರಾರ್ಥನೆಯೂ ಸಹಿತ ಅದನ್ನು ನಿಮ್ಮ ಬಳಿಗೆ ತರುವಂತೆ ಇಲ್ಲವೇ ಇಲ್ಲ.

ಅಂದ ಹಾಗೆ, ಕೇವಲ ಪ್ರಾರ್ಥನೆಯು ಮಾತ್ರವೇ ತಂತಾನೇ ಅದೆಲ್ಲವನ್ನೂ ತೆಗೆದುಕೊಂಡು ಬರುವದಿಲ್ಲ. ಒಂದು ವೇಳೆ ನಿಮ್ಮ ಆಂತರ್ಯದಲ್ಲಿ ಸದಾ ಪ್ರಜ್ವಲಿಸುತ್ತಿರುವ ವಿಶ್ವಾಸವಿದ್ದಲ್ಲಿ ಅಥವಾ ಅಸ್ತಿತ್ವದ ಎಲ್ಲ ವಿಷಯಗಳಲ್ಲಿ ಪರಿಪೂರ್ಣವಾದ ವಿಶ್ವಾಸವಾದರೂ ಇರಬೇಕು. ಹಾಗೆಂದುಕೊಂಡು ಯಾರ ವಿಶ್ವಾಸವು ಬಲವಾಗಿ ಇರುವದಿಲ್ಲವೋ ಅಥವಾ ಆಗ ಸಂಪೂರ್ಣ ಶರಣಾಗತಿಯ ಹಂತ ಬಂದಿರುವದಿಲ್ಲ. ಆದರೆ ಸಾಮಾನ್ಯವಾಗಿ ಅವರು ಪ್ರಥಮ ಹಂತದಲ್ಲಿ ಸಣ್ಣ–ಸಣ್ಣ ಹೆಜ್ಜೆಯಿಂದಲೇ ತಮ್ಮ ಪ್ರಯಾಣ ಆರಂಭಿಸ–ಬೇಕಾಗಿರುವದು. ಜೊತೆಗೆ ಅವುಗಳ ಸ್ವಭಾವದ ಮೂಲಕ ಆಗಮಿಸಲಿರುವ ಕಷ್ಟಗಳನ್ನು ಎದುರಿಸಬೇಕಾಗುವದು. ಅವು ಸಂಪೂರ್ಣವಾಗಿ ಸುರಕ್ಷಿತವಾಗಿ ನೆಲೆಗೊಳ್ಳುವವರೆಗೂ ಅಥವಾ ತಪನದ ಮೂಲಕವಾಗಿ ಸಮರ್ಥವಾದ ಪ್ರಾರಂಭದ ಹಂತವನ್ನು ರೂಪಿಸಬಹುದಾಗಿದೆ.

ತಪ್ಪು–ವಿಶ್ವಾಸವು ಸಹಿತವಾಗಿ, ನಿಧಾನಗತಿಯ(ಮಂದಗತಿಯ)ಲ್ಲಿ ಸಾಗುವ ಮೂಲಕ ಮತ್ತು ಅಂಶಿಕವಾಗಿ ಮಾತ್ರ ಸಮರ್ಪಣೆಗೊಳಿಸಿಕೊಳ್ಳುತ್ತಿದ್ದಾಗ್ಯೂ ಅವರ ಬಲಗಳನ್ನೂ ಮತ್ತು ಅವುಗಳ ಫಲಿತಾಂಶದ ಅಂಶವನ್ನೂ ಅವರು ಹೊಂದುತ್ತಾರೆ. ಇಲ್ಲವಾದಲ್ಲಿ ಅಪರೂಪದಲ್ಲಿ ಅಪರೂಪವೆನ್ನುವಂತೆ ಕೆಲವೇ ಕೆಲವರು ಮಾತ್ರ ಸಾಧನೆಯನ್ನು ಮಾಡುವಂತಾಗುತ್ತಿತ್ತು.

ಇಲ್ಲಿ ನನ್ನ ಅಭಿಪ್ರಾಯವೆಂದರೆ, – ಈ ಆಂತರ್ಯದ ವಿಶ್ವಾಸವೆಂದರೆ ಅದು ಆತ್ಮಿಕ ವಿಶ್ವಾಸವಾಗಿದೆ. ಅಥವಾ ಮುಖ್ಯ ಜೀವವೇ (ಪ್ರಾಣ ಕೇಂದ್ರವೇ)

ಅದರ ಹಿಂದಿದೆ. ಯಾವಾಗ ಮನಸ್ಸೂ ಸಹಿತ ಸಂಶಯಪಡುತ್ತದೆಯೋ ಮತ್ತು ಸೂಕ್ಷ್ಮ ಜೀವಧಾರಕಗಳು ಹತಾಶೆಗೊಳ್ಳುತ್ತವೆಯೋ ಹಾಗೂ ಭೌತಸ್ವರೂಪವೂ ಕುಸಿದು ಬೀಳಲು ಆಶಿಸುತ್ತದೆಯೋ, ತದನಂತದರದಲ್ಲಿ ಅಂದರೆ ಇಂತಹ ಆಘಾತಗಳು ಸಂಪೂರ್ಣವಾಗಿ ಘಟಿಸಿದ ನಂತರದಲ್ಲಿ, ಮತ್ತೆ ಪುನಃ ಅವತರಿಸಿ, ಪಥವನ್ನು ಮತ್ತೆ ಮುಂದುವರೆಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/95–96**

ಇವೆಲ್ಲವೂ (ಮಾತೆಯ ಆಗಮನಕ್ಕಾಗಿ ಇರುವ ಕರೆ, ಅವಳಿಗಾಗಿ ಮಂಡಿಸಲ್ಪಡುತ್ತಿರುವ ಪ್ರಾರ್ಥನೆ) ಮನಸ್ಸಿನ ಕ್ರಿಯೆಗಳಾಗಿವೆ. ಚೇತನದ ಹಂತವು ಮುಕ್ತವಾಗಿದ್ದು, ಅದು ಮಾತೆಯ ಎಡೆಗೆ ಕರೆದೊಯ್ಯುತ್ತದೆ. ಉಳಿದೆಲ್ಲ ಜೀವ–ಸಂಚಲನಗಳಿಂದಲೂ ಮುಕ್ತವಾಗಿರುತ್ತದೆ. ಆ ದೈವದ ಕಡೆಯಿಂದ ಏನನ್ನು ನಿರೀಕ್ಷಿಸುತ್ತೇವೆಯೋ  ಮತ್ತು ಯಾವುದು ಅಲ್ಲಿಂದ ಬರುತ್ತದೆಯೋ ಅದನ್ನು ಸ್ವೀಕರಿಸಲು ಸಮರ್ಥವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/105**

**ಈ ಯೋಗ ಮತ್ತು ಪರಿಪೂರ್ಣ ತತ್ತ್ವ**

ಈ ಯೋಗದಲ್ಲಿ ಈ ಪರಿಪೂರ್ಣ ತತ್ತ್ವವು ಯಾವಾಗಲೂ ತಂತಾನೇ ತೆರೆದುಕೊಂಡಿರುತ್ತದೆ. ಅದು ಆ ದೈವೀ ಪ್ರಭಾವಕ್ಕೆ ತನ್ನನ್ನು ತಾನು ತೆರೆದುಕೊಂಡಿರುತ್ತದೆ. ಅದು ನಿಮ್ಮ ಮೇಲ್ಭಾಗದಲ್ಲಿಯೇ ಇದೆ. ಮತ್ತೆ ಒಮ್ಮೆ ನೀವು ಈ ವಿಷಯವಾಗಿ ಪ್ರಜ್ಞೆಯನ್ನು ಹೊಂದಿದ್ದಲ್ಲಿ, ಆಗ ನೀವು ಅದನ್ನು ಅವತರಣಗೊಳಿಸಿಕೊಳ್ಳಲು ಹಾಗೂ ನಿಮ್ಮಲ್ಲಿ ಅನುಷ್ಠಾನಗೊಳ್ಳಲು ಆಮಂತ್ರಿಸಬಹುದು. ಅದು ಚಿತ್ತದಲ್ಲಿ ಅವತರಣಗೊಂಡು ಮತ್ತು ದೇಹದಲ್ಲಿ ನೆಲೆಗೊಂಡು, ಶಾಂತಿಯಾಗಿ, ಪ್ರಕಾಶವಾಗಿ, ಕಾರ್ಯದ ಹಿಂದಿರುವ ಬಲ(ಶಕ್ತಿ)ವಾಗಿ ಆ ದಿವ್ಯತ್ವವು ರೂಪ ತಳೆಯಲು ಅಥವಾ ಯಾವುದೇ ರೂಪಧಾರಣೇ ಇಲ್ಲದೇನೇ ನೆಲೆಸಿದ್ದು, ಅದೇ "ಆನಂದವಾಗಿರುತ್ತದೆ:" ಇಂತಹ ಚೈತನ್ಯವನ್ನು ಹೊಂದುವದಕ್ಕಿಂತ ಮೊದಲು ಅವನು ಸಂಪೂರ್ಣ ವಿಶ್ವಾಸವನ್ನು ಹೊಂದಬೇಕಾಗಿದೆ, ಅದಕ್ಕಾಗಿ ಮುಕ್ತಗೊಳ್ಳುವ ಅಭೀಪ್ಸೆಯನ್ನು ಹೊಂದಿರ–ಬೇಕಾಗುತ್ತದೆ. ಈ ಅಭೀಪ್ಸೆ ಅಥವಾ ಹಾರ್ದಿಕ ಕರೆ, ಪ್ರಾರ್ಥನೆಗಳೆಲ್ಲವೂ  ಆ

ಏಕದ ಹಲವು ರೂಪಗಳಾಗಿದ್ದು ಮತ್ತು ಅವೆಲ್ಲವೂ ಪರಿಣಾಮಕಾರಿಯಾಗಿಯೇ ಇರುತ್ತವೆ; ನಿಮಗೆ ಯಾವ ರೂಪದಲ್ಲಿ ಬರುತ್ತದೆಯೋ ಅದನ್ನೇ ಸ್ವೀಕರಿಸಬೇಕಾಗುತ್ತದೆ. ಇಲ್ಲವಾದಲ್ಲಿ ನಿಮಗೆ ಯಾವುದು ಸುಲಭ ಗಮ್ಯವೋ ಅದನ್ನು ಆಯ್ಕೆ ಮಾಡಿಕೊಳ್ಳಿ.

ಇನ್ನೊಂದು ದಾರಿ ಎಂದರೆ "ಏಕಾಗ್ರತೆ". ನೀವು ನಿಮ್ಮ ಚೇತನವನ್ನು (ಚೈತನ್ಯವನ್ನು) ನಿಮ್ಮ ಹೃದಯದಲ್ಲಿ ನೆಲೆಸುವಂತೆ ಏಕಾಗ್ರತೆ ಸಾಧಿಸಿ. [ಕೆಲವರು ಅದನ್ನು ತಮ್ಮ ತಲೆಯಲ್ಲಿ (ಬುದ್ಧಿಯಲ್ಲಿ) ಅಥವಾ ಅದಕ್ಕಿಂತ ಮೇಲೆ ಏಕಾಗ್ರತೆಗೊಳಿಸಿಕೊಂಡಿರುತ್ತಾರೆ]. ಆಮೇಲೆ ಮಾತೆಯನ್ನು ಹೃದಯಪೂರ್ವಕವಾಗಿ ಧ್ಯಾನಿಸಿ, ಶ್ರೀಮಾತೆಯು ಅಲ್ಲಿಗೆ ಆಗಮಿಸುವಂತೆ ಧ್ಯಾನಿಸಿ. ಯಾರೇ ಆಗಲಿ ಇದನ್ನಾಗಲೀ ಅಥವಾ ಅದನ್ನಾಗಲೀ ಇಲ್ಲವೇ ಎರಡನ್ನೂ ಸಹಿತ ಬೇರೆ ಬೇರೆ ಸಮಯದಲ್ಲಿ ಮಾಡಬಹುದು. ಒಟ್ಟಿನಲ್ಲಿ ಯಾವುದು ನಿಮಗೆ ಸುಲಭ ಸಾಧ್ಯವೋ ಅಥವಾ ಸ್ವಭಾವಜನ್ಯವಾಗಿ ಬಂದಿರುತ್ತದೆಯೋ ಅಥವಾ ನೀವು ಆ ದಿಸೆಯತ್ತ ಚಲನೆ ಪ್ರಾರಂಭಿಸಿದ ಘಳಿಗೆಯಲ್ಲಿ – ಈ ರೀತಿ ಮಾಡಬಹುದು. ವಿಶೇಷವಾಗಿ, ಅದರಲ್ಲೂ ಪ್ರಾರಂಭಿಕವಾಗಿ ಅತ್ಯಾವಶ್ಯಕವಾಗಿ ಇರಬೇಕಾದ ಸಂಗತಿ ಎಂದರೆ, "ಪ್ರಶಾಂತವಾದ ಮನಸ್ಸು". ಜೊತೆಗೆ ಸಾಧನೆಯ ಸಮಯದಲ್ಲಿ ಬಾಹ್ಯವೆಂದು ಕಂಡು ಬರುವ ಎಲ್ಲ ಚಿಂತನಗಳನ್ನೂ ಮತ್ತು ಚಲನಗಳನ್ನು ತಿರಸ್ಕರಿಸುವ, "ನಿರಾಕರಿಸುವ ಪ್ರವೃತ್ತಿ". ಇಂತಹ ಪ್ರಶಾಂತ ಮನಸ್ಸಿನಲ್ಲಿ (ಚಿತ್ತದಲ್ಲಿ) ಮಾತ್ರವೇ ಅಲ್ಲಿ ಅನುಭವಕ್ಕಾಗಿ ಪ್ರಗತಿದಾಯಕವಾದ ಸಿದ್ಧತೆ ಇರುತ್ತದೆ. ಆದರೆ ನೀವು ಯಾವುದೇ ಕಾರಣಕ್ಕೂ ಅಂದರೆ ಇವೆಲ್ಲವೂ ಒಂದೇ ಸಾರಿ ಸಾಧಿತವಾಗದಿದ್ದರೆ, ಯಾವ ಕಾರಣಕ್ಕೂ ಅಸಹನೆಯನ್ನು ಹೊಂದಬಾರದು. ಮನಸ್ಸಿನಲ್ಲಿ ನೆಲೆಗೊಳ್ಳುವದಕ್ಕೆ, ಪ್ರಶಾಂತಗೊಳ್ಳಲಿಕ್ಕೆ ಅದಕ್ಕೆ ಅದರದೇ ಆದ ನಿಗದಿತವಾದ ಅವಧಿ ಇದೆ; ನೀವು ಚೈತನ್ಯದ ಹಂತ ತಲುಪುವವರೆಗೂ ನೀವು ಆ ಪಥದಲ್ಲಿ ಮುಂದುವರೆಯುತ್ತಿರಬೇಕಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/106**

**ಯಾರೊಬ್ಬರು ತಮ್ಮನ್ನು ತಾವು ಮುಕ್ತಗೊಳಿಸಿಕೊಳ್ಳಲಿ ಅಥವಾ ಇಲ್ಲದಿರಲಿ**

ಯಾರೇ ಆಗಲಿ ತಮ್ಮನ್ನು ತಾವು ಮುಕ್ತಗೊಳಿಸಿಕೊಂಡಲ್ಲಿ ಅಥವಾ ಮುಕ್ತಗೊಳಿಸಿಕೊಳ್ಳದೇ ಇದ್ದಾಗಲೂ ಸಹಿತ, ಇವೆಲ್ಲವೂ ಅವಲಂಬಿತವಾಗಿವೆ. ಈ

ಯೋಗದಲ್ಲಿ ಅಲ್ಲಿ ಘಟಿಸಲ್ಪಡುವ ಪ್ರಭಾವಕ್ಕೆ ಯಾರೇ ಆಗಲಿ ತಮ್ಮನ್ನು ತಾವು ಮುಕ್ತಗೊಳಿಸಿಕೊಂಡಲ್ಲಿ ಅಥವಾ ಇಲ್ಲದಿದ್ದಾಗಲೂ ಸಹಿತ, ಈ ಯೋಗದ ಎಲ್ಲವೂ ಅವಲಂಬಿತವಾಗಿರುತ್ತವೆ. ಒಂದು ವೇಳೆ ಅಭೀಪ್ಸೆಯಲ್ಲಿ ಪ್ರಾಮಾಣಿಕತೆ ತುಂಬಿಕೊಂಡಿದ್ದಲ್ಲಿ ಮತ್ತು ಎಲ್ಲ ಅಡೆ–ತಡೆಗಳನ್ನು ಹೊರತುಪಡಿಸಿ ಆ ಅಧಿಪ್ರಜ್ಞೆಯ ಹಂತದಲ್ಲಿ ಸಹನೆಯೊಂದು ಆಗಮಿಸುವದು. ಆಗ ಅಲ್ಲಿ ಒಂದು ಸಾಕಾರ ರೂಪುಗೊಳ್ಳುತ್ತದೆ. ಇಲ್ಲವೇ ಮತ್ತೊಂದು ರೂಪು ಪಡೆಯುತ್ತದೆ. ಆದರೆ ಇದು ಆಗಮಿಸುವದು ಮಾತ್ರ ಖಚಿತವಾಗಿದೆ. ಇದು ಆಗಮಿಸಲಿಕ್ಕೆ ದೀರ್ಘಾವಧಿಯನ್ನೂ ಬಯಸಬಹುದು ಇಲ್ಲವೇ ಕ್ಷಿಪ್ರಾತಿಕ್ಷಿಪ್ರವಾಗಿಯೂ ಘಟಿಸಬಹುದಾಗಿದೆ. ಒಟ್ಟಿನಲ್ಲಿ ಅದಕ್ಕಾಗಿ ಸನ್ನದ್ಧಗೊಂಡ ಮನಸ್ಸಿನ ಅಥವಾ ಇನ್ನೂ ಸನ್ನದ್ಧಗೊಳ್ಳುತ್ತಿರುವ ಹಂತದ ಮನಸ್ಸಿನ, ಹೃದಯದ ಹಾಗೂ ದೇಹದ ಸ್ಥಿತಿಯನ್ನು ಅವಲಂಬಿಸಿರುತ್ತದೆ;

ಆದ್ದರಿಂದ, ಒಂದು ವೇಳೆ ಯಾರೊಬ್ಬರೂ ಅಂತಹ ಸಹನೆಯನ್ನು ಹೊಂದಿರದೇ ಇದ್ದಲ್ಲಿ, ಆಗ ಪ್ರಾರಂಭಗೊಳ್ಳಲಿಕ್ಕೆ ತೊಂದರೆ ಅನುಭವಿಸುವ ಮೂಲಕ ಪರಿತ್ಯಜಿಸಲ್ಪಡುತ್ತದೆ. ಏಕಾಗ್ರತೆಯನ್ನು ಸಾಧಿಸುವದನ್ನು ಬಿಟ್ಟು ಬೇರೆ ಯಾವ ರೀತಿಯೂ ಇಲ್ಲಿ ಇರುವದಿಲ್ಲ; ಅದರಲ್ಲೂ ಹೃದಯಪೂರ್ವಕವಾಗಿ ಈ ಏಕಾಗ್ರತೆ ಸಾಧಿತವಾಗಬೇಕಾಗಿದೆ. ಅದಕ್ಕಾಗಿ ಮಾತೆಯ ಮೂಲಕ ಲಭ್ಯವಾಗುವ ಶಕ್ತಿ, ಹಾಗೂ ಅವಳ ಅಸ್ತಿತ್ವವನ್ನು ಬಯಸಿ, ಕರೆ ಇಡಬೇಕಾಗುತ್ತದೆ. ಮತ್ತೆ ಅವಳ ಬಲದಿಂದಲೇ ಎಲ್ಲ ಕಾರ್ಯಗಳನ್ನೂ, ಕರ್ಮಗಳನ್ನೂ ಚೇತನವಾಗಿ ರೂಪಾಂತರಗೊಳಿಸಿಕೊಳ್ಳಬೇಕಿದೆ. ಅದಕ್ಕಾಗಿ ಮಸ್ತಿಷ್ಕದಲ್ಲಿ (ಬುದ್ಧಿಯಲ್ಲಿ) ಅಥವಾ ಭ್ರೂಮಧ್ಯದಲ್ಲಿ ಕೇಂದ್ರೀಕರಿಸಿಕೊಳ್ಳಬೇಕು (ಏಕಾಗ್ರತೆಗೊಳಿಸಬೇಕು), ಆದರೆ, ಬಹುತೇಕ ಜನರಿಗೆ ಇದನ್ನು ಪ್ರಾರಂಭಗೊಳಿಸಲಿಕ್ಕೆ ಅತ್ಯಂತ ಕಠಿಣವಾಗಿರುತ್ತದೆ. ಯಾವಾಗ ಮನಸ್ಸು ಪ್ರಶಾಂತವಾಗುತ್ತದೆಯೋ ಮತ್ತು ಏಕಾಗ್ರತೆಯು ಮತ್ತೂ ಮತ್ತೂ ಮತ್ತೂ ಘನಿಷ್ಠವಾಗುತ್ತ ಬಂದಂತೆ, ಅಭೀಪ್ಸೆಯೂ ಸಹಿತ ಅಷ್ಟೇ ಪ್ರಮಾಣದಲ್ಲಿ ತೀವ್ರತೆಯನ್ನು ಹೊಂದಿದಲ್ಲಿ, ಆಗ ಅಲ್ಲಿ 'ವಿಶೇಷಾನುಭವವು' ಪ್ರಾರಂಭಗೊಳ್ಳುವದು. ಹೆಚ್ಚು ಹೆಚ್ಚು ವಿಶ್ವಾಸವು ಅಷ್ಟೇ ತೀವ್ರತೆರನಾದ ಪರಿಣಾಮವನ್ನು ತರುವ ಹಾಗೆ ಇರುತ್ತದೆ. ಆಗ ಉಳಿದೆಲ್ಲಕ್ಕೂ ಯಾರೇ ಆದರೂ ಕೇವಲ ಅವನೋರ್ವನ ಪ್ರಯತ್ನವನ್ನು ಮಾತ್ರವೇ ಅವಲಂಭಿಸಿಕೊಳ್ಳುವ ಹಂತ ಇರುವದಿಲ್ಲ. ಆದರೆ ಆಗ, ಆ ದೈವತ್ವದೊಡನೆ

ಸಂಪರ್ಕ ಸಾಧಿಸುವಲ್ಲಿ ಯಶಸ್ವಿಯಾಗಿರುತ್ತದೆ. ಜೊತೆಗೆ ಶ್ರೀಮಾತೆಯ ಶಕ್ತಿ ಹಾಗೂ ಪ್ರತ್ಯಕ್ಷತೆಯ–ಧಾರಣ ಶಕ್ತಿಯನ್ನು ಸ್ಥಾಪಿಸಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/107**

**ಅಂತರಂಗದೇಕಾಗ್ರತೆಯ ಸಾಧನೆ**

ಸಾಧನೆಯಲ್ಲಿ ಆಂತರ್ಯದೇಕಾಗ್ರತೆಯು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿರುತ್ತದೆ;

(1) ಹೃದಯದಲ್ಲಿ ಪ್ರಜ್ಞೆಯನ್ನು (ಚೈತನ್ಯವನ್ನು) ಸ್ಥಾಪಿಸಿಕೊಳ್ಳುವದು, ಹಾಗೂ ಏಕಾಗ್ರತೆಯಲ್ಲಿ ಚಿಂತನಗಳ ಮೇಲೆ ಚಿತ್ತವನ್ನು ಕೇಂದ್ರೀಕರಿಸುವಿಕೆ, ಶ್ರೀಮಾತೆಯ ಸಂಕೇತ (ಪ್ರತೀಕ) ಅಥವಾ ಹೆಸರಿನ ಮೇಲೆ, ಒಟ್ಟಿನಲ್ಲಿ ಯಾವುದು ನಿಮಗೆ ಅತ್ಯಂತ ಸುಲಭ ಸಾಧ್ಯವೋ ಅದರ ಮೂಲಕ.

(2) ಹಂತಹಂತವಾಗಿ ಮತ್ತು ಪ್ರಗತಿ ಪಥದಲ್ಲಿ ಮನಸ್ಸನ್ನು ಶಾಂತಗೊಳಿಸುವ ಮೂಲಕ ಹೃದಯಸ್ಥವಾದ ಏಕಾಗ್ರತೆಯನ್ನು ಸಾಧಿಸಿಕೊಳ್ಳುವದು.

(3) ಹೃದಯದಲ್ಲಿ ಮಾತೆಯ ಸಾಕ್ಷಾತ್ಕಾರಕ್ಕಾಗಿ ಅಭೀಪ್ಸೆ ಹೊಂದುವದು ಮತ್ತು ಅವಳ ಮನಸ್ಸು, ಜೀವ ಮತ್ತು ಕಾಯಕಗಳ ಮೂಲಕ ನಿಯಂತ್ರಿತನಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/225**

---

**ಸರ್ವಸ್ವವೂ ಆ ದೈವತ್ವದೊಂದಿಗೇ ಘಟಿಸಲ್ಪಟ್ಟಿರುತ್ತದೆ. ಈ ಹೃದಯ, ಪರಿಶುದ್ಧವಾದ ಸ್ವಭಾವ, ಜಾಗ್ರತಿಗೊಂಡ ಅಂತಃಪ್ರಜ್ಞೆ, ಮುಚ್ಚಿರುವ ಗವಸುಗಳನೆಲ್ಲ ತೆಗೆಯುವಿಕೆ... ಎಲ್ಲವೂ. ಒಂದು ವೇಳೆ ಓರ್ವನು ತನ್ನನ್ನು ತಾನೆ ಆ ದೈವತ್ವಕ್ಕೆ ಸಂಪೂರ್ಣ ವಿಶ್ವಾಸದಿಂದ ಹಾಗೂ ಆಸ್ಥೆಯಿಂದ ಸಮರ್ಪಿಸಿಕೊಳ್ಳುತ್ತಿದ್ದಲ್ಲಿ –ಮತ್ತೆ ಒಂದು ವೇಳೆ ಇವೆಲ್ಲವನ್ನೂ ಒಂದೇ ಬಾರಿಗೆ ಮಾಡದೇ ಇದ್ದಾಗ್ಯೂ ಸಹಿತ, ಅದು ಬಹುತೇಕವಾಗಿ ಓರ್ವ ವ್ಯಕ್ತಿಯೂ ಇದೇ ತೆರನಾಗಿ ಕಾರ್ಯಪ್ರವೃತ್ತನಾಗಿರುತ್ತಾನೆ. ಅಂತರಂಗಿಕವಾಗಿ ಈ ರೀತಿಯ ಗಾಢವಾದ ಮಾರ್ಗದರ್ಶನ ಹಾಗೂ ಆಂತರ್ಯದ ಸಹಕಾರ ಸಹಾಯಕವಾಗುವದರ ಮೂಲಕ ಆ ದೈವೀ ಅನುಭವಗಳು ಅಂತರಂಗದಲ್ಲಿ ಉದಿತಗೊಳ್ಳುತ್ತವೆ. ಒಂದು ವೇಳೆ ಕೇವಲ ಪ್ರಶ್ನೆಗಳನ್ನೇ ತುಂಬಿಕೊಂಡ ಮನಸ್ಸು**

**ಇದ್ದಲ್ಲಿ, ಆಗ ಅಲ್ಲಿ ಅಷ್ಟೊಂದು ಕ್ರಿಯಾತ್ಮಕತೆಯು ಉಳಿದಿರುವದಿಲ್ಲ. ಮತ್ತು ಆಗ ನಿಮ್ಮಂತರಂಗದಲ್ಲಿ ಅಭಿವ್ಯಕ್ತಗೊಳ್ಳುತ್ತಿರುವ ಸಮರ್ಪಣೆಗೊಳಿಸಿಕೊಳ್ಳುವ ಇಚ್ಛೆ, ವಿನಮ್ರತೆಯು ಇದು ಖಂಡಿತವಾಗಿಯೂ ಪರಿಪೂರ್ಣವಾಗಿ ಘಟಿಸುವ ಘಟನೆಯಾಗಿರುತ್ತದೆ. ಆಗ ಬೇರೆ ಯಾವುದೇ ತಪಸ್ಸು ಅಥವಾ ಇತರೇ ಬಲಗಳು ಇದಕ್ಕೆ ಅವಶ್ಯಕವಾಗುವದಿಲ್ಲ. ಇದು ಮಾತ್ರ ಏಕೈಕವಾದ ಸಂಗತಿಯಾಗಿರುತ್ತದೆ.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/69 – ಶ್ರೀ ಅರವಿಂದರು**

**ಎರಡು ಪ್ರಮುಖ ಉದಿತ ಸ್ಥಾನಗಳು**

ಇಲ್ಲಿ ಇರುವ ಎರಡು ಅತ್ಯಂತ ಪ್ರಮುಖ ಸಂಗತಿಗಳೆಂದರೆ, ಎಲ್ಲ ಕಡೆಗೂ ಹೃತ್–ಕೇಂದ್ರದ ತೆರೆಯುವಿಕೆ ಮತ್ತು ಮನೋ ಕೇಂದ್ರಗಳು ಪ್ರಾರಂಭಗೊಂಡು ಇವು ಆಧಾರ ಭೂಮಿಕೆಯಲ್ಲಿ ಇದ್ದು ಮತ್ತು ಯಾವಾಗಲೂ ಉನ್ನತ ಹಂತದಲ್ಲಿಯೇ ಇರುತ್ತವೆ. ಚೈತ್ಯ ಪುರುಷನ ಹೃತ್–ಕೇಂದ್ರದ ಉದಿತವು, ಅದೇ ರೀತಿಯಲ್ಲಿ ಅಧಿಮಾನಸದ ಚಿತ್ಕೋಶಗಳ ಉದಿತವು ಮತ್ತೂ ಈ ಚೈತ್ಯಪುರುಷ ಹಾಗೂ ಅಧಿಮಾನಸದ ಮಧ್ಯದ ಬಂಧ–ಸಂಬಂಧವು ಈ "ಸಿದ್ಧಿ"ಯ ಎಡೆಗಿರುವ ಪ್ರಾಮುಖ್ಯವಾದ ಮಾರ್ಗವಾಗಿದೆ.

ಇವುಗಳಲ್ಲಿ ಮೊದಲನೇಯದನ್ನು ಹೃದಯಪೂರ್ವಕವಾದ ಏಕಾಗ್ರತೆಯ ಮೂಲಕ ಸಾಧಿತಗೊಳ್ಳುತ್ತದೆ. ಅದು ನಮ್ಮಲ್ಲಿಯೇ ರೂಪಧಾರಣೆ ಮಾಡಿಕೊಂಡು ಹೃದಯದಲ್ಲಿ ವಾಸಿಸಲು ಆ ದೈವಕ್ಕೆ ಇತ್ತಿರುವ ಆರ್ತ ಕರೆಯಾಗಿರುತ್ತದೆ. ಇನ್ನು ಚೈತ್ಯದ ಮೂಲಕ ಇದೇ ಸ್ವಭಾವವನ್ನು ನಿರ್ದೇಶಿಸಿ ಮುನ್ನಡೆಯನ್ನು ಸಾಧಿಸುವದಾಗಿದೆ. ಅಭೀಪ್ಸೆ, ಪ್ರಾರ್ಥನೆ, ಭಕ್ತಿ, ಪ್ರೇಮ, ಸಮರ್ಪಣೆಗಳೆಲ್ಲವೂ ಸಾಧನಾ ಪಥದಲ್ಲಿ ಸಹಕಾರಿಯಾಗಿ ಪೂರಕವಾಗಿ ಇರುತ್ತವೆ. ಇವೆಲ್ಲವೂ ನಾವು ಸಾಧನಾ ಪಥದಲ್ಲಿ ಯಾವುದನ್ನು ಪರಿತ್ಯಜಿಸಬೇಕೆಂದು ಅಭೀಪ್ಸೆಯನ್ನು ಹೊಂದಿರುತ್ತೆಯೋ ಅಂತಹ ಸ್ಥಿತಿಯನ್ನು ಹೊಂದಿಕೊಂಡು ಬಂದಿರುತ್ತವೆ.

ಇನ್ನು ಎರಡನೆಯ ವಿಧಾನದಲ್ಲಿ ಉದಿತಗೊಳ್ಳುವದೆಂದರೆ, ಪ್ರಜ್ಞೆಯು (ಮೊದಲು ತಲೆಯಲ್ಲಿ [ಬುದ್ಧಿಯಲ್ಲಿ], ಆ ಮೇಲೆ ಅದಕ್ಕೂ ಮೇಲೆ) ಏಕಾಗ್ರತೆಯಲ್ಲಿ ರೂಪುಗೊಂಡಿರುತ್ತದೆ, ಪರಿಣಾಮಕಾರಿಯಾಗಿರುತ್ತದೆ. ಇಲ್ಲಿ ನಿಗದಿತವಾದ ಇಚ್ಛೆಯೊಂದು ಇದ್ದು, ಅಲ್ಲಿ ಆ ದೈವೀ ಶಾಂತಿ, ಶಕ್ತಿ, ಪ್ರಕಾಶ, ಜ್ಞಾನ ಮತ್ತು ಆನಂದಗಳೆಲ್ಲವೂ ಈ ಜೀವಿಯಲ್ಲಿ ನೆಲೆ ನಿಲ್ಲುವಂತೆ ಇಚ್ಛೆ

ಹೊಂದುವದಾಗಿದೆ. ಮೊದಲು ಶಾಂತಿ ಹಾಗೂ ಬಲ ಎರಡೂ ಮೇಳೈಸಿಕೊಂಡು ರೂಪು ಪಡೆದಿರುವದಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/327–28**

**ಭಕ್ತಿ ಹಾಗೂ ಪ್ರೇಮಗಳು ಚೈತ್ಯದ ಸಂವಹನಗಳಾಗಿವೆ.**

ಚೈತ್ಯದ ಸಂವಹನದ ಅಂಶವಾಗಿಯೇ ಭಕ್ತಿ ಹಾಗೂ ಪ್ರೇಮಗಳು ಇರುತ್ತವೆ, ಇವುಗಳೇ ಬಹುತೇಕವಾಗಿ ಆವರಿಸಿಕೊಂಡಿರುತ್ತವೆ. ಚೈತ್ಯದ ರೂಪಾಂತರಣಕ್ಕಾಗಿ ಇರುವ ಅಭೀಪ್ಸೆಯಲ್ಲಿ ನೀವು ಭಕ್ತಿ ಹಾಗೂ ಪ್ರೇಮದ ಅಭೀಪ್ಸೆಯನ್ನೇ ಹೊಂದಿರುತ್ತೀರಿ. ಆದರೆ, ಇದು ನಿಮ್ಮ ಅಭೀಪ್ಸೆಯನ್ನು ಒಂದೆ ದಿಸೆಯತ್ತ ಚಲಿಸುವದನ್ನು– ಅಂದರೆ ವೈಷ್ಣವ ಸಾಧನಾ ಪದ್ಧತಿಯಲ್ಲಿ ಇರುವ ಹಾಗೆ – ಒಂದೇ ದಿಸೆಯತ್ತ ಚಲಿಸುವದನ್ನು ತಡೆಯಲು ಸಾಧ್ಯವಿಲ್ಲ. ಇದಕ್ಕಾಗಿ, ಈ ಯೋಗವು ಹೆಚ್ಚಾಗಿ ವೈಶಾಲ್ಯತೆಯನ್ನು ಹೊಂದಿದ್ದು, ಮತ್ತು ಅದನ್ನು ಒಳಗೊಂಡಿದ್ದು, ಆದರೆ ಅದಕ್ಕೇ ಅದುವು ಸೀಮಿತಗೊಳಿಸಲ್ಪಟ್ಟಿಲ್ಲ. – ವೈಷ್ಣವ ಸಾಧನಾ ಪಥದಲ್ಲಿ ಯಾವುದು ಅವಶ್ಯಕತೆ ಇದೆಯೋ ಅದಕ್ಕೆ ಸೀಮಿತಗೊಳಿಸಲ್ಪಟ್ಟಿಲ್ಲ. ನೀವು ಭೌತಿಕವಾಗಿ ಬೃಂದಾವನವನ್ನು ದರ್ಶಿಸುತ್ತೀರೋ ಇಲ್ಲವೋ ಎನ್ನುವದು ಮುಖ್ಯವಲ್ಲ. ಆದರೆ ಹೃದಯಾಂತರಾಳದಲ್ಲಿ ಪ್ರೇಮ ಮತ್ತು ಭಕ್ತಿಗಳ ಸಮ್ಮಿಲನ ಕಾಣುವದು ಇಲ್ಲಿ ಅವಶ್ಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/362**

ಸಾಧನಾ ಪಥದ ಪ್ರಾರಂಭದಲ್ಲಿ "ವಿಶ್ವಾಸದೊಂದಿಗೆ, ಭಕ್ತಿಯೊಂದಿಗೆ, ಸಮರ್ಪಣೆಯೊಂದಿಗೆ ಮತ್ತು ಪ್ರಾಮಾಣಿಕತೆಯನ್ನು ಹೊಂದಿರುವ ಏಕಾಗ್ರತೆಯನ್ನು" ಸಾಧಿಸುವಲ್ಲಿ, ನೀವು ಈ ಪ್ರಾರಂಭಿಕ ಅವಧಿಯಲ್ಲಿ ಇದಕ್ಕಿಂತ ಹೆಚ್ಚಿನದೇನನ್ನೂ ಮಾಡುವದಿರುವದಿಲ್ಲ. ಇವೆಲ್ಲವೂ ಆ ದೈವೀಚೇತನದ ಮೇಲೆಯೇ ಕೇಂದ್ರೀಕೃತಗೊಂಡಿರಬೇಕು. ಅದಕ್ಕೆ ನೀವು ಪ್ರಾರ್ಥನೆಯನ್ನು ಜೋಡಿಸಿಕೊಳ್ಳಬಹುದು. ಒಂದು ನಾಮರೂಪವನ್ನೂ ಕೊಟ್ಟುಕೊಳ್ಳಬಹುದು. ನಿಮಗೆ ಯಾವುದು ಇಚ್ಛೆಯೋ ಅದನ್ನು ರೂಪಿಸಿಕೊಳ್ಳಬಹುದು.

ಬೌದ್ಧಿಕ ಪ್ರಗತಿಯ ಹಂತದಲ್ಲಿ ಉತ್ತಮ ಗ್ರಂಥಗಳನ್ನು ಓದುವದೂ ಒಂದು ಸಹಾಯಕ ಅಂಶವಾಗಿರುತ್ತದೆ. ಇದು ಮನಸ್ಸನ್ನು ಸಿದ್ಧಗೊಳಿಸುತ್ತದೆ. ಸೂಕ್ತ

ವಾತಾವರಣವನ್ನು ರೂಪುಗೊಳಿಸುತ್ತದೆ. ಒಂದು ವೇಳೆ ವ್ಯಕ್ತಿಯು ಸೂಕ್ಷ್ಮ ಸಂವೇದಿಯಾಗಿದ್ದಲ್ಲಿ, ಆಗ ಸಾಕ್ಷಾತ್ಕಾರದ ಕೆಲವೊಂದು ಮಿಂಚುಚ–ಮಿನಿಗುಗಳನ್ನು ಮಾನಸಿಕ ಸ್ತರದಲ್ಲಿ ರೂಪುಗೊಳ್ಳುತ್ತವೆ. ತದನಂತರದಲ್ಲಿ ಇಂತಹ ಪರಿಕರಗಳ ಉಪಯುಕ್ತತೆಯ ಎಲ್ಲೆ ಮೀರಿ – ಮಿತಿಗೊಳಿಸಿಕೊಂಡು ನಿಮ್ಮಲ್ಲಿ ನೀವೇ ಸೂಕ್ತವಾದ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಬಹುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/63 – ಶ್ರೀ ಅರವಿಂದರು**

## ಪ್ರಚಲಿತ ಜಗತ್ತಿನಲ್ಲಿರುವ ಮಿಥ್ಯಾವಾದದಿಂದ ಮುಕ್ತಿಯ ಮಾರ್ಗ

ಇದಕ್ಕಿರುವ ಒಂದೇ ಒಂದು ಮಾರ್ಗವೆಂದರೆ – ಪ್ರಾರ್ಥನೆ. ಅದೂ ಹೃದದಯಾಂತರಾಳದಿಂದಲೇ ಬರಬೇಕು. ಇಲ್ಲಿ ದೈವೀ ಶಕ್ತಿಯ ಮಧ್ಯಸ್ಥಿಕೆಯು ಮಾತ್ರ ನಮ್ಮನ್ನು ರಕ್ಷಿಸಲು ಸಾಧ್ಯವಿದೆ. ಯಾರೆಲ್ಲ ಈ ವಿಷಯದಲ್ಲಿ ಪ್ರಜ್ಞಾ ಹಂತವನ್ನು ಹೊಂದಿದ್ದಾರೆಯೋ, ಅವರೆಲ್ಲರೂ ಕಡ್ಡಾಯವಾಗಿ ಆ ಪರಮ ಸತ್ಯಕ್ಕೇ ಅಂಟಿಕೊಂಡಿರಲು ಮತ್ತು ಅಪ್ರಮಸತ್ಯದ ಸಲುವಾಗಿಯೇ ಕಾರ್ಯಪ್ರವೃತ್ತರಾಗಿರಲು ನಿರ್ಧರಿಸಿ, ಅದರಂತೆಯೇ ಬದುಕಬೇಕು, ಇಲ್ಲಿ ಯಾವುದೇ ಕಾರಣಕ್ಕೂ ರಾಜೀ ವ್ಯವಸ್ಥೆಗೆ ಅವಕಾಶವೇ ಇರುವದಿಲ್ಲ. ಇದು ಅತ್ಯಾವಶ್ಯಕವಾಗಿದೆ, ಇದೊಂದೇ ಏಕೈಕ ಮಾರ್ಗವಾಗಿದೆ.

ಒಂದು ವೇಳೆ ಘಟನೆಗಳು ತಪ್ಪಾಗಿ ಘಟಿಸುವ ಸಂಭವವಿದ್ದಲ್ಲಿ ಸಹಿತ, ಮತ್ತು ಅವು ತೊಂದರೆದಾಯಕವಾಗಿದ್ದಾಗ್ಯೂ ಸಹಿತ, ಅವು ಅದೇ ರೀತಿಯಲ್ಲಿಯೇ ಇಚ್ಛಿಸುತ್ತಿದ್ದರೂ – ಏಕೆಂದರೆ ಮಿಥ್ಯಾವಾದದ ಪ್ರಚಲಿತ ಸ್ಥಿತಿಯೂ ಅದೇ ಆಗಿರುವದರಿಂದ – ನಾವು ಎಂದಿಗೂ ನಮ್ಮ ದೃಢ ನಿರ್ಧಾರದ ಚಿತ್ತದಿಂದ ಎಂದಿಗೂ ವಿಚಲಿತಗೊಳ್ಳಬಾರದು. ಮತ್ತು ಸತ್ಯಕ್ಕೆ ಅಂಟಿಕೊಂಡು ಮುನ್ನಡೆಯಬೇಕು. ಇದೊಂದೇ ದಾರಿ ಇರುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/372**

---

***ನಮಗೆ ತಿಳಿದಿರುವಂತೆ, ನಾನು ಈಗಾಗಲೇ ಹಲವು ಬಾರಿ ಈ ವಿಷಯವನ್ನು ನಿಮಗೆ ಹೇಳಿಯೂ ಆಗಿದೆ. ಒಟ್ಟಿನಲ್ಲಿ ಎಲ್ಲ ಕಾರ್ಯವೂ ಪ್ರಾರ್ಥನೆಯೇ ಆಗಿರುತ್ತದೆ. ಅದೂ ಈ ದೇಹದ ಮೂಲಕವೇ ಸಲ್ಲಿಸಲ್ಪಡಲಾಗುತ್ತಿದೆ, ಮತ್ತು ಆ ಕಾರ್ಯದಲ್ಲಿ ಇರುವ***

***ನೈಜ ದೃಷ್ಟಿಕೋನವೂ ಆಗಿದೆ. ಇದು ಸದಾ ದಿವ್ಯತ್ವಕ್ಕೇ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವ ವಿಷಯವಾಗಿದೆ.***

*

***ನನಗಿನ್ನೂ ನೆನಪಿನಲ್ಲಿರುವಂತೆ, ಮತ್ತು ಈಗಲೂ ಸಹಿತ ನಾನು ಎಲ್ಲರನ್ನೂ ನನ್ನ ಮಕ್ಕಳೆಂದೇ ವಾತ್ಸಲ್ಯ ತೋರುತ್ತಿದ್ದೇನೆ, ಅವರು ನನಗೆ ಬರೆಯಲಿ ಬಿಡಲಿ, ನಾನು ಮಾತ್ರ ಎಲ್ಲ ಪ್ರಾಮಾಣಿಕ ಪ್ರಾರ್ಥನೆಗಳಿಗೂ ಉತ್ತರಿಸುತ್ತಿದ್ದೇನೆ. ನಾನು ಅದನ್ನು ಬರೆದು ಕಳಿಸಬೇಕೆಂದೇನೂ ಇಲ್ಲ. ಹೀಗಾಗಿ ದುಃಖದ ಗೊಡವೆ ಬೇಡವೇ ಬೇಡ; ಸದಾ ಸಂತೋಷವನ್ನು ಕಾಣಿರಿ.***

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/386; 13/71 – ಶ್ರೀಮಾತೆ**

## ಪ್ರಯತ್ನ ಮತ್ತು ಕೃಪೆ

ನೀವು ಯಾವಾಗಲೂ ಪ್ರಯತ್ನಶೀಲರಾಗಿರಿ. ಆದರೆ ಅದು ಯಾವಾಗಲೂ ದೈವವು ನಿಮ್ಮ ಪ್ರಯತ್ನಕ್ಕೆ ಕೃಪಾದೃಷ್ಟಿಯ ಮೂಲಕ ಫಲಪ್ರದವನ್ನು ಒದಗಿಸಬೇಕು ಎನ್ನುವಂತೆ ಇರಲಿ. ಆಗ ಅಲ್ಲಿ ನಿಮ್ಮ ಸ್ವಯಂ ಅಹಂ–ಬಲವು ಇರುವದಿಲ್ಲ; ಒಂದು ವೇಳೆ ಫಲಿತಾಂಶವು ಪ್ರಾಪ್ತಿಯಾದರೂ ಸಹಿತ, ಅದು ದೈವೀ ಶಕ್ತಿಯಾಗಿಯೇ ಇದ್ದು, ಅದನ್ನು ನೀವು ತುಂಬಿರುವದಿಲ್ಲ. ನಿಮ್ಮ ಪ್ರಶ್ನೆಯು (ಬೇಡಿಕೆಯು) ಸೂಕ್ತವಾಗಿದ್ದರೆ, ಆಗ ಆ ದೈವವು ಅದೇ ರೀತಿಯಲ್ಲಿಯೇ ರೂಪುಗೊಳ್ಳುತ್ತದೆ. ನೈತಿಕವಾಗಿ ಇರಬಹುದಾದ ದೋಷಗಳನ್ನು ನಿರ್ನಾಮ–ಗೊಳಿಸುವ ಸಲುವಾಗಿ ಬೇಡಿಕೊಳ್ಳಲ್ಪಡುವ ಪ್ರಾರ್ಥನೆಗಿಂತ, ಭೌತಿಕವಾಗಿ ಇರುವ ಅಪರಿಪೂರ್ಣತೆಯನ್ನು ತೆಗೆದು ಹಾಕುವಂತೆ ಪ್ರಾರ್ಥನೆ ಸಲ್ಲಿಸುವದೇನೂ ಅಂತಹ ತೊಂದರೆದಾಯಕವಾದುದಲ್ಲ. ನೀವು ಏನನ್ನೇ ಆಶಿಸಿಕೊಳ್ಳಿ, ಅಥವಾ ಯಾವ ತೆರನಾದರೂ ಪ್ರಯತ್ನಪಟ್ಟರೂ ಅದನ್ನು ಅನುಭವದಿಂದಲೇ ಮಾಡಬೇಕು, ನಿಮ್ಮ ಶಕ್ಯತೆಗೆ ಮೀರಿ ಉತ್ತಮವಾಗಿರುವಂತೆ ಪ್ರಯತ್ನಿಸಬೇಕು. ಅದಕ್ಕಾಗಿ ನಿಮ್ಮ ಜ್ಞಾನವನ್ನು ತಿಳಿದುಕೊಂಡು, ಬಳಸಿಕೊಂಡು, ನಿಮ್ಮ ಶಕ್ತಿಗಳನ್ನು ಅದಕ್ಕಿಟ್ಟು, ಕಾರ್ಯ ಮಾಡಬೇಕು. ಪರಿಣಾಮ ಏನೇ ಇರಲಿ, ಅದು ಯಾವಾಗಲೂ ದೈವನಿರ್ಣಿತದಂತೆಯೇ ಇರುತ್ತದೆ.

ಒಂದು ವೇಳೆ ನೀವು ಯೋಗವನ್ನು ಅದಕ್ಕೆ ಆಯ್ಕೆ ಮಾಡಿಕೊಂಡಲ್ಲಿ, ಅದನ್ನೂ ಸಂಪೂರ್ಣ ಸಮರ್ಪಣಾ ಮನೋಭಾವದಿಂದಲೇ ಮಾಡಬೇಕು. ನಾನು ಇದನ್ನೇ ಅಭೀಪ್ಸೆಯಾಗಿಸಿಕೊಂಡಿದ್ದೇನೆ, ನನ್ನ ಅಪರಿಪೂರ್ಣತೆಯನ್ನು ಕಳೆದುಕೊಳ್ಳಲು ಪ್ರಯತ್ನಿಸುತ್ತೇನೆ. ನಾನು ನನ್ನ ಶಕ್ತಿ ಮೀರಿ ಪ್ರಯತ್ನಿಸುವೆ. ಆದರೆ ಫಲಪ್ರಾಪ್ತಿಗಾಗಿ ಮಾತ್ರ, ನನ್ನನ್ನು ನಾನು ಆ ದೇವರ ಹಸ್ತಗಳಲ್ಲಿಯೇ ಇರಿಸಿಕೊಳ್ಳಲು ಬಯಸುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/97**

**ಕೃಪಾ–ಕಟಾಕ್ಷಗಳು**

ಯಾವಾಗ ನೀವು ಒಂದು ನಿರ್ಧರಿತವಾದ ವಾತಾವರಣದಲ್ಲಿ ಇರುತ್ತೀರೋ, ಮತ್ತು ಕೆಲವೊಂದು ಘಟನೆಗಳು ಘಟಿಸುತ್ತವೆಯೋ, ಒಂದೊಮ್ಮೆ ಈ ಘಟನೆಗಳು ನಿಮ್ಮ ಅಭಿಲಾಷೆಯನ್ನು ವಿರೋಧಿಸುತ್ತಿರಬಹುದು, ಅಥವಾ ನಿಮಗೇ ಅತ್ಯುತ್ತಮವೆಂದು ಕಂಡು ಬರುವ ಸಂಭವವೂ ಇರಬಹುದು, ಮತ್ತೆ ಕೆಲವೊಮ್ಮೊಮ್ಮೆ ನಿಮ್ಮಲ್ಲಿ ನೀವೇ ಪಶ್ಚಾತ್ತಾಪ ಪಟ್ಟುಕೊಳ್ಳುವಂತೆಯೂ ಇರಬಹುದು, "ಓ.. ಇದು ಆ ರೀತಯಲ್ಲಿ ಘಟಿಸಿದ್ದರೆ ಎಷ್ಟು ಒಳ್ಳೆಯದಿತ್ತು, ಅದು ಈ ರೀತಿಯಲ್ಲಿ ಘಟಿಸಿದ್ದರೆ ಎಷ್ಟು ಒಳ್ಳೆಯದಿತ್ತು, ಅದೂ ಆ ರೀತಿಯಲ್ಲಿಯೇ ಇರಬೇಕಾಗಿತ್ತು, ಅಥವಾ ಈ ರೀತಿಯಲ್ಲಾದರೂ ಇರಲೇಬೇಕಿತ್ತು ... ಆ ರೀತಿ ಈ ರೀತಿ ಎನ್ನುತ್ತಲೇ ಕಾಲವು ಗತಿಸುತ್ತಲೇ ಸಾಗಿಬಿಡುತ್ತದೆ. ಘಟನೆಗಳು ಘಟಿಸುತ್ತಲೇ ಇರುತ್ತವೆ.

ಒಂದು ವೇಳೆ ಘಟನೆಗಳಿಂದ ಮುಕ್ತರಾದಲ್ಲಿ, ನಿಮ್ಮ ಪ್ರಗತಿ, ಹೆಚ್ಚು ಹೆಚ್ಚಾಗಿ ಪ್ರಜ್ಞಾಪೂರ್ವಕವಾಗುತ್ತ, ಅತ್ಯತ್ತಮವಾಗಿ ಅರ್ಥವಾಗುತ್ತ, ಬರುತ್ತವೆ. ಯಾವಾಗ ನೀವು ಅಂತರಾವಲೋಕನವನ್ನು ಮಾಡಿಕೊಳ್ಳುತ್ತೀರೋ, ಆಗ ಫಲಿತಾಂಶವು ನಿಮಗೆ ಅಚ್ಚರಿದಾಯಕವಾಗಿಯೇ ಗೋಚರಿಸುತ್ತದೆ. ತದನಂತರದಲ್ಲಿ ನಿಮ್ಮಲ್ಲಿಯೇ ನಿಮ್ಮ ಸಲುವಾಗಿ ಒಂದು ಮುಗುಳ್ನಗೆಯೂ ಮೂಡುತ್ತದೆ. ಯಾವುದನ್ನು ನೀವು ತೊಂದರೆದಾಯಕ, ಪ್ರಳಯಕಾರಕ ಘಟನೆಗಳೆಂದು ಕಾಣುತ್ತಿದ್ದಿರೋ, ಅವೇ ಘಟನೆಗಳು ಅಷ್ಟೇ ನಿಖರವಾಗಿ ಈಗ ನಿಮ್ಮ ಅಭ್ಯದಯಕ್ಕಾಗಿಯೇ ಘಟಿಸಲ್ಪಟ್ಟಿವೆ, ಅವು ನಿಮ್ಮ ಪೂರಕವಗಿಯೇ ಇದ್ದವು

ಎನ್ನುವದು ಕಾಣುತ್ತದೆ. ನೀವು ಸ್ವಲ್ಪ ಜಾಣ್ಮೆಯನ್ನು ಹೊಂದಿದ್ದರೂ ಸಾಕು, ಆಗ ನಿಮಗೆ ನೀವೇ ಹೇಳಿಕೊಳ್ಳುವದೇನೆಂದರೆ, "ನಿಜವಾಗಿಯೂ, ಆ ದೈವೀ ಕೃಪೆಯು ಅನಂತಾನಂತವಾಗಿದೆ"

ಆದ್ದರಿಂದ ಯಾವಾಗ ನಿಮಗೆ ಇಂತಹ ಘಟನೆಯು ಸಂಭವಿಸುತ್ತದೆಯೋ, ಅದು ಕೆಲವೊಂದು ಬಾರಿ (ಹಲವಾರು ಬಾರಿ) ಸಂಭವಿಸುತ್ತದೆಯೋ, ಆಗ ನೀವು ಇನ್ನುಳಿದ ಅಂಧಾನುಸರಣೆಯ ಮತ್ತು ಭ್ರಾಂತಿಜನ್ಯವಾಗಿ ಕಾಣುತ್ತಿರುವದರ ಮಧ್ಯೆಯೇ ಈ ದೈವೀ ಕೃಪೆಯು ಎಲ್ಲ ಕಡೆಗೂ ಕಾರ್ಯಪ್ರವೃತ್ತವಾಗಿರುವದನ್ನು ಕಾಣುತ್ತೀರಿ. ಪ್ರತಿಯೊಂದು ಘಟನೆಯೂ, ಪ್ರತಿ ಕ್ಷಣದಲ್ಲಿಯೂ ಅತ್ಯುತ್ತಮವಾಗಿಯೂ ಜರುಗುತ್ತಿದ್ದು, ಅದು ಜಗತ್ತಿನಲ್ಲಿ ಘಟಿಸುವದಾಗಿರುತ್ತದೆ. ನಮ್ಮ ನಿರ್ಬಂಧಿತ ದೃಷ್ಟಿಕೋನವಾಗಿರುವದರಿಂದ ಅಥವಾ ನಮ್ಮನ್ನು ನಾವೇ ನಮ್ಮ ಬಯಕೆಗಳಿಂದ ಅಂಧರನ್ನಾಗಿಸಿಕೊಂಡಿರುವ ರೀತಿಯಲ್ಲಿ ತೋರಿ ಬರುತ್ತಿತ್ತು.

ಒಮ್ಮೆ ಇದನ್ನು ಕಾಣಲು ಪ್ರಾರಂಭಿಸಲಾಯಿತು ಎಂದರೆ, ಅಲ್ಲಿ ವರ್ಣಿಸಲು ಸಾಧ್ಯವಾಗದ ಹಂತದವರೆಗೆ ಪ್ರವೇಶವಾಗಿರುತ್ತದೆ. ಇದರ ಹಿನ್ನೆಲೆಯಲ್ಲಿ, ಆ ದೈವೀ ಕೃಪೆಯ ಕೊಡುಗೆಯು ಇರುವದನ್ನು, ಅದು ಅನಂತಾನಂತವಾಗಿರುವದನ್ನು, ಅದು ಎಲ್ಲವನ್ನೂ ಬಲ್ಲ ಸ್ಥಿತಿಯಲ್ಲಿ ಇರುವದನ್ನೂ, ಸುಸಂಘಟಿತವಾಗಿರುವದನ್ನೂ, ವ್ಯವಸ್ಥೀಕೃತಗೊಂಡಿರುವದನ್ನೂ ಮತ್ತು ಸದಾ ನಮ್ಮನ್ನು ಮುನ್ನಡೆಸುವ ಹಂತದಲ್ಲಿಯೇ ಇರುತ್ತದೆ. ನಾವು ಏನನ್ನೇ ಇಚ್ಛಿಸಲಿ ಅಥವಾ ಬಿಡಲಿ, ಅದು ನಮಗೆ ತಿಳಿದಿದೆಯೋ ಇಲ್ಲವೋ, ಆ ಪರಮೋಚ್ಚ ಗುರಿಯ ಎಡೆಗೆ ಅದೂ ಆ ದೈವದಲ್ಲಿಯೇ ಸಂಯೋಗಗೊಂಡಿದ್ದು, ಮತ್ತು ಆ ದೈವೀ ಪ್ರಮುಖನ ಜಾಗ್ರತಿಯಾಗಿದ್ದು, ಅವನಲ್ಲಿಯೇ ಸಮಸ್ಪಂದಗೊಂಡಿರುತ್ತದೆ. ತದನಂತರದಲ್ಲಿ, ಈ ದೈವೀ ಕೃಪೆಯು ಅಸ್ತಿತ್ವದಲ್ಲಿ ಬದುಕಿ, ಕಾರ್ಯಪ್ರವೃತ್ತವಾಗುತ್ತದೆ. ಅದೂ ಸಂತೋಷಪೂರಿತ, ಅಚ್ಚರಿದಾಯಕ, ಅಗಾಧವಾದ ಬಲದ ಅನುಭವದೊಂದಿಗೆ ಬದುಕುವದರ ಜೊತೆಜೊತೆಗೆ, ಅದೇ ಸಮಯಕ್ಕೆ ಆ ಪ್ರಶಾಂತತೆಯಲ್ಲಿ ವಿಶ್ವಾಸ ಹೊಂದಿ, ಯಾವುದೇ ಘಟನೆಯೂ ಆ ವಿಶ್ವಾಸದಿಂದಲೇ ವಿಚಲಿತಗೊಳ್ಳದಂತೆ ದೀರ್ಘಾವಧಿಯವರೆಗೂ ಇರುತ್ತದೆ.

ಯಾವಾಗ ಓರ್ವನು ಈ ತೆರನಾದ ಪರಿಪೂರ್ಣ ಧಾರಣಕ್ಷಮತೆಯಲ್ಲಿ ಮತ್ತು ಪರಿಪೂರ್ಣ ನಿಷ್ಠಾನುಪಾಲನೆಯಲ್ಲಿ ಇರುತ್ತಾನೆಯೋ, ಆಗ ಜಗತ್ತಿನಲ್ಲಿ ದೈವೀ ಕ್ರಿಯೆಯು, ಯಾವುದು ಈ ದೈವೀ ಕ್ರಿಯೆಯನ್ನು ಪ್ರತಿರೋಧಗೊಳಿಸುತ್ತಿರುವದೋ

ಅದನ್ನು ಕರಗಿಸುತ್ತ ಕರಗಿಸುತ್ತ ಅದು ಪೂರ್ತಿಯಾಗಿ ಕಾಣದಂತೆ ಮಾಡುತ್ತದೆ. ಇದು ದೈವೀ ಕ್ರಮವನ್ನು ರೂಪಿಸುವಲ್ಲಿ ಸಂದರ್ಭೋಚಿತವಾಗಿ ಇದೊಂದು ಅತ್ಯುತ್ತಮ ಸಂಯೋಜನೆಯಾಗಿದ್ದು (ಸಹಯೋಗವಾಗಿದ್ದು), ಅದು ತಾನು ಏನು ಆಶಿಸುತ್ತಿದ್ದೇನೆಯೋ ಎನ್ನುವದೂ ಅರ್ಥವಾಗಿರುತ್ತದೆ. ಅದು ಸರ್ವರ ಚೈತನ್ಯವೂ ಹೌದು. ಅದೇ "ಆವನ" ಇಚ್ಛೆಯು ಆಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/256–57**

---

***ಜಗತ್ತಿನಲ್ಲಿಯ ಅನುಭವಗಳನ್ನು ನೋಡಿದರೆ, ಮಾನವನನ್ನು ಪ್ರತಿಯೊಂದು ಘಟನೆಯೂ ವಿಫಲಗೊಳಿಸುತ್ತಲಿದೆ ಎಂದೆನಿಸುತ್ತದೆ. ಆದರೆ, ದೈವತ್ವವು ಮಾತ್ರ ಎಂದಿಗೂ ಅವನನ್ನು ವಿಫಲಗೊಳಿಸಿಲ್ಲ; ಅದು ಆ ರೀತಿ ಮಾಡುವದೂ ಇಲ್ಲ. ಒಂದು ವೇಳೆ ಅವನು ಸಂಪೂರ್ಣವಾಗಿ ದೈವತ್ವದ ಎಡೆಗೇ ತನ್ನನ್ನು ತಾನು ಸಮರ್ಪಿಸಿಕೊಂಡಿದ್ದಲ್ಲಿ , ಆಗ ಇದು ಸಾಧ್ಯವಾಗುತ್ತದೆ. ನಿಮ್ಮಲ್ಲಿ ಇರುವ ಯಾವುದೆ ಕೆಟ್ಟ ಅಂಶವೂ ನಿಮ್ಮ ಮೇಲೆಯೇ ಈ ರೀತಿ ಎರಗುತ್ತದೆ. ಆ ಕಾರಣದಿಂದಾಗಿಯೇ, ಈ ರೀತಿ ಘಟಿಸಿರುವದಿಲ್ಲ. – ಈ ರೀತಿಯ ಆಘಾತಗಳು ಮಾನವ ಕುಲಕೋಟಿಗೆಲ್ಲಕ್ಕೂ ಆಗಿರುತ್ತದೆ. ಏಕೆಂದರೆ, ಅವರೆಲ್ಲರೂ ತಮ್ಮನ್ನು ತಾವೇ ಅದರಲ್ಲಿ ಕಳೆದುಕೊಂಡಿರುತ್ತಾರೆ. ಏಕೆಂದರೆ, ಅವರೆಲ್ಲ ಅಂತಹ ಹಂಬಲವನ್ನು ಹೊಂದಿದವರಾಗಿರುತ್ತಾರೆ. ಒಂದಾನೊಂದು ವೇಳೆ ಅವರು ಅದನ್ನು ಪಡೆದುಕೊಂಡಿರುವ ಸಂಭವವಿದ್ದಾಗ್ಯೂ ಸಹಿತ, ಅದು ಅವರಿಗೆ ಅಸಂತೃಪ್ತಿದಾಯಕವಾದ ಅಸಂತುಷ್ಟಿಯ ಘಟನಾವಳಿಯಾಗಿರುತ್ತದೆ. ಆದರೆ ಕೇವಲ ಸತ್ಯವು ಮಾತ್ರವೇ ಆ ದಿವ್ಯತ್ವದ ಕಡೆಗೆ ಕರೆದೊಯ್ಯಬಲ್ಲದು.***

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/25 – ಶ್ರೀ ಅರವಿಂದರು**

**ಅವನು ಸರ್ವಾಂತರ್ಯಾಮಿ**

*ನಾನೂ ಒಮ್ಮೊಮ್ಮೆ ಈ ವಿಷಯಕ್ಕಾಗಿ ಆಶ್ಚರ್ಯಪಡುತ್ತೇನೆ. ಅಂತಹ ಏನೋ ಒಂದು ವಿಶೇಷತೆಯು ಅಲ್ಲಿದೆ; ಯಾವಾಗ ಓರ್ವನು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತಾನೆಯೋ, ಯಾವಾಗ ಯಾವುದು ತಪ್ಪು ಎನ್ನುವದನ್ನು ಅರಿತುಕೊಳ್ಳಲು ಸಮರ್ಥನಾಗುತ್ತಾನೋ, ಒಟ್ಟಿನಲ್ಲಿ ನಾನು ಈ ವಿಷಯಕ್ಕೆ ಸದಾ ಅಭಿಪ್ರಾಯ ಹೊಂದುವದೆಂದರೆ, ಯಾರೇ ಆಗಲಿ, ಅತ್ಯಂತ ನಿಖರವಾಗಿ, ಕಠೀಣವಾಗಿ ಲಕ್ಷ್ಯವಿಟ್ಟು*

*ಮತ್ತೆ ತದನಂತರದಲ್ಲಿ ಕೇವಲ ಓರ್ವ ವ್ಯಕ್ತಿಯು ಮಾತ್ರವೇ ಆ ತದುತ್ತರದ ದೀರ್ಘಾವದಿ ದೂರದಲ್ಲಿರುವದನ್ನು ಆಮಂತ್ರಿಸುತ್ತಿರುವದು ಎಷ್ಟು ಸರಿ?"*

ಒಟ್ಟಿನಲ್ಲಿ ಎಲ್ಲವೂ ನಮ್ಮನ್ನೇ ಅವಲಂಬಿಸಿದೆ.!!

ಇದೀಗ ನಾನು "ಅವನನ್ನು" ಸರ್ವತ್ರ ಅನುಭವಿಸುತ್ತಿದ್ದೇನೆ. ಪ್ರತಿ ಘಳಿಗೆ–ಘಳಿಗೆಯಲ್ಲಿ, ಪ್ರತಿ ಘಟನಾ–ಘಟನೆಯಲ್ಲಿ ಸರ್ವ ಕಾಲದಲ್ಲಿಯೂ ... ಅದೂ ಭೌತಿಕ ಸಂಪರ್ಕದಲ್ಲಿಯೇ – ಹೌದು ಅದೊಂದು ಸೂಕ್ಷ್ಮ ಭೌತಿಕವಾದ ಆದರೂ ಭೌತಿಕಾಂಶಗಳನ್ನು ಹೊಂದಿದ ಪ್ರತಿ ವಸ್ತುವಿನಲ್ಲಿಯೂ, ಗಾಳಿಯಲ್ಲಿ, ಜನ ಸಮುದಾಯದಲ್ಲಿ, .. ಅಲ್ಲಿ.. ಇಲ್ಲಿ.. ಈ ರೀತಿಯಲ್ಲಿ (ಎನ್ನುತ್ತ ಶ್ರೀಮಾತೆಯವರು ತಮ್ಮ ಕರಗಳನ್ನು ಮುಖಕ್ಕೆ ಒತ್ತಿಕೊಳ್ಳುತ್ತಾ), ಆ ಮೇಲೆ ಇದು ಇಲ್ಲಿಂದ ನಿರ್ಗಮಿಸುವದಿಲ್ಲ. ನಾನಿದೆಲ್ಲವನ್ನೂ "ಕ್ಷಣದ ಏಕಾಗ್ರತೆಯಲ್ಲಿ" ನೋಡಬಲ್ಲೆ. ಅವನು ಇದ್ದಾನೆ. ಹೌದು ಅವನು ಇಲ್ಲಿ ಇರುತ್ತಾನೆ! ಅಂದರೆ ನಾವು ಅಲ್ಲಿ ಇದ್ದಾನೆಂದು ಚಿಂತನ ನಡೆಸಿದರೆ ಅವನು ಸುದೂರದಲ್ಲಿಯೇ ಇರುತ್ತಾನೆ. ಸ್ವಾಭಾವಿಕವಾಗಿ ನಾವು ಯಾವಾಗ ಎಲ್ಲ ವಲಯದ ಬಗೆಗೆ ಯೋಚಿಸಲು ಪ್ರಾರಂಭಿಸುತ್ತೇವೆಯೋ, ವಿಶ್ವ ಚೈತನ್ಯದ ಎಲ್ಲ ಸ್ತರಗಳನ್ನು ಮತ್ತು ಅದೇ ಅಂತಿಮ ಗುರಿಯೆಂದು, ಅದೇ ತುರೀಯವೆಂದು ಹಾಗೂ ಆ ತುರೀಯದ ಅಂತಿಮ ಬಿಂದುವಾಗಿರುವದನ್ನು ಕುರಿತು ಚಿಂತನೆಗೆ ತೊಡಗಿದಾಗ, ಆಗ ಅದು ದೂರ ..ದೂರ ..ದೂರ ಸುದೂರವಾಗುತ್ತಲೇ ಬರುತ್ತದೆ.

ಆದರೆ ಯಾವಾಗ "ಅವನು" ಸರ್ವಾಂತರ್ಯಾಮಿಯಾಗಿದ್ದಾನೆ ಎಂದುಕೊಳ್ಳುತ್ತೇವೆಯೋ, ಮತ್ತು ನಮ್ಮ ಪರಿಭಾವನೆಯೇ ಅವನನ್ನು ಕಾಣಲು "ಅವನನ್ನು" ಅನುಭವಿಸಲು ಅಡೆತಡೆಗೊಳಿಸುತ್ತದೆ. ಹೀಗಾಗಿ ನಾವು ಈ ರೀತಿಯಾಗಿ ಮಾಡಿಕೊಳ್ಳಬೇಕಾಗಿದೆ (ಎಂದು ಹೇಳುತ್ತ ಶ್ರೀಮಾತೆಯವರು ತಮ್ಮ ಕರಗಳನ್ನು ಅಂತರ್ಮುಖಿಯಾಗಿಸುತ್ತಾರೆ.). ಆ ಸಂಚಲನವು ಈ ರೀತಿ ಮತ್ತು ಆ ರೀತಿಯಲ್ಲಿ (ಎನ್ನುತ್ತಾ ಕರಗಳನ್ನು ಅಂತರ್ಮುಖ–ಬಹಿರ್ಮುಖ ಮುದ್ರೆಯಲ್ಲಿ ತೋರಿಸುತ್ತಾ) ಇರುತ್ತದೆ. ಇದು ಅತ್ಯಂತ ಆಧಾರಭೂತ ಸಂಗತಿಯಾಗಿದೆ. ನೀವು ಈ ಬಹಿರ್ಮುಖದ ರೀತಿಯಲ್ಲಿ ಕ್ರಿಯೆಗಿಳಿದರೆ, ಆಗ ಎಲ್ಲವೂ ಕೃತಕವಾಗಿ, ಕಠಿಣವಾಗಿ, ಶುಷ್ಕವಾಗಿ, ಹುಸಿಯಾಗಿ, ಅಸತ್ಯವಾಗಿರುತ್ತದೆ. ಒಂದು ವೇಳೆ ನೀವು ಅಂತಃರ್ಮುಖದ ವ್ಯವಸ್ಥೆಯಲ್ಲಿ ಕ್ರಿಯೆಗೆ ಇಳಿದರೆ, ಆಗ ಪ್ರತಿಯೊಂದೂ ವಿಶಾಲಗೊಳ್ಳುತ್ತದೆ, ಪ್ರಶಾಂತವಾಗಿರುತ್ತದೆ, ಪ್ರಕಾಶಮಾನವಾಗಿರುತ್ತದೆ, ಶಾಂತತಾ–

ಪೂರ್ಣವಾಗಿರುತ್ತದೆ, ವ್ಯಾಪ್ತವಾಗಿ, ತೋಷಪೂರಿತವಾಗಿರುತ್ತದೆ. ಮತ್ತೆ ಮೇಲಾಗಿ ಇದು ಅತ್ಯಂತ ಸರಳವಾಗಿ (ಮತ್ತೆ ಕರಗಳನ್ನು ವಿನ್ಯಾಸಗೊಳಿಸುತ್ತ) ಹೇಗಿದೆ? ಎಲ್ಲಿದೆ? ಎಂದರೆ ಇದನ್ನು ಗುರುತಿಸಲು ಸಾಧ್ಯವಿಲ್ಲ. ಇದು ಕೇವಲ ಕೇವಲ ಚೈತನ್ಯದ ಚಲನೆಯಾಗಿರುತ್ತದೆ. ಈ ಮೂಲಕ ನೈಜ ಚೈತನ್ಯ ಹಾಗೂ ಹುಸಿಚೈತನ್ಯದ ಮಧ್ಯದ ಅಂತರವು ನಿಖ್ರವಾಗಿ ಗೋಚರಿಸುತ್ತದೆ. ಮತ್ತೆ ಅದೇ ಸಮಯಕ್ಕೆ ನಿಮಗೆ "ಮಹತ್ತರವಾದ ಕಾರ್ಯಗಳಲ್ಲಿ ಅದರಿಂದ ಹೊರಬರಲು ಸಾಧ್ಯವಾಗುವದಿಲ್ಲ. ಇದಕ್ಕಿಂತ ಮೊದಲು, ವ್ಯಕ್ತಿಯೋರ್ವನ ಅಭಿಪ್ರಾಯದ ಪ್ರಕಾರ, ಆ ವ್ಯಕ್ತಿಯು ಅಂತರಂಗಿಕವಾಗಿ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸಿಕೊಂಡು, ಸಮಾವೇಶಗೊಂಡು ಇದ್ದು, ಅದರಿಂದ ಹೊರಬರುವದು ಅತ್ಯಂತ ಮುಖ್ಯವಾಗಿದೆ. ಆದರೆ ಇದೀಗ ಕೆಲವರು ಸ್ವೀಕರಿಸಲು ಒಪ್ಪಿರುವ ಅಭಿಪ್ರಾಯದ, ಅಲ್ಲಿ ತೆಳುವಾದ ಆವರಣದಂತೆ ಕಂಡು ಬಂದರೂ, ಅದು ಬಹಳ ಕಠಿಣವಾಗಿದ್ದು, ಆದರೂ ಮೃದುತನದಿಂದ ಕೂಡಿದೆ, ಬಹುತೇಕ ಬಹುತೇಕವಾಗಿ ಶುಷ್ಕವಾಗಿದೆ, ಬಹಳೇ ತೆಳುವಾದ ಸ್ಥಿತಿಯಲ್ಲಿದೆ, ಕೆಲವೊಂದು ಹೊದಿಕೆಯಿಂದ ಕೂಡಿದೆ. ತದನಂತರದಲ್ಲಿ ಈ ರೀತಿಯಲ್ಲಿಯೇ ಕ್ರಿಯೆಗೆ ಬರುತ್ತದೆ; ಮತ್ತೆ ಕಣ್ಮರೆಯೂ ಆಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/153**

ಇವೆಲ್ಲವುಗಳಿಂದ ಅಸಮಾಧಾನಗೊಳ್ಳುವದಕ್ಕಿಂತ ಮತ್ತು ಹೋರಾಟ ಮಾಡುವದಕ್ಕಿಂತ, ಓರ್ವನು ಸಂಪೂರ್ಣವಾಗಿ ಕಾಯಾ–ವಾಚಾ–ಮನಸಾ ಆ ದೈವವನ್ನು ಕುರಿತು ಪ್ರಾಮಾಣಿಕವಾದ ಪ್ರಾರ್ಥನೆಯನ್ನು ಸಲ್ಲಿಸಿದಲ್ಲಿ, 'ಎಲ್ಲವೂ ನಿನ್ನಿಂದಲೇ ಘಟಿಸಲ್ಪಡುವದು' ಎಂದು ಪ್ರಾರ್ಥಿಸಿದಲ್ಲಿ ಆಗ ಅಲ್ಲಿ ಏನಾದರೊಂದು ಪರಿಹಾರದ ಸಂಭವವು ಇರುವಲ್ಲಿ, ಆಗ ಅದು ಅತ್ಯುತ್ತಮವಾದ ನಿಬಂಧನೆಗಳಲ್ಲಿಯೇ ಅನುಷ್ಠಾನಿಸಲ್ಪಟ್ಟಿರುತ್ತದೆ. ಒಂದು ವೇಳೆ ಪರಿಹಾರವು ಸಾಧ್ಯವಿರದೇ ಹೋದ ಸಂದರ್ಭವಿರುವಲ್ಲಿ ಆಗ ಅದು ಈ ದೇಹದಿಂದಲೇ ಮುಕ್ತಿ ಹೊಂದುವದಕ್ಕೆ ಹಾಗೂ ನಿರ್ದೇಹಿಯಾಗಿಯೇ ಇರುವ ವಿಧಾನವಾಗಿರುತ್ತದೆ. ಇಲ್ಲಿ ಪ್ರಥಮ ನಿಬಂಧನೆಯಲ್ಲಿ, ಆ ದೈವೇಚ್ಛೆಗೆ ಶರಣಾಗುವದು ಅನಿವಾರ್ಯವಾದ ನಿಬಂಧನೆಯಾಗಿದೆ.

ಪ್ರೇಮಾಶಿರ್ವಾದಗಳೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/149** **– ಶ್ರೀಮಾತೆ**

ಪ್ರಾರ್ಥನೆಗಳ ಸಲುವಾಗಿಯೇ, ಪ್ರಾರ್ಥನೆಯ ವಿಷಯಕ್ಕಾಗಲೀ ಮತ್ತು ಅದು ರೂಪಿಸುವ ದೃಷ್ಟಿಕೋನವಾಗಲಿ, ವಿಶೇಷವಾಗಿ ಯಾವುದೇ ಸ್ವಾರ್ಥದ ಲವಶೇಷವಿರದೇ, ಅನ್ಯರ ಸಲುವಾಗಿ ಸಲ್ಲಿಸಲ್ಪಡುವ ಪ್ರಾರ್ಥನೆಯು, ಅದು ತಂತಾನೆ ನಿಮ್ಮನ್ನು ಆ ಊರ್ಧ್ವದ ಶಕ್ತಿಯತ್ತ ಕರೆದೊಯ್ಯುತ್ತದೆ. ಸ್ವತಃ ಅವನ ಪ್ರಾರ್ಥನೆಯಲ್ಲಿ ಆ ವಿಷಯವಾಗಿ ಯಾವುದೇ ಬೇಡಿಕೆಯ ಮತ್ತು ಪರಿಣಾಮದ ಸಂವಹನವಿರದಿದ್ದರೂ ಸಹಿತ – ಕರೆದೊಯ್ಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/367 – ಶ್ರೀ ಅರವಿಂದರು**

ಯಾವಾಗಲೂ ಆ ದೈವೀ ಕೃಪೆಗಾಗಿಯೇ ಪ್ರಾರ್ಥನೆಯು ಸಲ್ಲಿಸಲ್ಪಡುತ್ತಿರಬೇಕು. – ಒಂದು ವೇಳೆ ಸತ್ಯರಕ್ಷೆಯ ರೂಪಾಂತರಣಗೊಳ್ಳುತ್ತಿದ್ದಲ್ಲಿ, ಕೆಲವೇ ಕೆಲವರು ಮಾತ್ರ ಅದರ ಸಮಕ್ಷಮ ನಿಲ್ಲಲು ಸಮರ್ಥರಾಗಿರುತ್ತಾರೆ.

*

"ಆತ್ಮ ಸಮರ್ಪಣೆಯೇ ನಿಜವಾದ ಪ್ರಾರ್ಥನೆ"

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/83, 100 – ಶ್ರೀಮಾತೆ**

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

"ಸ್ಪೆಕ್ಟ್ರಮ್" ವತಿಯಿಂದ ದಿನಾಂಕ 25ನೇ ಮೇ 2019ರ ಶನಿವಾರದಂದು ಡಾ॥ ಬಿ.ಎಸ್. ಗಂಗಾಧರ್, ಡೈರಕ್ಟರ್, ನಿಮ್ಹ್ಯಾನ್ಸ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30ರ ವರೆಗೆ "Yoga and Wellness" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಇತರರು ಹಾಜರಿದ್ದರು.



ನಭೋನೀಲದಾ ಪದ್ಮಸರಸಿನಲಿ ಚಿದ್ಘನದ ಲೀಲೆ–ಛಂದ
ಆತ್ಮಹಂಸವದು ಮಂಧ್ರಸ್ಥಾಯಿಯಲಿ ಅತಿಧವಲಗೊಳಿಸೆ ಸ್ಪಂದ.


**– ಪುಟ್ಟು ಕುಲಕರ್ಣಿ**

(ಶ್ರೀ ಅರವಿಂದರ **'ಸಾವಿತ್ರಿ'**; ದಳ 5 ರೇಣು 3 ಪುಟ 405)

Photo: Imaging Savitri

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026

## ಪ್ರಾರ್ಥನೆಯ ಪಥ



ತಲ್ಲೀಯ ಧ್ಯಾನದಾರೋಹದಲ್ಲಿ ಉತ್ತುಂಗ ತುಂಗದಲ್ಲಿ
ಸುಜ್ಞಾನಘನದ ಘನಸಮಾಧಿಯಾ ನಿರ್ವಾಣದಂಚಿನಲ್ಲಿ
ಏರಲೇರಲೆನೆ ಆರೋಹದಲ್ಲಿ ಚಿಂತನದ ಮಹತಿಯಲ್ಲಿ
ಉದ್ಭೂತಗೊಳದ ಔನ್ನತ್ಯದೆಡೆಗೆ ಸೋಪಾನ ಸರಣಿಯಲ್ಲಿ

ಕಾಲದಾ ಕೊನೆಯ ಶೈಲಶ್ರೇಣಿಗಳು ಸ್ಪರ್ಶವನು ಪಡೆಯಲಿಹವೊ
ಶಾಶ್ವತದ ನಿಯತಿಯಾಕಾಶಗಳನು ತಾವೆಲ್ಲಿ ಹೊಂದಲಿಹವೊ
ಆ ಆತ್ಮ ಪೂರ್ಣ–ಪರಿಪೂರ್ಣದೊಡನೆ ಪರಿಪಕ್ವಗೊಳಲು ಛಂದ
ನಿರ್ವಿಕಲ್ಪದೊಡನೀಗ ಸಂವಾದ ಮತ್ತಿದೋ ಪ್ರಕೃತಿ ಸ್ಪಂದ

– ಪುಟ್ಟು ಕುಲಕರ್ಣಿ
(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 11 ಪುಟ 264)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.